# ಅಧ್ಯಾಯ–೧೨
# ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಾಚೀನ ನಾಗರಿಕತೆಯ ಹೆಗ್ಗುರುತಾದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಗೆ ನಾಡಿನಲ್ಲಿ ಸುದೀರ್ಘ ಪರಂಪರೆ ಇದೆ. ನಾಗರಿಕ ಆಡಳಿತ, ಶಿಕ್ಷಣ ಮುಂತಾದ ವಿವಿಧ ರಂಗಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಮೂಲಕ ರಾಷ್ಟ್ರೀಯ ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪಟ್ಟಣಗಳ ಕುರಿತಾದ ಮಾಹಿತಿ ಲಭಿಸಿದ್ದು, ಆಗಲೂ ಸಹ ವ್ಯವಸ್ಥಿತವಾದ ಪೌರಾಡಳಿತವಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಕಾಲದಲ್ಲಿ ಆಡಳಿತವು ರಾಜರ ಕೈಯಲ್ಲಿ ಕೇಂದ್ರಿಕೃತವಾಗಿದ್ದರೂ, ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮನ್ನಣೆ ಇತ್ತು. ಹಳ್ಳಿ, ಪಟ್ಟಣ ಹಾಗೂ ನಗರ ಸಮುದಾಯಗಳು ಅವಶ್ಯಕತೆಗನುಗುಣವಾಗಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ನಾಗರಿಕ ಅವಶ್ಯಕತೆಗಳನ್ನು ಒದಗಿಸುವುದರ ಜೊತೆಗೆ ಇವು ತಮ್ಮ ಪ್ರದೇಶಗಳ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದ್ದವು. ಅಂದಿನ ಕಾಲದ ರಾಜರು ಈ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದರಲ್ಲದೆ ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನೂ ಒದಗಿಸಿದ್ದರು. ಇಂದಿನ ಪ್ರಜಾಸತ್ತೆ ಮಾದರಿಯ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಹೆಚ್ಚು ಮಾನ್ಯತೆ ಪಡೆಯುತ್ತಿದೆ. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಆಡಳಿತವು, ತುಮಕೂರು ಜಿಲ್ಲೆಯನ್ನೂ ಒಳಗೊಂಡಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೆನಿಸಿದ ಪಂಚಾಯಿತಿ ಅಥವಾ ಶಾಸನ ಬದ್ಧ ಸ್ವಯಂ ಆಡಳಿತ ಹೊಂದಿದ್ದ ಪ್ರಾತಿನಿಧಿಕ ಕೂಟಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ.

ದೇಶದ ಪ್ರತಿ ಹಳ್ಳಿಯೂ ಸಣ್ಣ ಗಣರಾಜ್ಯದಂತೆ (ರಿಪಬ್ಲಿಕ್) ತನ್ನದೇ ಆದ ಸ್ವಾಯತ್ತತೆ ಪಡೆದಿತ್ತು. ಹಳ್ಳಿಯ ಎಲ್ಲಾ ಮುಖ್ಯಸ್ಥರು ಸಮಾವೇಶಗೊಂಡು ಮುಖ್ಯವಾದ ಸ್ಥಳೀಯ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಅಂತಹ ಸಮಾವೇಶ ಅಥವಾ ಸಭೆಗಳ ಹಕ್ಕು ಮತ್ತು ಬಾಧ್ಯತೆಗಳಿಗೆ ಸರ್ಕಾರದ ರಕ್ಷಣೆ ಇದ್ದಿತು.

ಕರ್ನಾಟಕದ ಶಿಲಾಶಾಸನಗಳು ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ. ಊರು ಮತ್ತು ಪಟ್ಟಣಗಳಲ್ಲಿ ವಿವಿಧ ಜಾತಿ, ಕೂಟ ಹಾಗೂ ಬೀದಿಗಳನ್ನು ಪ್ರತಿನಿಧಿಸುವ ಸಭೆಗಳು ನಡೆಯುತ್ತಿದ್ದವು. ಗ್ರಾಮಸಭೆಯನ್ನು ಕೆಲವೊಮ್ಮೆ ಐವತ್ತೊಕ್ಕಲು, ಮೂವತ್ತೊಕ್ಕಲು ಎಂದು ಸಂಖ್ಯಾವಾಚಕದಿಂದ ಕರೆಯಲಾಗುತ್ತಿದ್ದು, ಸಂಖ್ಯೆಯು ಕುಟುಂಬಗಳ ಸಂಖ್ಯಾ ಸೂಚಕವಾಗಿದ್ದವು. ಶಾಸನಗಳಲ್ಲಿ ಕುಣಿಗಲ್–೩೦೦ ಎಂಬ ನಾಡುಗಳ ಉಲ್ಲೇಖ ದೊರೆಯುತ್ತದೆ. ಗ್ರಾಮಗಳ ಗುಂಪನ್ನು ಕಂಪಣ, ನಾಡು, ವಿಷಯ, ವೇಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೇ ಶತಮಾನದಲ್ಲಿ, ‘ನಾಡು”ಒಂದು

ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ನಾಡಿನ ಪ್ರಭುವನ್ನು ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಆಡಳಿತ ವ್ಯವಸ್ಥೆಯು ಅನೇಕ ಹಳ್ಳಿಗಳ ಒಕ್ಕೂಟವಾಗಿದ್ದು, ಅದನ್ನು ನಾಡಸಭೆ ಎಂದು ಕರೆಯಲಾಗುತ್ತಿತ್ತು. ನಾಡಸಭೆಯ ಮುಖ್ಯಸ್ಥ ನಾಡಗೌಡನಾಗಿದ್ದು ಈ ಹುದ್ದೆಯು ಅನುವಂಶಿಕವಾಗಿತ್ತು. ನ್ಯಾಯ ವಿತರಣೆ, ನೀರಾವರಿ ಸೌಲಭ್ಯ ಒದಗಿಸುವುದು ಹಾಗೂ ಸಾಮೂಹಿಕ ಅಭಿವೃದ್ಧಿ–ಕಾರ್ಯ ಕೈಗೊಳ್ಳುವುದು ಈ ಸಭೆಯ ತೀರ್ಮಾನಕ್ಕೆ ಸೇರಿತ್ತು. ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಛತ್ರ, ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳ ನಿರ್ಮಾಣ ಹಾಗೂ ನಿರ್ವಹಣೆ, ಭೂಸಂರಕ್ಷಣೆ, ಕೆರೆ ಕುಂಟೆಗಳ ನಿರ್ಮಾಣ, ವೀರಗಲ್ಲು, ಮಹಾಸತಿ–ಕಲ್ಲುಗಳನ್ನು ನೆಡಿಸುವುದು, ಸಂತ್ರಸ್ತರಿಗೆ ಪರಿಹಾರ ಹಾಗೂ ದೇವಾಲಯಗಳಲ್ಲಿ ನಂದಾದೀಪ ವ್ಯವಸ್ಥೆ ಮುಂತಾದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳು ನಾಡಸಭೆಯ ಜವಾಬ್ದಾರಿಯಾಗಿತ್ತು. ಗ್ರಾಮಮಟ್ಟದಲ್ಲಿ ಗ್ರಾಮಸಭೆಗಳು ರಚನೆಗೊಂಡಿದ್ದು, ಅವೂ ಸಹ ನಾಡಸಭೆಯಂತೆ ಮೇಲಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಜಿಲ್ಲೆಯ ಗ್ರಾಮಗಳನ್ನು ವಾಡಿ, ಹುಂಡಿ, ಹಟ್ಟಿ, ಬೀಡು, ವಾರು, ಕೊಪ್ಪಲು, ಪಳ್ಳಿ, ಪಾಲ ಮುಂತಾಗಿ ಕರೆಯಲಾಗುತ್ತಿತ್ತು. ಗ್ರಾಮಕೂಟಗಳಿಗೆ ಊರ ಹದಿನೆಂಟು ಜಾತಿ, ಊರ ಸಮಸ್ತರು, ಊರ ಒಕ್ಕಲು, ಎಳಮೆ ಮುಂತಾಗಿ ಸಂಬೋಧಿಸಲಾಗುತ್ತಿತ್ತು. ಅವುಗಳಿಗೆ ಅನುವಂಶಿಕ ಮುಖಂಡರು ಇರುತ್ತಿದ್ದು, ಅವು ರಾಜ್ಯದ ಆಡಳಿತ ಹಿಡಿತಕ್ಕೆ ಒಳಪಡದೆ ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಸಭೆಗಳು ಸಾಮಾನ್ಯವಾಗಿ ದೇವಸ್ಥಾನ ಇಲ್ಲವೇ ಮಂಟಪಗಳಲ್ಲಿ ಸೇರುತ್ತಿದ್ದವು. ಮದವಟ್ಟುಗಳನ್ನು ನಿರ್ಮಿಸುವುದು ಹಾಗೂ ಧರ್ಮದ ರಕ್ಷಣೆ, ಸಭೆಗಳ ಹೊಣೆಯಾಗಿತ್ತು. ಈ ಸಭೆಗಳು ಮುಂದೆ ವಿಜಯನಗರ ಅರಸರು, ಹೈದರ್–ಟಿಪ್ಪು ಹಾಗು ಮೈಸೂರು ಅರಸರ ಆಡಳಿತವಿದ್ದಾಗಲೂ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ವಿಜಯನಗರ ಕಾಲದ ಶಾಸನದಲ್ಲಿ ಹತ್ತು ಬೀದಿಗಳ ವರ್ತಕರು ಮತ್ತಿತರರೊಂದಿಗೆ ಅಲ್ಲಿಯ ಹಂಜಮಾನರೂ (ಮುಸಲ್ಮಾನ) ಊರಿನ ಸಭೆಗಳಲ್ಲಿ ಉಪಸ್ಥಿತರಿರುತ್ತಿದ್ದರೆಂದು ಉಲ್ಲೇಖವಿದೆ. ರಾಜಾಡಳಿತವಿದ್ದ ಪ್ರಾಂತಗಳ ಪೈಕಿ ಮೈಸೂರು, ತಿರುವಾಂಕೂರು ಹಾಗೂ ಕೊಚ್ಚಿ ರಾಜ್ಯಗಳಲ್ಲಿ ಮಾತ್ರ ಪುರಸಭಾ ಶಾಸನಗಳನ್ನು ರೂಪಿಸಲಾಗಿ, ಆ ರಾಜ್ಯಗಳಲ್ಲಿ ಪೌರಾಡಳಿತವು ಉಚ್ಛ್ರಾಯ ಸ್ಥಿತಿಯಲ್ಲಿ ಮುಂದುವರಿದದ್ದು ಕಂಡುಬರುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯ ಒಂದೇ ಕಡೆ ವಾಸಿಸುತ್ತಿದ್ದು, ಅಂತಹ ಓಣಿ ಅಥವಾ ಸ್ಥಳವನ್ನು ಅಗ್ರಹಾರಗಳು ಎಂದು ಕರೆಯಲಾಗುತ್ತಿದ್ದು, ಅವೂ ಸಹ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಾಗಿದ್ದವು. ಇವುಗಳ ಆಡಳಿತವನ್ನು ಬ್ರಾಹ್ಮಣ ಮುಖಂಡರು ನೋಡಿಕೊಳ್ಳುತ್ತಿದ್ದರು. ಊರೊಡೆಯ ಪ್ರಮುಖ ಅಧಿಕಾರಿಯಾಗಿದ್ದನು. ಆರನೆಯ ಶತಮಾನದ ಶಾಸನಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ. ಅಗ್ರಹಾರದ ಕೆಲಸ ಕಾರ್ಯಗಳನ್ನು ಗ್ರಾಮ ಕಾರ್ಯವೆಂದೂ ಅವುಗಳ ನೀತಿ ಸಂಹಿತೆಯನ್ನು 'ಸಮಯ', "ಮರ್ಯಾದೆ" ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದ್ದು, ಮಹಾಜನರಿಗೆ ಸರ್ಕಾರ ಪುರಸ್ಕಾರ ನೀಡುತ್ತಿತ್ತು.

ಭಾರತದಲ್ಲಿ ಬ್ರಿಟಿಷ್ ಆಡಳಿತ ಕಾಲದಲ್ಲಿ ಅಂದರೆ ೧೮೬೨ರಷ್ಟು ಹಿಂದೆಯೇ ಮೈಸೂರು ರಾಜ್ಯದ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಪೌರಸಮಿತಿಗಳ ರಚನೆಯಾಗಿತ್ತು. ಮುಂದೆ ೧೮೬೪ರ ಹೊತ್ತಿಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಗೊಂಡವು. ೧೮೮೨ರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಸುಧಾರಣೆ ಬಗೆಗಿನ ಗೊತ್ತುವಳಿ ಹಾಗೂ ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರುಗಳ ಪ್ರಗತಿಪರ ಕಾರ್ಯಕ್ರಮಗಳನ್ನು ಆಧರಿಸಿ ೧೯೦೩ರಲ್ಲಿ ಹೊರಡಿಸಲಾದ 'ದಿ ಮೈಸೂರ್ ರೆಗ್ಯುಲೇಶನ್ ೭" ನ್ನು ೧೯೦೩ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರೂಪುಗೊಂಡವು. ಚುನಾಯಿತ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದಿರುವಂತಹ ನ್ಯೂನತೆಗಳಿಂದಾಗಿ ಸ್ಥಳೀಯ ಮಂಡಳಿಗಳು ನ್ಯಾಯಯುತವಾಗಿ ಪಾತ್ರವಹಿಸುವಲ್ಲಿ ವಿಫಲಗೊಂಡವು. ಸ್ವಾತಂತ್ರ್ಯಾನಂತರ ಈ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ೧೯೫೧ರ ಅಧಿನಿಯಮ, ಮತ್ತು ೧೯೮೩ರ ಹೊಸ ಪಂಚಾಯತ್‌ರಾಜ್ ಕಾನೂನುಗಳ ಮೂಲಕ ಸರ್ಕಾರವು ಸ್ವಯಮಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವಲ್ಲಿ ಯಶಸ್ವಿಯಾಗಿದೆ.

**ನಾಡು, ನಾಡಸಭೆ**

ಶಾಸನಗಳಲ್ಲಿ 'ನಾಡು" ಮತ್ತು ಮಹಾನಾಡಿನ ಬಗ್ಗೆ ಉಲ್ಲೇಖಗಳಿದ್ದು ಹತ್ತನೇ ಶತಮಾನದ ಮಧ್ಯ ಭಾಗದಲ್ಲಿ 'ನಾಡು', ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಒಂದು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಯಾಗಿ ರೂಪಗೊಂಡ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ನಾಡು ಹಲವಾರು ಗ್ರಾಮಗಳ ಗುಂಪಾಗಿದ್ದು, ಅದನ್ನು ಕಂಪಣ, ಸ್ಥಾನ, ವೇಂಟೆ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇಂತಹ ನಾಡಿನ ಮುಖ್ಯಾಧಿಕಾರಿ (ಮುಖ್ಯಸ್ಥ) ಯನ್ನು ಗೌಂಡಪ್ರಭು, ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಗೌಡ ಅಥವಾ ನಾಡಗೌಂಡ ಹುದ್ದೆಯು ಅನುವಂಶಿಕವಾಗಿತ್ತು.

ಹಳ್ಳಿಗಳ ಒಕ್ಕೂಟದಿಂದಾದ ಈ ಸಭೆಯನ್ನು ನಾಡಸಭೆ ಎಂದು ಕರೆಯುತ್ತಿದ್ದರು. ಶಾನುಭೋಗರನ್ನು ನಾಡಸಭೆ ಆಯ್ಕೆ ಮಾಡುತ್ತಿತ್ತು. ದೇವಾಲಯಗಳಲ್ಲಿ ನಂದಾದೀಪ, ಅಗ್ಗಿಷ್ಟಿಕೆ ಮುಂತಾದ ಸೇವೆಗಳನ್ನು ನಾಡಸಭೆ ಏರ್ಪಡಿಸುತ್ತಿತ್ತು. ಈ ಸಭೆಗಳನ್ನು ಇಂದಿನ ತಾಲೂಕು ಇಲ್ಲವೆ ಮಂಡಲ ಪಂಚಾಯಿತಿಗಳಿಗೆ ಹೋಲಿಸಬಹುದಾಗಿದೆ. ಸಭೆಯು ಹತ್ತು ಹಲವು ವರ್ಗದ ಜನರನ್ನೊಳಗೊಂಡಿದ್ದಿತು. ನಾಡಸಭೆಯ ಪ್ರಮುಖ ಕರ್ತವ್ಯಗಳಲ್ಲಿ ನ್ಯಾಯ ನಿರ್ಣಯ, ದೇಗುಲಗಳ ನಿರ್ಮಾಣ, ನೀರಾವರಿ ಸೌಲಭ್ಯ ಹಾಗೂ ಇನ್ನಿತರ ಸಾಮೂಹಿಕ ಅಭಿವೃದ್ಧಿ ಕಾರ್ಯಗಳು ಸೇರಿರುತ್ತಿದ್ದವು. ಅರವಟ್ಟಿಗೆ ನಡೆಸುವುದು, ವೀರಗಲ್ಲು, ಮಹಾಸತಿಗಲ್ಲು ನೆಡೆಸುವುದು, ಸುಂಕದಕಟ್ಟೆಗಳ ನಿರ್ಮಾಣ, ಭೂ ಹಗರಣ ಬಗೆಹರಿಸುವುದು, ಮುಂತಾದ ಇನ್ನಿತರ ಕರ್ತವ್ಯಗಳು ಸಹಾ ನಾಡಸಭೆಯಿಂದ ನಿರ್ವಹಿಸಲ್ಪಡುತ್ತಿದ್ದವು. ನಾಡಸಭೆ ಮತ್ತು ಪಟ್ಟಣಸಭೆ, ನಗರಸಭೆ ಇಲ್ಲವೆ ನಗರ ವ್ಯಾಪಾರಿ ಸಭೆಗಳ ನಡುವೆ ಮಧುರವಾದ ಹೊಂದಾಣಿಕೆ ಇತ್ತು. ಎರಡೂ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇವು ಆಗಾಗ್ಗೆ ಸಭೆ ಸೇರಿ ತಮ್ಮ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳುತ್ತಿದ್ದು, ಆ ಭಾಗದ ಜನರ ಹಿತಾಸಕ್ತಿಗೆ ಅನುಕೂಲವಾಗುವಂತೆ ಆಡಳಿತ ನಿರ್ವಹಿಸುತ್ತಿದ್ದವು.

**ಮಹಾನಾಡು**

ಹಲವಾರು ನಾಡುಗಳು ಹಾಗೂ ನಗರ ಪ್ರದೇಶಗಳನ್ನೊಳಗೊಂಡ ವಿಸ್ತೃತವಾದ ಸ್ವಯಮಾಡಳಿತ ಸಂಸ್ಥೆಯನ್ನು 'ಮಹಾನಾಡು"ಎಂದು ಕರೆಯಲಾಗುತ್ತಿತ್ತು. ಅವು ಸುಮಾರು ೧೨ ಹಾಗೂ ೧೩ನೇ ಶತಮಾನದಿಂದ ಕಾರ್ಯರೂಪಕ್ಕೆ ಬಂದಿದ್ದು ತಿಳಿದುಬರುತ್ತದೆ. ಮಹಾನಾಡುಗಳನ್ನು ಈಗಿನ ಜಿಲ್ಲಾ ಪರಿಷತ್ತು ಇಲ್ಲವೆ ಜಿಲ್ಲಾ ಪಂಚಾಯತ್ ಸಭೆಗೆ ಹೋಲಿಸಬಹುದಾಗಿದೆ. ಮಹಾನಾಡನ್ನು ಪದಿನಾಡು (ಹತ್ತು ನಾಡುಗಳ ಒಕ್ಕೂಟ) ಮತ್ತು ಪದಿನಾಲ್ಕುನಾಡು (ಹದಿನಾಲ್ಕು ನಾಡು) ಎಂದು ಸಂಖ್ಯಾಸೂಚಕದಿಂದ ಕರೆಯಲಾಗುತ್ತಿತ್ತು. ಈ ಮಹಾನಾಡುಗಳ ಸಭೆಗಳು ನಾಡಸಭೆಗಳಂತೆ ಆಗಾಗ್ಗೆ ಸೇರದೆ (ಅಪರೂಪವಾಗಿ) ವಿರಳವಾಗಿ ಸೇರುತ್ತಿದ್ದುದ್ದು ತಿಳಿದುಬರುತ್ತದೆ. ಈ ಸಭೆಗಳಿಗೆ ಆಡಳಿತ ಹಾಗೂ ಹೊಣೆಗಾರಿಕೆಯ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರ ಪ್ರತಿನಿಧಿಗಳು, ವೃತ್ತಿಪರ ಸಂಘಟನೆಗಳ ಸದಸ್ಯರು, ರಾಜಪ್ರತಿನಿಧಿಗಳು ಹಾಗೂ ಆ ಪ್ರದೇಶದ ಜನಸಾಮಾನ್ಯರಿಂದ ತುಂಬಿರುತ್ತಿತ್ತು. ಮಹಾನಾಡುಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೇಲೆ ತಮ್ಮ ಪ್ರಭಾವ ಬೀರಬಲ್ಲವಾಗಿದ್ದವು. ಇವು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿಯ ನೀರಾವರಿ ಸೌಲಭ್ಯ, ನ್ಯಾಯ ವ್ಯವಸ್ಥೆ, ತೆರಿಗೆ ವಿಧಿಸುವಿಕೆ ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಮಾಧಿಕಾರ ಹಾಗೂ ಸ್ವಾವಲಂಬನೆ ಹೊಂದಿದ್ದು, ಪ್ರಭುತ್ವವೂ ಈ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿತ್ತು.

**ಪೌರಾಡಳಿತ**

ಗಂಗರ ಕಾಲದಲ್ಲಿ ಅವರ ರಾಜಾಡಳಿತಕ್ಕೆ ಒಳಪಟ್ಟ ಪಟ್ಟಣಗಳಲ್ಲಿ ಪೌರಸಭೆಗಳಿದ್ದವೆಂದು ಹಾಗೂ ಪಟ್ಟಣಗಳ ನಿರ್ಮಾಣ, ನಾಗರಿಕ ಸೌಲಭ್ಯ ಧರ್ಮಸತ್ರಗಳ ನಿರ್ವಹಣೆ ಮುಂತಾದ ಪ್ರಮುಖ ಕಾರ್ಯಗಳನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವರ್ತಕರದೇ ಪ್ರಾಧಾನ್ಯತೆ ಇರುತ್ತಿದ್ದು, ಗಾಣಿಗರು, ಕುಂಬಾರರು, ಕಾರ್ಮಿಕರು, ಮೇದರು, ಪಂಚಮರು ಹಾಗೂ ಲೇವಾದೇವಿದಾರರೂ ಇವರೊಂದಿಗೆ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲಾ ೧೮ ಪ್ರಕೃತಿಯ (ಜಾತಿಯ)ವರ ಪ್ರಾತಿನಿಧ್ಯ ಪಟ್ಟಣಸಭೆಗಳಲ್ಲಿ ಇರುತ್ತಿದ್ದ ಬಗ್ಗೆ ಶಾಸನಗಳಲ್ಲಿ ದಾಖಲೆ ದೊರೆಯುತ್ತದೆ. ಪೌರಾಡಳಿತ ಸಭೆಯ ಸಂವಿಧಾನಕ್ಕೆ 'ಆಚಾರ ವ್ಯವಸ್ಥೆ' ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗಸಂಸ್ಥೆಗಳ ಬಗ್ಗೆಯು ಶಾಸನಗಳಲ್ಲಿ ಪ್ರಸ್ತಾಪವಿದೆ.

ಮಧ್ಯಕಾಲೀನ ಯುಗದಲ್ಲಿ ಪ್ರಾರಂಭಗೊಂಡ ಪೌರಾಡಳಿತವು ಗ್ರಾಮದ ಆಡಳಿತಕ್ಕಿಂತ ಸ್ವಲ್ಪ ಭಿನ್ನವಾಗಿದ್ದು ವೈವಿಧ್ಯಮಯವಾಗಿತ್ತು. ಪೌರಸಭೆಗಳಿಗೆ ಸರ್ಕಾರ (ರಾಜರಿಂದ) ದಿಂದ ನಿಯುಕ್ತನಾದ 'ತಳವಾರ' ನೆಂಬ ಅಧಿಕಾರಿ ಇರುತ್ತಿದ್ದನು. ಪಟ್ಟಣದ ನಾಗರಿಕರ ಆಸ್ತಿಪಾಸ್ತಿ ರಕ್ಷಣೆ ಅವನ ಕೆಲಸವಾಗಿತ್ತು. ಪೌರಸಭೆಗಳಲ್ಲಿ ಪೌರಾಧ್ಯಕ್ಷ, ಸೇನಭೋವ(ಶಾನುಭೋಗ), ಮಣಿಗಾರ, ಮುಮಗಿಗಳಲ್ಲದೆ ವ್ಯಾಪಾರಿ ಸಂಘಗಳ ಪ್ರತಿನಿಧಿಗಳೂ ಇರುತ್ತಿದ್ದರು. ಪೌರಸಭೆಗಳು ಪಟ್ಟಣದಲ್ಲಿಯ ಮನೆಗಳು, ಎಣ್ಣೆಗಾಣ ವಿವಿಧ ಕಸಬುಗಳಲ್ಲಿ ನಿರತರಾದವರ ಮೇಲೆ ಹಾಗೂ ವ್ಯಾಪಾರ ಮಳಿಗೆದಾರರ ಮೇಲೆ ತೆರಿಗೆ ವಿಧಿಸುತ್ತಿದ್ದು, ಬ್ರಾಹ್ಮಣರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ವಾಸದ ಮನೆಗಳು ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಬಿಕ್ಕಟ್ಟು ಅಥವಾ ವ್ಯಾಜ್ಯಗಳನ್ನು ಸಭೆ ಬಗೆಹರಿಸುತ್ತಿತ್ತು.

ಬೆಲೆ ನಿಯಂತ್ರಣ, ತೆರಿಗೆ ನಿರ್ವಹಣೆ, ಬೀದಿ ಹಾಗೂ ಮನೆಗಳ ನೈರ್ಮಲ್ಯ ಕಾಪಾಡುವುದು, ಪಟ್ಟಣಕ್ಕೆ ಬಂದು ಹೋಗುವವರ ಲೆಕ್ಕ ಇಡುವುದು ಹಾಗೂ ರಾಜನಿಗೆ ಮೇಲಿನ ಎಲ್ಲಾ ಜವಾಬ್ದಾರಿಗಳ ನಿರ್ವಹಣೆಯ ವರದಿ ಒಪ್ಪಿಸುವುದು ಸಭೆಯ ಕರ್ತವ್ಯಗಳಾಗಿತ್ತು. ಪೌರಸಭೆಗಳು ಹೆಚ್ಚಿನ ಸ್ವಯಮಾಧಿಕಾರ ಹೊಂದಿದ್ದು ರಾಜನು ಈ ಸಭೆಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿದ್ದನು.

## ಆಧುನಿಕ ಕಾಲದ ಸ್ವಯಂ ಆಡಳಿತ ವ್ಯವಸ್ಥೆ

ಬ್ರಿಟಿಷ್ ಆಡಳಿತ ಕಾಲದಲ್ಲಿ ಪೌರಸಮಿತಿಗಳು ರಚನೆಗೊಂಡವು. ೧೮೬೪ರಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಯಾದ ಬಗ್ಗೆ ದಾಖಲೆಗಳಿವೆ. ೧೯೦೬ರ ಪುರಸಭೆಗಳ ೭ನೆಯ ಅಧಿನಿಯಮದ ಪ್ರಕಾರ ಹಲವು ಪುರಸಭೆಗಳು ರೂಪುಗೊಂಡವು. ಆದರೆ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದ್ದರಿಂದ ಸ್ಥಳೀಯ ಮಂಡಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲಗೊಂಡವು.

ಈ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕಾಗಿ ೧೯೧೪ರಲ್ಲಿ ಮೈಸೂರು ಸರ್ಕಾರವು ಎರಡು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ, ೧. ಎಂ.ಕಾಂತರಾಜ ಅರಸು ಅಧ್ಯಕ್ಷತೆಯ 'ಸ್ಥಳೀಯ ಸ್ವಯಮಾಧಿಕಾರ ಸಮಿತಿ' ಮತ್ತು ೨. ದಿವಾನ್ ಬಹದ್ದೂರ್ ಸಿ.ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯ ಸ್ಥಳೀಯ ಹಣಕಾಸು ಸಮಿತಿ. ಸ್ಥಳೀಯ ಮಂಡಳಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಈ ಸಮಿತಿಗಳು ಪರಿಶೀಲಿಸಬೇಕಾಗಿತ್ತು. ಎಲ್ಲ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕೆಂದೂ ಹಾಗೂ ತಾಲೂಕು ಮಂಡಳಿಗಳಿಗೆ ಮುಕ್ತ ಅಧಿಕಾರವಿರಬೇಕೆಂದೂ ಆ ಸಮಿತಿಗಳು ಶಿಫಾರಸ್ಸು ಮಾಡಿದ್ದವು. ೧೯೦೬ರ ಪುರಸಭಾ ನಿಯಮಗಳಿಗೆ ತಿದ್ದುಪಡಿ ಮಾಡುವ ನೂತನ ಮಸೂದೆಯನ್ನು ೧೯೧೭ನೇಯ ಜೂನ್ ೨೯ರಂದು ಮಂಡಿಸಲಾಯಿತು. ೧೯೧೮ರ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮ ಪಂಚಾಯಿತಿಗಳ ೬ನೆಯ ಅಧಿನಿಯಮವು, ಎಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಿಸಿದ ಕಾನೂನನ್ನು ಪುನರ್ ರೂಪಿಸಿತಲ್ಲದೆ, ಹೆಚ್ಚು ಅಧಿಕಾರ ಹೊಂದಿದ ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಅವಕಾಶವಿದ್ದಿತು. ಹೀಗೆ ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾದ ಸ್ವಯಮಾಡಳಿತ ಸಂಸ್ಥೆಗಳು ಸ್ಥಾಪಿತವಾದವು. ೧೯೧೮ರ ಅಧಿನಿಯಮದ ಪ್ರಕಾರ ತಾಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ವಿವಿಧ ಜನಾಂಗಗಳಿಗೆ ಪ್ರಾತಿನಿಧ್ಯ ಒದಗಿಸುವ ನಿಯಮಗಳನ್ನು ರೂಪಿಸಲಾಯಿತು. ದೊಡ್ಡ ಮತ್ತು ಸಣ್ಣ ಪೌರ ಮಂಡಳಿಗಳಿಗೆ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಕೊಡಲಾಯಿತು. ಜಿಲ್ಲಾ ಮತ್ತು ತಾಲೂಕು ಸಮಿತಿಗಳು ನಿರ್ವಹಿಸುತ್ತಿದ್ದ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮಂಡಳಿಗಳೂ ಪದನಿಮಿತ್ತ ಉಪಾಧ್ಯಕ್ಷರನ್ನು ಹೊಂದಿದ್ದವು. ನಗರ ಮತ್ತು ಪುರಸಭೆಗಳಿಗೆ ಅಧ್ಯಕ್ಷರು ಆಯ್ಕೆಯಾದ್ದರಿಂದ ಜಿಲ್ಲಾಧಿಕಾರಿಗಳು ಅವುಗಳ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟರು. ಕ್ರಮೇಣ ಅಧಿಕಾರವನ್ನು ವಿಕೇಂದ್ರಿಕರಣಗೊಳಿಸಬೇಕೆಂಬ ಬ್ರಿಟೀಷರ ಅಖಿಲ ಭಾರತ ಧೋರಣೆಯಂತೆ ಸರ್ಕಾರದ ಹತೋಟಿಯನ್ನು ಇನ್ನಷ್ಟು ಸಡಿಲಗೊಳಿಸಿ, ಮಂಡಳಿಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸಲಾಯಿತಲ್ಲದೆ ಕೆಲವು ಆಯ್ದ ಮಂಡಳಿಗಳಿಗೆ ಪ್ರಾಥಮಿಕ ಶಿಕ್ಷಣ ನಿರ್ವಹಿಸುವ ಅಧಿಕಾರ ವಹಿಸಲಾಯಿತು.

೧೯೨೧ರ ಮೈಸೂರು ಸ್ಥಳೀಯ ಬೋರ್ಡುಗಳು ಮತ್ತು ಗ್ರಾಮಪಂಚಾಯಿತಿಗಳ ತಿದ್ದುಪಡಿ ನಿಬಂಧನೆಯ ಪ್ರಕಾರ, ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನ ಕೊಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಗಮನಕೊಟ್ಟು ಅದನ್ನು ಜಿಲ್ಲಾ ಮಂಡಳಿಗಳ ಆಡಳಿತ ವ್ಯಾಪ್ತಿಗೆ ತರಲಾಯಿತು. ಮಂಡಳಿಗೆ ಶಿಕ್ಷಣ ಕರವನ್ನು ವಿಧಿಸಲು ಅಧಿಕಾರವಿತ್ತು.

## ಪಂಚಾಯಿತಿಗಳ ರಚನೆ

ಹಲವು ಗ್ರಾಮಗಳ ಗುಂಪಿಗೆ ಒಂದರಂತೆ ೧೯೧೯ರಲ್ಲಿ ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕ ಸಂಪನ್ಮೂಲಗಳಿದ್ದು ಅವುಗಳ ಆಡಳಿತಕ್ಕೆ ನಾಮಕರಣಗೊಂಡ ಅಧ್ಯಕ್ಷರಿದ್ದರು. ಅವುಗಳ ಪ್ರಗತಿ ಸಮಾಧಾನಕರವಾಗಿದ್ದರೆ ಚುನಾವಣೆಯ ಹಕ್ಕನ್ನು ಕೊಡಲಾಗುತ್ತಿತ್ತು. ಆಯ್ದ ಕೆಲವು ತಾಲೂಕು ಪಂಚಾಯತ್‌ಗಳಿಗೆ ನ್ಯಾಯ ಪಂಚಾಯಿತಿ ನಿಯಮ ಹಾಗೂ ಅರಣ್ಯ ಪಂಚಾಯಿತಿ ನಿಯಮಗಳ ಪ್ರಕಾರ ಅಧಿಕಾರ ವಹಿಸಲಾಯಿತಲ್ಲದೆ, ಮುಜರಾಯಿ ಸಂಸ್ಥೆಗಳ ಮೇಲಿನ ಹತೋಟಿ ಮತ್ತು ಗ್ರಾಮಗಳ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಯನ್ನೂ ವರ್ಗಾಯಿಸಲಾಯಿತು. ಪಂಚಾಯಿತಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ಹಾಗೂ ಹತೋಟಿಯ ಅಧಿಕಾರವನ್ನು ಅಮಲ್ದಾರ್ (ತಹಸೀಲ್ದಾರ್) ಅವರಿಗೆ ನೀಡಲಾಯಿತು. ಈ ಕ್ರಮದಿಂದಾಗಿ ಜಿಲ್ಲಾ, ತಾಲೂಕು, ಅಂತರ-ತಾಲೂಕು ಮತ್ತು

ಅಂತರ-ಗ್ರಾಮ ಸೌಲಭ್ಯಗಳ ಮೇಲೆ ಅಂದರೆ ನೈರ್ಮಲ್ಯೀಕರಣ, ಸಂಪರ್ಕವ್ಯವಸ್ಥೆ, ವೈದ್ಯಕೀಯ, ಶಿಕ್ಷಣ, ಮುಂತಾದ ಎಲ್ಲಾ ಸೌಲಭ್ಯಗಳನ್ನು ನೀಡಲು ಜಿಲ್ಲಾ ಮಂಡಳಿಗಳಿಗೆ ಸಂಪೂರ್ಣ ಅಧಿಕಾರ ದೊರಕಿದಂತಾಯಿತು. ತಾಲೂಕು ಮಂಡಳಿಗಳನ್ನು ರದ್ದುಗೊಳಿಸಿದ್ದರಿಂದ ೧೯೨೭ರ ಫೆಬ್ರವರಿ ಒಂದರಿಂದ ಜಿಲ್ಲಾ ಮಂಡಳಿಗಳನ್ನು ಪುನರ್‌ರಚಿಸಲಾಯಿತು. ೧೯೨೮-೨೯ರಲ್ಲಿ ಪುರಸಭಾ ನಿಯಮವನ್ನು ತಿದ್ದುಪಡಿಗೊಳಿಸಿ, ಮಹಿಳೆಯರು ಪುರಸಭೆಗಳ ಸದಸ್ಯರಾಗುವುದಕ್ಕೆ ಅವಕಾಶ ಕಲ್ಪಿಸಲಾಯಿತು. ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ಹತೋಟಿ ಮತ್ತು ಹಣಕಾಸಿನ ಹೊಣೆಯನ್ನು ಸ್ಥಳೀಯ ಮಂಡಳಿಗಳಿಗೆ ವಹಿಸುವ ಮುಖ್ಯ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣ ಅಧಿನಿಯಮವನ್ನು ೧೯೩೦ರಲ್ಲಿ ಅಂಗೀಕರಿಸಿ, ೧೯೩೧ನೇ ಜುಲೈ ಒಂದರಿಂದ ಜಾರಿಗೊಳಿಸಲಾಯಿತು.

## ಮೈಸೂರು ಪುರಸಭೆಗಳ ಅಧಿನಿಯಮ ೧೯೩೩

೧೯೩೩ರ ಮೈಸೂರು ಪುರಸಭೆಗಳ ಅಧಿನಿಯಮ, ಮೈಸೂರು ಸಣ್ಣ ಪುರಸಭೆಗಳ ಅಧಿನಿಯಮ ಹಾಗೂ ನಗರ ಪುರಸಭೆಗಳ ಅಧಿನಿಯಮ, ಇವು ನಗರ ಪ್ರದೇಶಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯ ಕಾನೂನುಗಳಾಗಿದ್ದವು. ೧೯೩೯ರ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲಾ ಮಂಡಳಿಗೂ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿದ್ದು, ಸರಕಾರಿ ಅಧಿಕಾರಿ ಮತ್ತು ನಾಮಕರಣ ಸದಸ್ಯರ ಸಂಖ್ಯೆ ಕಡಿಮೆಯಾಯಿತು.

ಸ್ಥಳೀಯ ಸಂಸ್ಥೆಗಳು, ಅದರಲ್ಲೂ ಗ್ರಾಮೀಣ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸಿ, ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ನೆರವಾಗುವಂತೆ ಮಾಡಲಾಯಿತು. ೧೯೪೭ ರಲ್ಲಿ ಹೊರಡಿಸಲಾದ ಅಧಿಕೃತ ಆಜ್ಞೆಗಳ ಮೂಲಕ ತೀವ್ರ ಪ್ರಚಾರ, ಗ್ರಾಮ ಸುಧಾರಣೆಗೆ ತರಬೇತಿಗೊಂಡ ಗ್ರಾಮೀಣ ಕಾರ್ಯಕರ್ತರನ್ನು ನಿಯೋಜಿಸುವುದು ಮುಂತಾದ ಹಲವಾರು ಹೊಸ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಭಾರತ ಸ್ವಾತಂತ್ರ್ಯಗಳಿಸಿದ ಬಳಿಕ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಸ್ವತಂತ್ರ ಹಾಗೂ ಪರಿಣಾಮಕಾರಿಗೊಳಿಸಲಾಯಿತು.

## ಮೈಸೂರು ಪುರಸಭೆಗಳ ಅಧಿನಿಯಮ-೧೯೫೧

ಈ ಕಾಯ್ದೆ ಪ್ರಥಮವಾಗಿ ಸಣ್ಣ ಹಾಗೂ ದೊಡ್ಡ ಪುರಸಭೆಗಳೆಂಬ ತಾರತಮ್ಯವನ್ನು ತೊಡೆದುಹಾಕಿತು. ಈ ಕಾನೂನಿನನ್ವಯ ಎಲ್ಲಾ ಪುರಸಭೆಗಳಲ್ಲಿ ವಯಸ್ಕ ಮತದಾನದ ಮೂಲಕ ಚುನಾಯಿತರಾದ ಸದಸ್ಯರು ತಮ್ಮೊಳಗಿಂದಲೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಪಡೆದುಕೊಂಡರು. ಪುರಸಭೆಗಳಿಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಸಲು ಅವಕಾಶವಿತ್ತು. ಅಧ್ಯಕ್ಷರು ಸಭೆಗಳನ್ನು ಕರೆದು ಕಲಾಪ ನಡೆಸುವ ಅಧಿಕಾರ ಹೊಂದಿದ್ದರು. ಪುರಸಭೆ ಕಾರ್ಯಾಲಯದ ಅಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿಯ ಮೇಲ್ವಿಚಾರಣೆ ಹಾಗೂ ಆಡಳಿತ ಮತ್ತು ಜನಹಿತ ಕಾರ್ಯ ಕೈಗೊಳ್ಳುವ ಜವಾಬ್ದಾರಿಯನ್ನು ಅಧ್ಯಕ್ಷರು ಹೊಂದಿದ್ದರು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಕಾರ್ಯ ನಿರ್ವಹಿಸಬೇಕಾಗಿತ್ತು.

ಆಡಳಿತಾತ್ಮಕ ದೃಷ್ಟಿಯಿಂದ ಪುರಸಭಾ ಚಟುವಟಿಕೆಗಳನ್ನು ಈ ಮುಂದಿನಂತೆ ವಿಂಗಡಿಸಲಾಗಿತ್ತು. ೧. ನೈರ್ಮಲ್ಯ ೨. ಆರೋಗ್ಯ ೩. ರಕ್ಷಣೆ ೪. ಸಾರ್ವಜನಿಕ ಸೌಕರ್ಯ ಹಾಗೂ ೫. ಜನಹಿತ ಕಾರ್ಯಕ್ರಮಗಳು. ಇವುಗಳಲ್ಲದೆ ತಂಗುದಾಣ ಹಾಗೂ ಉದ್ಯಾನಗಳ ನಿರ್ಮಾಣ, ಗ್ರಂಥಾಲಯ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ ಮುಂತಾದ ಸೌಕರ್ಯಗಳನ್ನು ತೆರಿಗೆದಾರರಿಗೆ ಒದಗಿಸುವ ವಿಶೇಷ ಅಧಿಕಾರವನ್ನು ಪುರಸಭೆಗಳು ಪಡೆದುಕೊಂಡವು.

## ವೆಂಕಟಪ್ಪ ಸಮಿತಿ

ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ೧೯೪೯ರಲ್ಲಿ ವಿ.ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ೧೯೫೦ರ ಜೂನ್ ೧೨ ರಂದು ತನ್ನ ವರದಿಯನ್ನು ಸಲ್ಲಿಸಿತು. ಅದರ ಶಿಫಾರಸ್ಸುಗಳನ್ನು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮಗಳಲ್ಲಿ ಅಳವಡಿಸಲಾಯಿತು. ತತ್ಪರಿಣಾಮವಾಗಿ ಎರಡು ಹಂತದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಗಳು ರೂಪಗೊಂಡವು. ಅವುಗಳಲ್ಲಿನ ಜಿಲ್ಲಾ ಮಂಡಳಿಗಳನ್ನು ಪಂಚಾಯಿತಿಗಳು ಪರೋಕ್ಷವಾಗಿ ಚುನಾಯಿಸಿದ್ದವು. ಆದರೆ ಚುನಾವಣೆಗಳನ್ನು ನಡೆಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೧೯೫೪ರ ಮಾರ್ಚ್ ೧ ರಿಂದ ಜಿಲ್ಲಾ ಮಂಡಳಿಗಳ ಕೆಲಸ ಸ್ಥಗಿತಗೊಂಡಿತು. ೧೯೫೩ರಲ್ಲಿ ಡಿ.ಹೆಚ್. ಚಂದ್ರಶೇಖರಯ್ಯ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಇನ್ನೊಂದು ವಿಚಾರಣಾ-ಸಮಿತಿಯು ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವ ಅಥವಾ ತಾಲೂಕು

ಮಂಡಳಿಗಳನ್ನು ಪ್ರಾರಂಭಿಸುವ ಅವಶ್ಯಕತೆಗಳ ಬಗ್ಗೆ ಪರಿಶೀಲನೆ ನಡೆಸಿ, ೧೯೫೪ರಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಿತು. ೧. ತಾಲೂಕು ಮಂಡಳಿಗಳ ಸದಸ್ಯರುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವುದು. ೨. ತಾಲೂಕು ಮಂಡಳಿಗಳನ್ನು ಪುನರಾರಂಭಿಸುವುದು ಹಾಗೂ ೩. ತಾಲೂಕು ಮಂಡಳಿಯ ಸದಸ್ಯತ್ವದ ಮೂರನೇ ಒಂದು ಭಾಗವನ್ನು ಗ್ರಾಮಪಂಚಾಯಿತಿ ಮತ್ತು ಪುರಸಭಾ ಮಂಡಳಿಗಳ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗವನ್ನು ತಾಲೂಕಿನಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡುವುದು. ಆದರೆ ರಾಜ್ಯ ಪುನರ್ವಿಂಗಡಣೆಯಿಂದಾಗಿ ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಲಿಲ್ಲ. ರಾಜ್ಯ ಪುನರ್ವಿಂಗಡಣೆಯಾದ ಬಳಿಕ ಜಾರಿಗೆ ತರಲಾದ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ (೧೯೫೯)ವು ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಜಾರಿಯಾಯಿತು.

## ೧೯೫೬ರ ನಂತರದ ಬೆಳವಣಿಗೆಗಳು

ರಾಜ್ಯ ಪುನರ್ವಿಂಗಡಣೆಯ ನಂತರ ಸ್ಥಳೀಯ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಏಕರೂಪವಾದ ಮತ್ತು ಹೆಚ್ಚು ವ್ಯಾಪಕವಾದ ಹೊಸ ಕಾನೂನಿನ ಅವಶ್ಯಕತೆ ಇತ್ತು. ಏಕೆಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರ ಸಹಭಾಗಿತ್ವದಿಂದ ಕೈಗೊಳ್ಳಬೇಕಾಗಿತ್ತು. ಹಾಗಾಗಿ ದೇಶದ ಇತರೆಡೆಗಳಂತೆ ಕರ್ನಾಟಕದಲ್ಲೂ ೧೯೫೭ರ ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಅನ್ವಯ 'ಪಂಚಾಯತ್ ರಾಜ್' ಪದ್ಧತಿಯನ್ನು ಜಾರಿಗೊಳಿಸಲಾಯಿತು. ಅದರಂತೆ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯) ಯ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ರೂಪಿಸಲ್ಪಟ್ಟು, ಅದರಂತೆ ಗ್ರಾಮಪಂಚಾಯಿತಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ಅಧಿಕೃತ ಜವಾಬ್ದಾರಿ ವರ್ಗಾಯಿಸಲ್ಪಟ್ಟು, ಯೋಜಿತ ಕಾರ್ಯಕ್ರಮ ಹಾಗೂ ರೂಪಿಸಲ್ಪಟ್ಟ ಗುರಿಗಳನ್ನು ಇವು ಈಡೇರಿಸಬೇಕಾಗಿತ್ತು. ಪುನರ್ವಿಂಗಡಣೆಯ ಸಮಯದಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾಯ್ದೆಗಳನ್ನು ರದ್ದುಪಡಿಸಿ ಈ ಹೊಸಕಾಯ್ದೆಯನ್ನು ೧೯೬೦ರ ನವೆಂಬರ್ ಒಂದರಿಂದ ಜಾರಿಗೊಳಿಸಲಾಯಿತು. ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಗ್ರಾಮಸ್ವರಾಜ್ಯದ ಗುರಿಯನ್ನು ಹೊಂದಿದ್ದ ಏಕೀಕೃತ ಕರ್ನಾಟಕದ ಮೊದಲನೆಯ ಶಾಸನ ಇದಾಗಿದ್ದು, ಅನಂತರ ೧೯೫೯ರ ಅಧಿನಿಯಮವನ್ನು; ೧೯೬೧ರಲ್ಲಿ ೨೬ನೆಯ, ೧೯೬೪ರಲ್ಲಿ ೨೨ನೆಯ, ೧೯೬೫ರಲ್ಲಿ ೫ನೆಯ, ೧೯೭೦ರಲ್ಲಿ ೭ನೆಯ ಹಾಗೂ ೧೯೭೪ರಲ್ಲಿ ೨೧ನೆಯ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಯಿತು. ೧೯೮೩ರಲ್ಲಿ ಮತ್ತು ೧೯೯೩ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು.

## ಜಿಲ್ಲಾ ಅಭಿವೃದ್ಧಿ ಸಮಿತಿ

ಜಿಲ್ಲೆಯಲ್ಲಿ ಹಳೆಯ ಜಿಲ್ಲಾ ಮಂಡಳಿಗಳನ್ನು ರದ್ದುಪಡಿಸಿ ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಜಿಲ್ಲೆಗಳಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುವ ಇತರ ಸ್ಥಳೀಯ ಸಂಸ್ಥೆಗಳಾದ ತಾಲೂಕು ಅಭಿವೃದ್ಧಿ ಮಂಡಳಿಗಳು, ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಪಂಚಾಯಿತಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಈ ಸಮಿತಿಯ ಹೊಣೆಯಾಗಿದ್ದಿತು. ಇದಕ್ಕೆ ಜಿಲ್ಲಾಧಿಕಾರಿಯವರು ಪದನಿಮಿತ್ತ ಅಧ್ಯಕ್ಷರಾಗಿದ್ದು, ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿದ್ದರು. ಅಲ್ಲದೆ, ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆ ಮತ್ತು ಶಾಸನಸಭಾ ಸದಸ್ಯರು, ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯಸಭೆ ಸದಸ್ಯರು, ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಾಮಕರಣಗೊಂಡ ಕೆಲವು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗಳ ವಾರ್ಷಿಕ ಆಯವ್ಯಯವನ್ನು ಪರಿಶೀಲಿಸಿ ಮಂಜೂರು ಮಾಡುವುದು, ಅವುಗಳ ಕಾರ್ಯವನ್ನು ಪರಾಮರ್ಶೆ ಮಾಡುವುದು ಮತ್ತು ಅವು ಸರಾಗವಾಗಿ ಕೆಲಸ ಮಾಡುವುದಕ್ಕೆ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಈ ಸಮಿತಿಯು ಮಾಡುತ್ತಿತ್ತು.

## ತಾಲೂಕು ಅಭಿವೃದ್ಧಿ ಮಂಡಳಿಗಳು

ತಾಲೂಕು ಅಭಿವೃದ್ಧಿ ಮಂಡಳಿಗಳು ಹಿಂದಿನ ಮೈಸೂರು ರಾಜ್ಯದಲ್ಲಿನ ಜಿಲ್ಲಾ ಅಧೀನ ಗ್ರಾಮ ಅಭಿವೃದ್ಧಿ ಪ್ರಾತಿನಿಧಿಕ ಮಂಡಳಿಗಳಾಗಿದ್ದು, ಮೈಸೂರು ಸ್ಥಳೀಯ ಮಂಡಳಿಗಳ ಮಾದರಿಯಲ್ಲೇ ಪ್ರತಿಯೊಂದು ತಾಲೂಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಆಗಿನ ಸಹಾಯಕ ಆಯುಕ್ತರು ಅದರ ಮುಖ್ಯಸ್ಥರಾಗಿದ್ದರು. ಈ ಮಂಡಳಿಗಳಲ್ಲಿ ೧೨ ಮಂದಿ

ಸದಸ್ಯರಿರುತ್ತಿದ್ದರು. ಅವರಲ್ಲಿ ನಾಲ್ವರು ಪದನಿಮಿತ್ತರಾಗಿದ್ದು, ಇನ್ನು ನಾಲ್ವರು ಚುನಾಯಿತರು ಮತ್ತು ಮೂವರನ್ನು ಸರಕಾರ ನಾಮಕರಣ ಮಾಡುತ್ತಿತ್ತು. ಉಳಿದೊಬ್ಬರು ಪುರಸಭೆಯಿಂದ ಚುನಾಯಿತರಾಗುತ್ತಿದ್ದರು. ಜಿಲ್ಲಾ ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಈ ತಾಲೂಕು ಮಂಡಳಿಗಳು ಒಂದು ವರ್ಷದಲ್ಲಿ ಕನಿಷ್ಠ ಆರು ಸಲವಾದರೂ ಸಭೆ ಸೇರಬೇಕಾಗಿದ್ದಿತು. ೧೯೧೮ರ ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯು ಜಾರಿಯಾಗಿ ೧೯೦೨ರ ಕಾಯ್ದೆಯನ್ನು ರದ್ದುಮಾಡಲಾಯಿತು. ಈ ಹೊಸ ಕಾಯ್ದೆಯನ್ವಯ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಪ್ರಮಾಣವನ್ನು ಗಣನೀಯವಾಗಿ ಏರಿಸಲಾಯಿತು. ಇದರಲ್ಲಿ ಪ್ರಮುಖ ಸಮುದಾಯಗಳಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡಲಾಯಿತು ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಸ್ವತಂತ್ರ ಅಧಿಕಾರಗಳನ್ನು ನೀಡಲಾಯಿತು. ಇಲ್ಲಿಯವರೆಗೆ ಜಿಲ್ಲಾ ಮತ್ತು ತಾಲೂಕು ಪ್ರಗತಿ ಸಮಿತಿಗಳು ನಿರ್ವಹಿಸುತ್ತಿದ್ದ ಜಿಲ್ಲೆಗಳಲ್ಲಿನ ಆರ್ಥಿಕ ಅಭಿವೃದ್ಧಿ ಕೆಲಸವನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಮತ್ತು ಪಂಚಾಯಿತಿಗಳ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಸ್ಥಳೀಯ ಮಂಡಳಿಗಳು ಆರ್ಥಿಕ ಅಭಿವೃದ್ಧಿಗೆ ಗಮನ ನೀಡಬೇಕೆಂದೂ ಮತ್ತು ಶಿಕ್ಷಣ ಸುಂಕವನ್ನು ವಿಧಿಸಬೇಕೆಂದೂ ಸೂಚಿಸಲಾಯಿತು.

## ತಾಲೂಕು ಮಂಡಳಿಗಳ ಪುನರ್ ರಚನೆ

ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ರಾಜ್ಯ ಪುನರ್ವಿಂಗಡಣೆ ನಂತರ ೧೯೬೦ರಲ್ಲಿ ಅಂದರೆ ಅವು ಆರಂಭಗೊಂಡು ೩೩ ವರ್ಷಗಳ ಬಳಿಕ ಪುನರುಜ್ಜೀವನಗೊಳಿಸಲಾಯಿತು. ೧೯೫೯ರ ಕರ್ನಾಟಕ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ, ಗ್ರಾಮಾಂತರ ಸ್ಥಳೀಯ ಸ್ವಯಂ ಸರಕಾರದಲ್ಲಿ ಮೂರು ಹಂತಗಳನ್ನು ಮಾಡಲಾಗಿದ್ದು, ಅದರಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಯು ಪ್ರಧಾನ ಪಾತ್ರವನ್ನು ಹೊಂದಿದ್ದಿತು. ತಾಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತಿ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ೧೯ಕ್ಕೆ ನಿಗದಿಪಡಿಸಲಾಗಿದ್ದಿತು. ಆದರೆ ಆ ತಾಲೂಕಿನ ಜನಸಂಖ್ಯೆಯು ಒಂದು ಲಕ್ಷ ಅಥವಾ ಅದಕ್ಕೂ ಹೆಚ್ಚಿರಬೇಕಾಗಿದ್ದಿತು. ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ೧೫ ಸದಸ್ಯರಿರುತ್ತಿದ್ದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ಮೂಲ ಕಾಯ್ದೆಯಲ್ಲಿ ನಾಲ್ಕು ವರ್ಷಗಳಿದ್ದ ಈ ಸಂಸ್ಥೆಗಳ ಅವಧಿಯನ್ನು ಐದು ವರ್ಷಗಳಿಗೆ ಏರಿಸಲಾಯಿತು. ತಾಲೂಕಿನಿಂದ ಚುನಾಯಿತರಾದ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ಪರಿಣಾಮಕಾರಿ ಸಮನ್ವಯವಿರಬೇಕೆಂದು ಕಾಯ್ದೆಯಲ್ಲಿ ಸೂಚಿಸಲಾಗಿತ್ತು. ರಸ್ತೆಗಳನ್ನು ನಿರ್ಮಿಸುವುದು, ಕುಡಿಯುವ ನೀರಿನ ಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೊಳ್ಳುವುದು, ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದು ಮುಂತಾದವು ಮಂಡಳಿಗಳ ಮುಖ್ಯ ಕಾರ್ಯಗಳಾಗಿದ್ದವು. ಇದರ ಜೊತೆಗೆ ಸರಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ, ಈ ಮಂಡಳಿಗಳ ಜವಾಬ್ದಾರಿಯಾಗಿತ್ತು.

ಮಂಡಳಿಗಳು ಸಂಬಂಧಪಟ್ಟ ತಾಲೂಕುಗಳ ಭೂ–ಕಂದಾಯದ ಶೇ.೫೦ ರಷ್ಟು ಭಾಗ ವಾರ್ಷಿಕ ಅನುದಾನಕ್ಕೆ ಅರ್ಹವಾಗಿದ್ದು, ಇದರ ಜೊತೆಗೆ ಸರಕಾರವು ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇ.೧೦ರಷ್ಟು ಮೊಬಲಗು ದೊರೆಯುತ್ತಿದ್ದಿತು. ಅಲ್ಲದೆ ಮಂಡಳಿಗಳ ಸ್ಥಿರ ಆಸ್ತಿಗಳ ಮೇಲೆ ಸುಂಕವನ್ನು ಮತ್ತು ಮಾರಾಟಕ್ಕೆ ತಂದ ಜಾನುವಾರುಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವಿದ್ದಿತು. ತಾಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚಾಗಿ ಸರಕಾರದ ಅನುದಾನವನ್ನು ಅವಲಂಬಿಸಿದ್ದವು. ಆ ಪ್ರದೇಶದ ಎಲ್ಲಾ ಭೂ ಕಂದಾಯವನ್ನು ಆಯಾ ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ೬೦:೪೦ರ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತಿತ್ತು. ೧೯೮೭ರಿಂದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಬದಲಾಗಿ ತಾಲೂಕು ಪಂಚಾಯಿತಿ ಸಮಿತಿಗಳು ಕಾರ್ಯನಿರತವಾಗಿವೆ.

## ಪಟ್ಟಣ ಪಂಚಾಯಿತಿಗಳು

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಕಲಂ ೩ರ ಪ್ರಕಾರ ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಮಧ್ಯವರ್ತಿ ಸ್ವಯಂ ಆಡಳಿತ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಜನಸಂಖ್ಯೆಯು ೫೦೦೦ಕ್ಕೂ ಹೆಚ್ಚಿದ್ದು ವಾರ್ಷಿಕ ವರಮಾನವು ರೂ. ೧೦,೦೦೦ ಗಳಿಗಿಂತ ಹೆಚ್ಚಿದ್ದರೆ, ಅಂತಹ ಹಳ್ಳಿಯನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಘೋಷಿಸುತ್ತಿತ್ತು. ಪಟ್ಟಣ ಪಂಚಾಯಿತಿಯಲ್ಲಿ ೧೧ ರಿಂದ ೧೯ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ

ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೩ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಕಾಯ್ದೆ ಜಾರಿಗೆ ಬಂದ ಮೇಲೆ ಮೊದಲಿನ ಪಟ್ಟಣ ಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳೆಂದು (೧೯೮೭ರಿಂದ) ಪುನರ್‌ರಚಿಸಲಾಯಿತು.

ಪಟ್ಟಣದ ನೈರ್ಮಲ್ಯವನ್ನು ಪೌರ ಕಾರ್ಮಿಕರು ಮತ್ತು ಇತರೆ ಮೇಲ್ವಿಚಾರಕ ಸಿಬ್ಬಂದಿ ಕಾಪಾಡುತ್ತಿದ್ದರು. ಸಾಮಾನ್ಯವಾಗಿ ಸಂತೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಬಂದು ಹೋಗುವ ಜನರಿಗೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸರಕಾರವು ವಿಶೇಷ ಧನ ಸಹಾಯವನ್ನು ಒದಗಿಸುತ್ತಿತ್ತು.

### ಗ್ರಾಮ ಪಂಚಾಯಿತಿಗಳು

ಆಧುನಿಕ ಗ್ರಾಮಪಂಚಾಯಿತಿ ಪದ್ಧತಿಯನ್ನು ಒಂದು ಸ್ಥಳೀಯ ಆಡಳಿತ ಘಟಕವಾಗಿ ಜಾರಿಗೊಳಿಸುವುದಕ್ಕೆ ಮೊದಲು ಹಳ್ಳಿಯ ನೈರ್ಮಲ್ಯವನ್ನು ೧೮೯೮ರ ಗ್ರಾಮ ನೈರ್ಮಲ್ಯ ನಿಬಂಧನೆಯಡಿಯಲ್ಲಿ ಆರೋಗ್ಯ ಇಲಾಖೆಯು ನೋಡಿಕೊಳ್ಳುತ್ತಿತ್ತು. ೧೮೯೧ರಷ್ಟು ಹಿಂದೆಯೇ ಈ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಜಾಡಮಾಲಿಗಳನ್ನು ನೇಮಿಸಿಕೊಂಡಿದ್ದಕ್ಕೆ ದಾಖಲೆಗಳಿವೆ. ನಂತರ ೧೯೧೪ರಲ್ಲಿ ಹಳ್ಳಿಯ ಅಭಿವೃದ್ಧಿ ಯೋಜನೆಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಜಾರಿಗೆ ತಂದರು. ೧೯೧೮ರ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ನಿಬಂಧನೆಗಳನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಗ್ರಾಮಪಂಚಾಯಿತಿಗಳು ಶಾಸನಬದ್ಧವಾಗಿ ಸ್ಥಾಪನೆಗೊಂಡವು. ಅದೇ ಪ್ರಕಾರ, ೧೯೧೯ರಲ್ಲಿ ಹಳ್ಳಿಗಳ ಒಂದು ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರಚನೆಗೊಂಡಿದ್ದು, ಅದಕ್ಕೆ ಪ್ರತ್ಯೇಕವಾದ ಸಂಪನ್ಮೂಲಗಳನ್ನು ಗುರ್ತಿಸಲಾಗಿದ್ದು, ಅವುಗಳಿಗೆ ನಾಮಕರಣ ಮಾಡಿದ ಅಧ್ಯಕ್ಷರಿದ್ದರು. ನಂತರ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಎಲ್ಲಾ ಹಳ್ಳಿಗಳಿಗೆ ಪಂಚಾಯಿತಿಗಳನ್ನು ಶಾಸನಬದ್ಧ ಆಧಾರದ ಮೇಲೆ ರಚಿಸಬೇಕೆಂದೂ ಪ್ರತಿ ಪಂಚಾಯಿತಿಯಲ್ಲಿ ಐದಕ್ಕೆ ಕಡಿಮೆ ಇಲ್ಲದಂತೆ, ೧೨ಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿದ್ದು ಅವರಲ್ಲಿ ಅರ್ಧದಷ್ಟು ಜನರನ್ನು ಚುನಾಯಿಸಬೇಕೆಂದೂ ಸಲಹೆ ಮಾಡಲಾಯಿತು. ಪಂಚಾಯಿತಿಯ ಅಧ್ಯಕ್ಷರನ್ನು ಪ್ರಾರಂಭದ ಹಂತದಲ್ಲಿ ಸರಕಾರವು ನೇಮಿಸುತ್ತಿತ್ತು. ಪಂಚಾಯಿತಿಗಳಿಗೆ ಕಡ್ಡಾಯ ಮತ್ತು ಐಚ್ಛಿಕ ಎಂಬ ಎರಡು ವಿಧವಾದ ಕಾರ್ಯಗಳಿದ್ದವು. ಮೊದಲನೆಯದರಲ್ಲಿ ಹಳ್ಳಿಯ ನೈರ್ಮಲ್ಯ ಮತ್ತು ಸಂಪರ್ಕ; ಎರಡನೆಯದರಲ್ಲಿ ನಿವಾಸಿಗಳ ಆರೋಗ್ಯ ಮತ್ತು ಸೌಕರ್ಯಗಳು ಸೇರಿದ್ದವು. ಪಂಚಾಯಿತಿಗಳಿಗೆ ಮನೆ, ಅಂಗಡಿ, ಖಾಲಿ ನಿವೇಶನ ಮತ್ತು ಹಿತ್ತಲುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಅಧಿಕಾರ ನೀಡಲಾಗಿತ್ತು.

ನಂತರ ೧೯೨೬ರ ಮೈಸೂರು ಜಿಲ್ಲಾ ಮಂಡಳಿಗಳ ನಿಬಂಧನೆ ಮೂರರಂತೆ ಪಂಚಾಯಿತಿಗಳನ್ನು ಜಿಲ್ಲಾ ಮಂಡಳಿಗಳ ಆಡಳಿತಾತ್ಮಕ ನಿಯಂತ್ರಣದಿಂದ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣದಡಿಯಲ್ಲಿ ತರಲಾಯಿತು. ಅವುಗಳು ಸಮರ್ಪಕ ಕಾರ್ಯನಿರ್ವಹಣೆಗೆ ಅವುಗಳ ನಿಯಂತ್ರಣ, ತಪಾಸಣೆ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ತಹಸೀಲ್ದಾರರಿಗೆ ನೀಡಲಾಗಿತ್ತು. ೧೯೫೯ರವರೆಗೆ ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯಿತಿಗಳು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು.

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯು ೧೯೮೫ರವರೆಗೆ ಜಾರಿಯಲ್ಲಿತ್ತು. ಅದರ ಪ್ರಕಾರ ೧೫೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೧೦,೦೦೦ ಮೀರದಂತಹ ಜನಸಂಖ್ಯೆಯ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರೂಪುಗೊಂಡಿತು. ಪ್ರತಿಯೊಂದು ಪಂಚಾಯಿತಿಯೂ ೧೧ಕ್ಕಿಂತ ಕಡಿಮೆಯಿಲ್ಲದೆ, ೧೯ ಕ್ಕಿಂತ ಹೆಚ್ಚಿಲ್ಲದೆ ಸದಸ್ಯರನ್ನು ಹೊಂದಿತ್ತು.

### ಆರ್ಥಿಕ ಸಂಪನ್ಮೂಲಗಳು

ಪ್ರತಿ ಗ್ರಾಮ ಪಂಚಾಯಿತಿಗೆ ಆಯಾ ಹಳ್ಳಿಯ ಭೂ–ಕಂದಾಯದ ಶೇ.೩೦ ರಷ್ಟು ಮತ್ತು ಶೇ.೧೦ರಷ್ಟು ವಿಶೇಷ ಉದ್ದೇಶಗಳಿಗಾಗಿ ವಿವೇಚನಾಧೀನ ಅನುದಾನವು ದೊರೆಯುತ್ತಿತ್ತು. ಪಂಚಾಯಿತಿಯು ತನ್ನ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನ, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ ಮತ್ತು ಹಬ್ಬಗಳು, ಮನೋರಂಜನೆ, ವಾಹನ(ಮೋಟಾರು ವಾಹನಗಳ ಹೊರತು) ಇವುಗಳ ಮೇಲೆ ತೆರಿಗೆಯನ್ನೂ, ಬಸ್ ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣ, ಮತ್ತು ಜಲಾಗಾರಗಳ ಮೇಲೆ ಶುಲ್ಕವನ್ನೂ ವಿಧಿಸಬಹುದಾಗಿತ್ತು. ಪಂಚಾಯಿತಿಯ ಹಂತದಲ್ಲಿ ಗ್ರಾಮ ಲೆಕ್ಕಿಗನು ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸುತ್ತಿದ್ದನು. ವಾರ್ಷಿಕ ರೂ. ೧೨,೦೦೦ ಗಳಿಗಿಂತ ಹೆಚ್ಚು ಆದಾಯವಿರುವ

ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು.

### ಪಂಚಾಯತ್ ರಾಜ್ ಕಾನೂನು

ಪಂಚಾಯತ್ ರಾಜ್ ವ್ಯವಸ್ಥೆಯ ಪರಿಕಲ್ಪನೆಯ ಮೂಲ ಉದ್ದೇಶವು ಆಡಳಿತದಲ್ಲಿ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಜಾರಿಗೆ ತಂದು ತನ್ಮೂಲಕ ಪ್ರಜೆಗಳಿಗೆ ನೇರವಾಗಿ ಆಡಳಿತದಲ್ಲಿ ಹೆಚ್ಚಿನ ಅಧಿಕಾರ ಪ್ರಾಪ್ತಿ ಮಾಡಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ ಆಗುವಂತೆ ನೋಡಿಕೊಳ್ಳುವುದೇ ಆಗಿದೆ. ಇದಕ್ಕಾಗಿ ಸರ್ಕಾರ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೩ರಲ್ಲಿ ಜಾರಿಗೆ ತಂದಿತು. ಈ ಕಾನೂನಿನಂತೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು, ಆಡಳಿತದ ವಿವಿಧ ಹಂತಗಳಲ್ಲಿ ವಿಕೇಂದ್ರಿಕರಣ ಹಾಗೂ ಸಾರ್ವಜನಿಕರ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಸಹಯೋಗ ನೀಡುವಂತೆ ಮಾಡುವುದೂ ಸರ್ಕಾರದ ಉದ್ದೇಶವಾಗಿತ್ತು. ಈ ಕಾನೂನಿನನ್ವಯ ಮಂಡಲ ಪಂಚಾಯಿತಿ, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಈ ಹೊಸ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯಿತಿ ಜಾರಿಗೆ ಬರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರತ್ಯೇಕ ಹಣಕಾಸಿನ ಅಧಿಕಾರ ಇರಲಿಲ್ಲ. ಅವು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ನಡೆಸಲ್ಪಡುತ್ತಿದ್ದವು. ಈ ಆಡಳಿತ ವ್ಯವಸ್ಥೆಯು ೧೯೯೨ ರವರೆಗೆ ಮುಂದುವರಿಯಿತು.

**೧೯೫೯ರ ಕಾಯಿದೆ:** ಮೈಸೂರು ರಾಜ್ಯದಲ್ಲಿ ೧೯೫೬ರಲ್ಲಿ ಹೊಸ ಕಾನೂನು ಜಾರಿಗೆ ಬಂದಿತು. ನೂತನ ಶಾಸನ ವೆಂಕಟಪ್ಪ ಮತ್ತು ಚಂದ್ರಶೇಖರಯ್ಯ ಸಮಿತಿ ಹಾಗೂ ರಾಷ್ಟ್ರಮಟ್ಟದಲ್ಲಿನ ಬಲವಂತರಾಯ್ ಮೆಹ್ತ ಸಮಿತಿ ಶಿಫಾರಸ್ಸುಗಳನ್ನೊಳಗೊಂಡಿದ್ದಿತು. ಇವುಗಳಿಂದ ೧೯೫೬ರಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪಿತವಾಗಲು ತನ್ನದೇ ಆದ ಪ್ರಭಾವವನ್ನು ಬೀರಿತು. ೧೯೫೯ರಲ್ಲಿ ಜಾರಿಗೆ ಬಂದ ಶಾಸನವೆಂದರೆ "ಮೈಸೂರು (ಕರ್ನಾಟಕ) ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾಮಂಡಳಿಗಳ ಅಧಿನಿಯಮ ೧೯೫೯. ಇದರ ಮೂಲ ಉದ್ದೇಶ ಪ್ರಜೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಉತ್ತೇಜಿಸುವುದು ಮತ್ತು ಪ್ರಜೆಗಳಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ಅಧಿಕಾರವನ್ನು ವರ್ಗಾಯಿಸುವುದು". ೧೯೫೯ರಲ್ಲಿ ಮೂರು ಹಂತಗಳಿರುವ ಸ್ಥಳೀಯ ಸರ್ಕಾರ ವ್ಯವಸ್ಥೆ ಜಾರಿಗೆ ಬಂದಿತು. ಇವುಗಳು ಗ್ರಾಮಪಂಚಾಯಿತಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿ. ಗ್ರಾಮ ಪಂಚಾಯಿತಿ ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ನೇರ ಚುನಾವಣೆಗಳಿದ್ದವು. ತಾಲೂಕು ಮಂಡಳಿಗಳ ಅಧ್ಯಕ್ಷರುಗಳು ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದರು.

ಗ್ರಾಮ ಪಂಚಾಯಿತಿಗೆ ನೇರ ಚುನಾವಣೆ ಇತ್ತು. ಗ್ರಾಮಪಂಚಾಯಿತಿಯ ವ್ಯಾಪ್ತಿ ಒಂದು ಕಂದಾಯ ಗ್ರಾಮ ಅಥವಾ ಕೆಲವು ಗ್ರಾಮಗಳು, ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ೧೧, ಗರಿಷ್ಠ ೧೯ ಸದಸ್ಯರಿದ್ದರು. ಗ್ರಾಮ ಪಂಚಾಯಿತಿಯ ಬಜೆಟ್‌ಗೆ ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆಯನ್ನು ಪಡೆಯಬೇಕಿತ್ತು. ಕೆಲವು ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಪಂಚಾಯಿತಿಗೆ ನೀಡಲಾಗಿತ್ತು. ಉದಾಹರಣೆಗೆ ಭೂ–ಕಂದಾಯದಲ್ಲಿನ ಒಂದು ಪಾಲು ಗ್ರಾಮ ಪಂಚಾಯಿತಿಗಳಿಗೆ ಸೇರುತ್ತಿತ್ತು.

ತಾಲೂಕು ಅಭಿವೃದ್ಧಿ ಮಂಡಳಿ ನೇರ ಚುನಾಯಿತ ಸ್ವಯಂ ಆಡಳಿತ ಸಂಸ್ಥೆಯಾಗಿತ್ತು. ಈ ಮಂಡಳಿಯಲ್ಲಿ ೧೫ ರಿಂದ ೧೯ ಸದಸ್ಯರಿದ್ದು, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಪದನಿಮಿತ್ತ ಸದಸ್ಯರಾಗಿದ್ದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ತಾಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದರು. ಸರ್ಕಾರ ನೀಡಿದ ಅನುದಾನ, ಭೂ–ಕಂದಾಯದ ಶೇಕಡಾವಾರು ಪಾಲು ಮತ್ತು ನೀರಿನ ದರ ಇವುಗಳು ಆದಾಯದ ಮೂಲಗಳಾಗಿದ್ದವು. ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯಲ್ಲಿ ಚುನಾಯಿತ ಸದಸ್ಯರಿರುತ್ತಿರಲಿಲ್ಲ.

ಜಿಲ್ಲಾ ಸಮಿತಿಯ ಸದಸ್ಯರು ಸೇರಿದಂತೆ ಜಿಲ್ಲಾ ಅಭಿವೃದ್ಧಿ ಮಂಡಳಿಯಲ್ಲಿ ೧) ತಾಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳು, ೨) ಜಿಲ್ಲೆಯಿಂದ ಚುನಾಯಿತರಾದ ರಾಜ್ಯ ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಸಂಸತ್ ಸದಸ್ಯರು, ೩) ೧೫ಕ್ಕೆ ಮೀರದಂತೆ ಸರ್ಕಾರದಿಂದ ನೇಮಕಗೊಂಡ ಜಿಲ್ಲಾ ಮಟ್ಟದ ಅಧಿಕಾರಿಗಳು, ೪) ಒಬ್ಬ ಮಹಿಳೆ; ಒಬ್ಬ

ಪರಿಶಿಷ್ಟ ಜಾತಿಯ ಸದಸ್ಯರು ಪ್ರತಿನಿಧಿಸುವ ಸದಸ್ಯರು ಮತ್ತು ೫) ಜಿಲ್ಲಾಧಿಕಾರಿಗಳು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಂಸ್ಥೆಯು ಸಲಹಾ ಸಂಸ್ಥೆಯಾಗಿದ್ದು, ಬೇರೆ ಯಾವ ಸಿಬ್ಬಂದಿಯನ್ನು ಹೊಂದಿರಲಿಲ್ಲ.

ವಿಭಾಗಾಧಿಕಾರಿಗಳಿಗೆ ಪಂಚಾಯಿತಿ ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ನಿಯಂತ್ರಿಸುವ ಅಧಿಕಾರವಿತ್ತು. ಈ ಸಂಸ್ಥೆಗಳನ್ನು ಅಮಾನತ್ತು ಮಾಡುವ ಹಾಗೂ ವಿಸರ್ಜಿಸುವ ಅಧಿಕಾರವನ್ನು ವಿಭಾಗಾಧಿಕಾರಿಗಳಿಗೆ ನೀಡಲಾಗಿತ್ತು.

**ಕೊಂಡಜ್ಜಿ ಬಸಪ್ಪ ಸಮಿತಿ:** ೧೯೬೨ರಲ್ಲಿ ಕೊಂಡಜ್ಜಿ ಬಸಪ್ಪ ಸಮಿತಿ ರಚಿಸಿ ಅದಕ್ಕೆ "ಪಂಚಾಯಿತಿ ರಾಜ್ ಸಮಿತಿ" ಎಂದು ಕರೆಯಲಾಯಿತು. ಈ ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಇದರಲ್ಲಿ ಮುಖ್ಯವಾದುವೆಂದರೆ: ೧) ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಗಳ ಬದಲು ಜಿಲ್ಲಾ ಪರಿಷತ್ತುಗಳ ಸ್ಥಾಪನೆ, ೨) ಜಿಲ್ಲಾ ಪರಿಷತ್ತುಗಳಿಗೆ ನೇರ ಚುನಾವಣೆ, ೩) ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ, ೪) ಸಂಸತ್ ಮತ್ತು ರಾಜ್ಯ ಶಾಸಕಾಂಗ ಸದಸ್ಯರುಗಳಿಗೆ ಮತದಾನದ ಹಕ್ಕಿಲ್ಲದ ಸಹ ಸದಸ್ಯತ್ವ, ೫) ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು, ೬) ಗ್ರಾಮ ಪಂಚಾಯಿತಿ ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳು ಮುಂದುವರಿಯತಕ್ಕದ್ದು, ೭) ಗ್ರಾಮಸಭೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು, ೮) ನ್ಯಾಯ ಪಂಚಾಯಿತಿಗಳನ್ನು ಸ್ಥಾಪಿಸುವುದು ಮತ್ತು ೯) ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು.

ಸಮಿತಿಯ ವರದಿಯನ್ನು ಅವಲಂಬಿಸಿ ಮೈಸೂರು ಪಂಚಾಯತ್‌ರಾಜ್ ಕರಡು ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸಲಾಯಿತು. ಕಾರಣಾಂತರದಿಂದ ಮಸೂದೆ ಅಂಗೀಕಾರವಾಗಲಿಲ್ಲ. ಆದರೂ ಈ ಸಮಿತಿಯ ಮೂಲಭೂತ ಶಿಫಾರಸ್ಸುಗಳನ್ನು ಕಾರ್ಯರೂಪಗೊಳಿಸಲಾಯಿತು. ೧೯೭೭ರ ತುರ್ತು ಪರಿಸ್ಥಿತಿಯ ನಂತರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾಪಕ್ಷ ಪಂಚಾಯತ್ ರಾಜ್ ಸಂಸ್ಥೆಗಳ ಸುಧಾರಣೆಗಳ ಬಗ್ಗೆ ಸಲಹೆ ಮಾಡಲು ಶ್ರೀ ಅಶೋಕ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯು ಕ್ರಾಂತಿಕಾರಿ ಶಿಫಾರಸ್ಸುಗಳುಳ್ಳ ವರದಿಯನ್ನು ೧೯೭೮ರಲ್ಲಿ ಸಲ್ಲಿಸಿತು. ವರದಿಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಮಂಡಲ ಪಂಚಾಯಿತಿ ಎಂಬ ಎರಡು ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸೌಲಭ್ಯವಿರಬೇಕೆಂದು ಅಭಿಪ್ರಾಯಪಟ್ಟಿತು.

ಕರ್ನಾಟಕದಲ್ಲಿ ಜನತಾ ಪಕ್ಷದ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಿತು. ಅಧಿಕಾರ ವಿಕೇಂದ್ರೀಕರಣಕ್ಕೆ ಅಪಾರ ಆಸ್ಥೆಯನ್ನು ಹೊಂದಿದ್ದ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾವಣೆಗೆ ಮುಂದಾಯಿತು. ಶ್ರೀ ಕೊಂಡಜ್ಜಿ ಬಸಪ್ಪ ಸಮಿತಿ ಶಿಫಾರಸ್ಸು ಆಧರಿಸಿದ ಮಸೂದೆ ಹಾಗೂ ಶ್ರೀ ಅಶೋಕ ಮೆಹತಾ ಸಮಿತಿಯ ವರದಿ ಕರ್ನಾಟಕದಲ್ಲಿ ನೂತನ ಪಂಚಾಯತ್ ರಾಜ್ ವ್ಯವಸ್ಥೆಗೆ ಪ್ರೇರಣೆ ಹಾಗೂ ಸ್ಫೂರ್ತಿ ನೀಡಿತು.

ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ವಿಕೇಂದ್ರೀಕರಣದಲ್ಲಿ ಅಚಲವಾದ ನಂಬಿಕೆ ಇಟ್ಟಿದ್ದರು. ಅವರ ಪರಿಶ್ರಮದ ಫಲವೇ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೯೮೩ರ ಪ್ರಕಾರ ಜಾರಿಗೆ ಬಂದಿತು. ಈ ಶಾಸನಕ್ಕೆ ಜುಲೈ ೧೦, ೧೯೮೫ರಂದು ರಾಷ್ಟ್ರಪತಿಗಳ ಅನುಮೋದನೆ ದೊರೆಯಿತು. ದಿ: ೧-೪-೧೯೮೭ ರಿಂದ ಪಂಚಾಯತ್ ರಾಜ್ ಸಂಸ್ಥೆಗಳು ಕಾರ್ಯಾರಂಭ ಮಾಡಿದವು. ಈ ಕಾಯಿದೆಯಡಿಯಲ್ಲಿ ಸ್ಥಾಪಿತವಾದ ಸಂಸ್ಥೆಗಳ ಸ್ವರೂಪವನ್ನು ಈ ಕೆಳಗೆ ಕೊಡಲಾಗಿದೆ.

೧. **ಗ್ರಾಮಸಭೆ:** ಗ್ರಾಮಸಭೆ ಈ ವ್ಯವಸ್ಥೆಯ ಮೂಲ ಹಂತ. ಯಾವುದೇ ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರುತ್ತಾನೆ. ರಾಜ್ಯದಲ್ಲಿದ್ದ ೨೭,೦೨೪ ಗ್ರಾಮಗಳಿಗೆ ಪ್ರತಿ ಗ್ರಾಮಕ್ಕೊಂದು ಗ್ರಾಮಸಭೆಯಿದ್ದು, ಇವು ವರ್ಷದಲ್ಲಿ ಎರಡು ಸಲ ಸಭೆ ಸೇರುತ್ತವೆ. ಗ್ರಾಮಸಭೆ ಅಭಿವೃದ್ಧಿ ಕಾರ್ಯಕ್ರಮ, ಸಮಸ್ಯೆಗಳ ಪರಿಶೀಲನೆ ಮತ್ತು ಚರ್ಚೆ ಮಾಡುವುದು. ಫಲಾನುಭವಿಗಳ ಆಯ್ಕೆ, ಕನಿಷ್ಠ ಅವಶ್ಯಕತೆಗಳೂ ಸೇರಿದಂತೆ ಸ್ಥಳೀಯ ಅಭಿವೃದ್ಧಿಗೆ ಯೋಜನೆ ತಯಾರಿಕೆ ಮುಂತಾದವು ಗ್ರಾಮಸಭೆಯ ಪ್ರಕಾರ್ಯಗಳಾಗಿದ್ದವು.

೨. **ಮಂಡಲ ಪಂಚಾಯಿತಿ:** ೮,೦೦೦ ರಿಂದ ೧೨,೦೦೦ ಜನಸಂಖ್ಯೆಗೆ ಒಂದು ಮಂಡಲ ಪಂಚಾಯಿತಿ ಇರುತ್ತದೆ, ೪೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯ, ಚುನಾಯಿತ ಸದಸ್ಯರಿಂದ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ

ಹಾಗೂ ಹಿಂದುಳಿದ ವರ್ಗಗಳಿಂದ ಯಾರೂ ಚುನಾಯಿತರಾಗದ ಪಕ್ಷದಲ್ಲಿ ಈ ವರ್ಗಗಳಿಂದ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕಿತ್ತು.

೩. **ತಾಲೂಕು ಪಂಚಾಯತ್ ಸಮಿತಿ:** ತಾಲೂಕು ಪಂಚಾಯಿತಿ ಸಮಿತಿಗೆ ನೇರವಾದ ಚುನಾಯಿತ ಸದಸ್ಯರಿರುವುದಿಲ್ಲ. ತಾಲೂಕನ್ನು ರಾಜ್ಯ ವಿಧಾನಸಭೆಯಲ್ಲಿ ಪ್ರತಿನಿಧಿಸುವ ಶಾಸಕರು ಇದರ ಅಧ್ಯಕ್ಷರು. ತಾಲೂಕಿನ ಎಲ್ಲಾ ಮಂಡಲ ಪಂಚಾಯಿತಿಗಳ ಪ್ರಧಾನರು ಮತ್ತು ಜಿಲ್ಲಾ ಪರಿಷತ್ತಿಗೆ ತಾಲೂಕಿನಿಂದ ಚುನಾಯಿತರಾದ ಸದಸ್ಯರುಗಳು ಇದರ ಸದಸ್ಯರಾಗಿರುತ್ತಾರೆ, ಇವರ ಪ್ರಮುಖ ಕರ್ತವ್ಯವೆಂದರೆ– ಮಂಡಲ ಪಂಚಾಯಿತಿಗಳ ಕಾರ್ಯಗಳ ಸಂಯೋಜನೆ ಹಾಗೂ ಮಂಡಲ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವುದು.

೪. **ಜಿಲ್ಲಾ ಪರಿಷತ್ತು:** ೨೮,೦೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯರಿದ್ದು, ಜಿಲ್ಲೆಯಿಂದ ಸಂಸತ್ ಹಾಗೂ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಚುನಾಯಿತರಾದ ಶಾಸಕರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯರು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

೫. **ರಾಜ್ಯ ಅಭಿವೃದ್ಧಿ ಪರಿಷತ್ತು:** ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಜ್ಯಮಟ್ಟದ ಸಂಸ್ಥೆಯಾಗಿ ರಾಜ್ಯ ಅಭಿವೃದ್ಧಿ ಪರಿಷತ್ತು ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು, ರಾಜ್ಯಮಂತ್ರಿ ಮಂಡಲದ ಆರು ಜನ ಸಚಿವರು ಇದರ ಸದಸ್ಯರಾಗಿರುತ್ತಾರೆ. ಅಭಿವೃದ್ಧಿ ಆಯುಕ್ತರು ಈ ಪರಿಷತ್ತಿನ ಸದಸ್ಯ– ಕಾರ್ಯದರ್ಶಿಗಳಾಗಿರುತ್ತಾರೆ. ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪಂಚಾಯತ್ ರಾಜ್ ಕಾರ್ಯಕಲಾಪಗಳ ಬಗ್ಗೆ ಪರಿಶೀಲಿಸಿ, ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಇದರ ಪ್ರಮುಖ ಕರ್ತವ್ಯವಾಗಿದೆ.

೬. **ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ:** ಜಿಲ್ಲಾ ಪರಿಷತ್ತಿನಲ್ಲಿ ಶೇಕಡ ೨೫ರಷ್ಟು ಸ್ಥಾನಗಳನ್ನು ಮಹಿಳೆಯರಿಗೂ, ಶೇ. ೧೫ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಶೇ.೩ರಷ್ಟು ಸ್ಥಾನಗಳನ್ನು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿರಿಸಲಾಗಿತ್ತು. ಜನವರಿ ೧೯೮೭ರಲ್ಲಿ ೨,೪೪೯ ಮಂಡಲ ಪಂಚಾಯಿತಿಗಳಿಗೆ ಮತ್ತು ೨೦ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳು ನಡೆದವು. ಜಿಲ್ಲಾ ಪಂಚಾಯಿತಿಗಳು ಬಹುತೇಕ ಆರ್ಥಿಕ ಸಂಪನ್ಮೂಲಗಳನ್ನು ರಾಜ್ಯ ಸರ್ಕಾರದ ಸಂಚಿತ ನಿಧಿಯಿಂದ ಪಡೆಯುತ್ತಿದ್ದವು. ಇದಲ್ಲದೆ ಸರ್ಕಾರ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅನುದಾನ ಮತ್ತು ಸಾಲವನ್ನು ನೀಡುವ ಸೌಲಭ್ಯವಿತ್ತು. ಮಂಡಲ ಪಂಚಾಯಿತಿಗಳಿಗೆ ಕೆಲವು ತೆರಿಗೆ ಮತ್ತು ಶುಲ್ಕಗಳನ್ನು ವಿಧಿಸುವ, ವಸೂಲಿ ಮಾಡುವ ಮತ್ತು ವಿನಿಯೋಗಿಸುವ ಅಧಿಕಾರವಿತ್ತು. ಸಂವಿಧಾನದ ಹನ್ನೊಂದನೆಯ ಅನುಸೂಚಿಯು ತಿಳಿಸುವಂತೆ ಪಂಚಾಯಿತಿಗಳು ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಾರ್ವಜನಿಕ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ, ಸಾರ್ವಜನಿಕ ವಿತರಣೆ, ನೀರಾವರಿ ಮತ್ತು ಅಂತರ್ಜಲ ಸಂಪನ್ಮೂಲಗಳು, ರಸ್ತೆಗಳು, ಕಟ್ಟಡಗಳು, ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳು, ಇತ್ಯಾದಿ. ಗ್ರಾಮೀಣ ಅಭಿವೃದ್ಧಿಗಳಿಗೆ ಸಂಬಂಧಿಸಿದ ಬಹುಮುಖ್ಯವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು.

**ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ (೧೯೯೩):** ಸ್ಥಳೀಯ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಿ, ಅವುಗಳ ಕಾರ್ಯವಿಧಾನವನ್ನು ಉತ್ತಮಗೊಳಿಸುವ ಉದ್ದೇಶದಿಂದ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ಪಂಚಾಯತ್ ರಾಜ್ ಕಾನೂನನ್ನು ಸರ್ಕಾರ ೧೯೯೩ ಮೇ ೧೦ ರಂದು ಜಾರಿಗೆ ತಂದಿತು. ಇವುಗಳನ್ನು ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ದೇಶದಲ್ಲಿಯೇ ಪ್ರಥಮ ಪಂಚಾಯತ್ ರಾಜ್ ಕಾಯಿದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿತ್ತು.

### ಗ್ರಾಮ ಪಂಚಾಯಿತಿಯ ರಚನೆ

ಸಾಮಾನ್ಯವಾಗಿ ೫,೦೦೦ ಕ್ಕಿಂತ ಕಡಿಮೆ ಇಲ್ಲದ ಮತ್ತು ೭,೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು

ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗುತ್ತದೆ. ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಚಾಮರಾಜನಗರ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಗಣನೆಗೆ ಪರಿಗಣಿಸದೆ, ಅವಶ್ಯಕ ಎಂದು ಕಂಡುಬರುವಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಹಾಸನ, ಕೊಡುಗು, ಶಿವಮೊಗ್ಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ(ಹತ್ತು ಕಿ.ಮೀ ವ್ಯಾಸದ) ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮಪಂಚಾಯಿತಿ ಎಂದು ನಿರ್ಧರಿಸಬಹುದಾಗಿದೆ. ಪ್ರತಿ ೪೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನೂ ಅಧ್ಯಕ್ಷರನ್ನಾಗಿಯೂ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗುವುದು. ೨೦೧೦ ರಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯ ಪ್ರಕಾರ ಜಿಲ್ಲೆಯಲ್ಲಿ ೩೨೧ ಗ್ರಾಮ ಪಂಚಾಯಿತಿಗಳಿದ್ದು, ೫,೩೬೭ ಗ್ರಾಮ ಪಂಚಾಯಿತಿ ಸದಸ್ಯರುಗಳಿದ್ದರು. ಗ್ರಾಮ ಪಂಚಾಯಿತಿ ಸದಸ್ಯರುಗಳ ಮೀಸಲಾತಿ ವಿವರ ಹೀಗಿದೆ. ಒಟ್ಟು ೫,೩೬೭ ಸದಸ್ಯರುಗಳ ಪೈಕಿ ೧,೦೬೬ ಪರಿಶಿಷ್ಟ ಜಾತಿಗೂ, ೫೨೨ ಪರಿಶಿಷ್ಟ ಪಂಗಡಕ್ಕೂ, ೧,೪೬೭ ಹಿಂದುಳಿದ 'ಅ' ವರ್ಗಕ್ಕೂ, ೩೨೯ ಹಿಂದುಳಿದ 'ಬ' ವರ್ಗಕ್ಕೂ ಹಾಗೂ ೧,೯೮೩ ಸಾಮಾನ್ಯ ವರ್ಗಕ್ಕೂ ಸ್ಥಾನಗಳು ಮೀಸಲಾಗಿದ್ದವು. ಒಟ್ಟು ೨,೨೬೮ ಮಹಿಳಾ ಸದಸ್ಯರುಗಳಲ್ಲಿ ೪೬೪ ಪರಿಶಿಷ್ಟ ಜಾತಿಗೂ, ೩೩೮ ಪರಿಶಿಷ್ಟ ಪಂಗಡಕ್ಕೂ, ೬೩೯ ಹಿಂದುಳಿದ 'ಅ' ವರ್ಗಕ್ಕೂ, ೫೧ ಹಿಂದುಳಿದ 'ಬ' ವರ್ಗಕ್ಕೂ ಹಾಗೂ ೮೮೬ ಸಾಮಾನ್ಯ ವರ್ಗದ ಮಹಿಳೆಯರಿಗೆ ಮೀಸಲಾಗಿದ್ದವು. ಕೋಷ್ಟಕ ೧೨.೧ರಲ್ಲಿ ೨೦೧೫ರಲ್ಲಿ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ತಾಲೂಕುವಾರು ಗ್ರಾಮ ಪಂಚಾಯಿತಿ ಸದಸ್ಯರುಗಳ ವಿವರ ಹಾಗೂ ಸದಸ್ಯರ ಮೀಸಲಾತಿ ವಿವರವನ್ನು ನೀಡಲಾಗಿದೆ.

**ಕೋಷ್ಟಕ: ೧೨.೧ ತಾಲೂಕುವಾರು ಗ್ರಾಮ ಪಂಚಾಯಿತಿ ಸದಸ್ಯರುಗಳ ವಿವರ ಹಾಗೂ ಸದಸ್ಯರ ಸಂಖ್ಯೆ (೨೦೧೫ರಲ್ಲಿ ನಡೆದ ಚುನಾವಣೆಯಂತೆ)**

| ತಾಲೂಕುಗಳು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಒಟ್ಟು ಸ್ಥಾನಗಳ ಸಂಖ್ಯೆ | ನಾಮಪತ್ರ ಸಲ್ಲಿಸದೇ ಖಾಲಿ ಉಳಿದಿರುವ ಸ್ಥಾನಗಳ ಸಂಖ್ಯೆ | ಒಟ್ಟು ಪ್ರಕಟಿಸಲಾದ | |
|---|---|---|---|---|---|
| | | | | ಅವಿರೋಧವಾಗಿ ಆಯ್ಕೆಯಾದ ಸದಸ್ಯರ ಸಂಖ್ಯೆ | ಮತದಾನ ನಂತರ ಆಯ್ಕೆಯಾದ ಸದಸ್ಯರ ಸಂಖ್ಯೆ |
| ತುಮಕೂರು | ೪೧ | ೭೪೬ | ೦ | ೩೩ | ೭೧೩ |
| ಗುಬ್ಬಿ | ೩೪ | ೬೨೬ | ೦ | ೫೨ | ೫೭೪ |
| ಕುಣಿಗಲ್ | ೩೬ | ೪೯೬ | ೨ | ೩೮ | ೪೫೬ |
| ತಿಪಟೂರು | ೨೬ | ೪೧೯ | ೦ | ೨೪ | ೩೯೫ |
| ತುರುವೇಕೆರೆ | ೨೭ | ೪೦೧ | ೧ | ೪೭ | ೩೫೩ |
| ಚಿಕ್ಕನಾಯಕನಹಳ್ಳಿ | ೨೮ | ೪೮೭ | ೦ | ೧೬ | ೪೭೧ |
| ಮಧುಗಿರಿ | ೩೯ | ೬೧೫ | ೦ | ೨೬ | ೫೮೯ |
| ಶಿರಾ | ೪೨ | ೬೬೦ | ೮ | ೪೧ | ೬೧೧ |
| ಕೊರಟಗೆರೆ | ೨೪ | ೩೯೨ | ೧ | ೧೩ | ೩೭೮ |
| ಪಾವಗಡ | ೩೩ | ೫೨೬ | ೦ | ೨೪ | ೫೦೨ |
| | **೩೩೦** | **೫೩೬೮** | **೧೨** | **೩೧೪** | **೫೦೪೨** |

| ತಾಲೂಕುಗಳು | ಅನುಸೂಚಿತ ಜಾತಿ | | | ಅನುಸೂಚಿತ ಪಂಗಡ | | | ಹಿಂದುಳಿದ ಅ ವರ್ಗ | | |
|---|---|---|---|---|---|---|---|---|---|
| | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು |
| ತುಮಕೂರು | ೭೦ | ೮೯ | ೧೫೯ | ೧೭ | ೪೫ | ೬೨ | ೩೯ | ೭೧ | ೧೧೦ |
| ಗುಬ್ಬಿ | ೪೫ | ೬೨ | ೧೦೭ | ೧೪ | ೪೨ | ೫೬ | ೪೬ | ೬೫ | ೧೧೧ |

| | | | | | | | | | |
|---|---|---|---|---|---|---|---|---|---|
| ಕುಣಿಗಲ್ | ೨೬ | ೪೩ | ೬೯ | ೦ | ೩೪ | ೩೪ | ೩೪ | ೬೯ | ೧೦೩ |
| ತಿಪಟೂರು | ೨೮ | ೪೦ | ೬೮ | ೨ | ೨೬ | ೨೮ | ೩೫ | ೪೯ | ೮೪ |
| ತುರುವೇಕೆರೆ | ೧೯ | ೩೪ | ೫೩ | ೧ | ೨೭ | ೨೮ | ೩೩ | ೫೪ | ೮೭ |
| ಚಿಕ್ಕನಾಯಕನಹಳ್ಳಿ | ೩೭ | ೫೭ | ೯೪ | ೧೪ | ೩೪ | ೪೮ | ೨೬ | ೪೮ | ೭೪ |
| ಮಧುಗಿರಿ | ೬೬ | ೮೬ | ೧೫೨ | ೨೮ | ೫೦ | ೭೮ | ೧೮ | ೪೨ | ೬೦ |
| ಶಿರಾ | ೬೫ | ೯೧ | ೧೫೬ | ೨೨ | ೫೧ | ೭೩ | ೧೮ | ೫೪ | ೭೨ |
| ಕೊರಟಗೆರೆ | ೪೦ | ೫೪ | ೯೪ | ೧೫ | ೨೮ | ೪೩ | ೧೪ | ೩೦ | ೪೪ |
| ಪಾವಗಡ | ೭೧ | ೮೯ | ೧೬೦ | ೩೯ | ೫೫ | ೯೪ | ೫ | ೧೪ | ೧೯ |
| | **೪೬೭** | **೬೪೫** | **೧೧೧೨** | **೧೫೨** | **೩೯೨** | **೫೪೪** | **೨೬೮** | **೪೯೬** | **೭೬೪** |

| **ತಾಲೂಕುಗಳು** | **ಹಿಂದುಳಿದ ಬ ವರ್ಗ** | | | **ಸಾಮಾನ್ಯ** | | | **ಒಟ್ಟು** | | |
|---|---|---|---|---|---|---|---|---|---|
| | **ಸಾ** | **ಮ** | **ಒಟ್ಟು** | **ಸಾ** | **ಮ** | **ಒಟ್ಟು** | **ಸಾ** | **ಮ** | **ಒಟ್ಟು** |
| ತುಮಕೂರು | ೨೦ | ೧೦ | ೩೦ | ೨೧೫ | ೧೭೦ | ೩೮೫ | ೩೬೧ | ೩೮೫ | ೭೪೬ |
| ಗುಬ್ಬಿ | ೧೪ | ೧೫ | ೨೯ | ೧೮೩ | ೧೪೦ | ೩೨೩ | ೩೦೨ | ೩೨೪ | ೬೨೬ |
| ಕುಣಿಗಲ್ | ೨೪ | ೮ | ೩೨ | ೧೫೭ | ೯೯ | ೨೫೬ | ೨೪೧ | ೨೫೩ | ೪೯೪ |
| ತಿಪಟೂರು | ೧೧ | ೧೧ | ೨೨ | ೧೨೬ | ೯೧ | ೨೧೭ | ೨೦೨ | ೨೧೭ | ೪೧೯ |
| ತುರುವೇಕೆರೆ | ೧೫ | ೧೨ | ೨೭ | ೧೨೭ | ೭೮ | ೨೦೫ | ೧೯೫ | ೨೦೫ | ೪೦೦ |
| ಚಿಕ್ಕನಾಯಕನಹಳ್ಳಿ | ೧೧ | ೮ | ೧೯ | ೧೪೬ | ೧೦೬ | ೨೫೨ | ೨೩೪ | ೨೫೩ | ೪೮೭ |
| ಮಧುಗಿರಿ | ೮ | ೨ | ೧೦ | ೧೭೮ | ೧೩೭ | ೩೧೫ | ೨೯೮ | ೩೧೭ | ೬೧೫ |
| **ತಾಲೂಕುಗಳು** | **ಹಿಂದುಳಿದ ಬ ವರ್ಗ** | | | **ಸಾಮಾನ್ಯ** | | | **ಒಟ್ಟು** | | |
| | **ಸಾ** | **ಮ** | **ಒಟ್ಟು** | **ಸಾ** | **ಮ** | **ಒಟ್ಟು** | **ಸಾ** | **ಮ** | **ಒಟ್ಟು** |
| ಕೊರಟಗೆರೆ | ೮ | ೩ | ೧೧ | ೧೧೩ | ೮೬ | ೧೯೯ | ೧೯೦ | ೨೦೧ | ೩೯೧ |
| ಪಾವಗಡ | ೧ | ೧ | ೨ | ೧೩೮ | ೧೧೩ | ೨೫೧ | ೨೫೪ | ೨೭೨ | ೫೨೬ |
| **ಒಟ್ಟು** | **೧೩೦** | **೭೨** | **೨೦೨** | **೧೫೭೮** | **೧೧೫೬** | **೨೭೩೪** | **೨೫೯೫** | **೨೭೬೧** | **೫೩೫೬** |

**ಸೂಚನೆ: ಸಾ: ಸಾಮಾನ್ಯ ಮ: ಮಹಿಳೆ**

ಮಂಡಲ ಪಂಚಾಯಿತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮ ಪಂಚಾಯಿತಿಗಳನ್ನು ಪುನಃ ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು. ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯಿತಿಗೆ ಪ್ರಾರಂಭದಲ್ಲಿ ರೂ.ಒಂದು ಲಕ್ಷಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು. ಪ್ರಸ್ತುತ ಈ ವಾರ್ಷಿಕ ಅನುದಾನವನ್ನು ಐದು ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

**ಶಾಸನಬದ್ಧ ಅನುದಾನ :** ಸರ್ಕಾರವು ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗುವಂತೆ ಹೆಚ್ಚು ಮುಕ್ತ ಅನುದಾನ ನೀಡಲು ಕ್ರಮಕೈಗೊಂಡಿದೆ. ೧೯೯೩ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿದ್ದ ಶಾಸನಬದ್ಧ ಅನುದಾನ ಕೇವಲ ರೂ. ಒಂದು ಲಕ್ಷ ಮಾತ್ರ ಆಗಿತ್ತು. ಇದನ್ನು ರೂ. ೩.೫ ಲಕ್ಷಗಳಿಗೆ ಹೆಚ್ಚಿಸಲಾಯಿತು. ೨೦೦೩ರಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಶಾಸನಬದ್ಧ ಅನುದಾನವನ್ನು ರೂ. ಐದು ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ನೇರ ಬಿಡುಗಡೆ ಮಾಡುವ ವಿಧಾನವನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನ್ನು ನವೆಂಬರ್ ೨೦೦೩ ರಿಂದ ಜಾರಿಗೆ ತರಲಾಗಿದೆ. ನೀರು ಪೂರೈಕೆ ಮತ್ತು ಬೀದಿ

ದೀಪಗಳಿಗೆ ಬಳಸಿದ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗಳು ಎಸ್ಕಾಂಗಳಿಗೆ ನಿಯಮಿತವಾಗಿ ತುಂಬಲು ವಿವರವಾದ ಕೈಪಿಡಿಯನ್ನು ಸರ್ಕಾರವು ೨೦೦೪ ರಿಂದ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳು ಕೈಗೊಂಡ ಕಾಮಗಾರಿಗಳು, ಬರ ಪರಿಹಾರ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳ್ಳಬೇಕು. ಅವುಗಳ ಗುಣಮಟ್ಟದಲ್ಲಿ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಪ್ರಮಾಣೀಕರಿಸದ ಹೊರತು ಅಂತಹ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡತಕ್ಕದ್ದಲ್ಲ ಎಂಬ ಸೂಚನೆಗಳನ್ನು ಸರ್ಕಾರ ಹೊರಡಿಸಿದೆ.

ಗ್ರಾಮಪಂಚಾಯಿತಿ ಸದಸ್ಯರ ತರಬೇತಿಗಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಾಪಿಸಿರುವ ಉಪಗ್ರಹ ಕೇಂದ್ರದ ಮೂಲಕ ಪ್ರಸಾರ ಮಾಡಲು ರಾಜ್ಯಾದ್ಯಂತ ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಒಂದು ಕಡೆ ದೃಶ್ಯ, ಎರಡು ಕಡೆ ವಾಕ್ ಶ್ರವಣ ಮೂಲಕ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಚಲನಚಿತ್ರಗಳು, ಸ್ಥಳೀಯ ಅಂತರ ಸಂವಾದ ಮತ್ತು ಸಮುದಾಯ ಸಂಘಟನೆಯಂತಹ ವಿಷಯಗಳನ್ನು ಅಳವಡಿಸಲಾಗಿದೆ. ಪಂಚಾಯತ್ ರಾಜ್ ಇತಿಹಾಸ ಮತ್ತು ರಚನೆ, ಗ್ರಾಮಸಭೆ, ಗ್ರಾಮಪಂಚಾಯಿತಿ ನಿಯಮಗಳು ಮತ್ತು ಪಂಚಾಯತ್ ಆಯವ್ಯಯ, ಲೆಕ್ಕಪತ್ರ ಮತ್ತು ಜಮಾಬಂದಿ, ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ಶಿಶುಸಂರಕ್ಷಣೆ, ನೀರು ನೈರ್ಮಲ್ಯ ಕುರಿತು ವಲಯವಾರು ವಿಚಾರಗಳು ಮತ್ತು ಸಾಮಾನ್ಯ ಆಸ್ತಿಪಾಸ್ತಿಗಳು, ಒಟ್ಟಾರೆ ಅಭಿವೃದ್ಧಿ ಮತ್ತು ಸ್ಥಳೀಯ ಯೋಜನೆ ರೂಪಿಸುವಿಕೆಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, ಮಾಹಿತಿ ಹಕ್ಕು ಮತ್ತು ಸ್ಥಳೀಯ ಕಂದಾಯ ಸಂಗ್ರಹಣೆ ಸೇರಿದಂತೆ ಸಾಮಾನ್ಯ ವಿಷಯಗಳನ್ನು ಅಳವಡಿಸಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

### ಗ್ರಾಮ ಪಂಚಾಯಿತಿಗಳ ಕಂಪ್ಯೂಟರೀಕರಣ

ರಾಜ್ಯದ ಎಲ್ಲಾ ೫೬೨೯ ಗ್ರಾಮ ಪಂಚಾಯಿತಿಗಳನ್ನು ಕಂಪ್ಯೂಟರೀಕರಿಸುವ ಪ್ರಮುಖ ಸಾಹಸ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಜಮೀನುಗಳ ಸರ್ವೇ ನಂ, ಅವುಗಳ ವಿವರಗಳು, ಸರ್ವಕುಟುಂಬ ಸಮೀಕ್ಷೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ಅಗತ್ಯವಾದ ತಂತ್ರಾಂಶಗಳನ್ನು ಈಗಾಗಲೇ ಅಭಿವೃದ್ಧಿಪಡಿಸಿದೆ. ತಂತ್ರಾಂಶ ಕುರಿತಂತೆ ತರಬೇತಿದಾರರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಲಯಗಳ ಯೋಜನೆ ಜನವಸತಿಗಳ ೨೦ ವಲಯಗಳ ಸುಮಾರು ೩೬೫ ಅಂಶಗಳಲ್ಲಿ ಮಾಹಿತಿಯನ್ನು "ಸಾಮಾನ್ಯ ಮಾಹಿತಿ" ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಅಂತರ್ಜಾಲ ತಾಣ (ವೆಬ್‌ಸೈಟ್)ದಲ್ಲಿ ಅಳವಡಿಸಲಾಗಿದೆ. ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಕಛೇರಿ, ವಿಧಾನಸೌಧ, ಶಾಸಕರ ಭವನ, ಬಹುಮಹಡಿ ಕಟ್ಟಡ, ಎಲ್ಲಾ ಸಚಿವಾಲಯ ಹಾಗೂ ಇಲಾಖಾ ಕಾರ್ಯದರ್ಶಿಗಳ ಕೊಠಡಿಗಳಲ್ಲಿ ಈ ಮಾಹಿತಿಯುಳ್ಳ 'ಕಿಯೋಸ್ಕ್‌ಗಳನ್ನು' ಸಾರ್ವಜನಿಕರ ಮಾಹಿತಿಗಾಗಿ ಇಡಲಾಗಿದೆ. ಈ ಮಾಹಿತಿಯನ್ನು ಪ್ರತಿ ವರ್ಷವೂ ಪರಿಷ್ಕರಿಸುವುದರಿಂದ ತಾಜಾ ಮಾಹಿತಿ ಲಭ್ಯವಾಗಿ ಪಂಚಾಯಿತಿಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

**ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿ ರಚನೆ:** ಗ್ರಾಮ ಪಂಚಾಯಿತಿಯು ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

೧) **ಉತ್ಪಾದನಾ ಸಮಿತಿ**

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ ಇರುತ್ತದೆ.

೨) **ಸಾಮಾಜಿಕ ನ್ಯಾಯ ಸಮಿತಿ**

(ಎ) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ.

(ಬಿ) ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಶೋಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ.

(ಸಿ) ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ ಕಾರ್ಯನಿರ್ವಹಿಸುತ್ತದೆ.

**೩) ಸೌಕರ್ಯಗಳ ಸಮಿತಿ**

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯಗಳ ಸಮಿತಿಯಿದೆ.

ಗ್ರಾಮ ಪಂಚಾಯಿತಿಯ ಆಡಳಿತ ವಿಭಾಗವು ಅನೇಕ ಖಾಸಗಿ ಹಾಗೂ ನೇಮಕ ಸದಸ್ಯರುಗಳನ್ನು ಹೊಂದಿದ್ದು, ೧) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮೂರು ಅಥವಾ ಐದು ಜನ ಸದಸ್ಯರು ಇರುತ್ತಾರೆ. ೨) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಸಭಾಪತಿಯಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾಜಿಕ ನ್ಯಾಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ. ೩) ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಠಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು.

ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ, ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು, ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ–ಆಪ್ಟ್ ಮಾಡಿಕೊಳ್ಳತಕ್ಕದ್ದು.

**ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಗಳು**

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು.

೨. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ೧೯೯೩ ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಿಗಳನ್ನು ನಿರ್ವಹಿಸತಕ್ಕದ್ದು.

೩. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಆಫೀಸರ್ (Drawing and Disbursing Officer) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು.

೪. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು.

೫. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು.

೬. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ.

೭. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ.

೮. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು.

೯. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಟಾನ, ಮೇಲ್ವಿಚಾರಣೆ, ಎಂ.ಐ.ಎಸ್.ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು.

೧೦. ಪಂಚತಂತ್ರ ತಂತ್ರಾಂಶ, ಇ–ಪಂಚಾಯತ್ ಮತ್ತು ಇ–ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ.

೧೧. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ

೧೨. ೨೦೦೫ ರ ಮಾಹಿತಿ ಹಕ್ಕು ಅಧಿನಿಯಮದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ.

೧೩. ಸಕಾಲ ಸೇವೆಗಳ ನಿರ್ವಹಣೆ

೧೪. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರೆ ಕಾರ್ಯಗಳು.

**ತಾಲೂಕು ಪಂಚಾಯಿತಿಯ ರಚನೆ**

ಕರ್ನಾಟಕದ ೧೭೭ ತಾಲೂಕುಗಳಲ್ಲಿ ತಾಲೂಕು ಪಂಚಾಯಿತಿಗಳನ್ನು ಈ ಕೆಳಗಿನ ಸದಸ್ಯರನ್ನು ಹೊಂದಿರುವಂತೆ ರಚಿಸಲಾಗಿದೆ.

೧. ಪ್ರತಿ ೧೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬರಂತೆ ಚುನಾಯಿತ ಸದಸ್ಯರಿರುತ್ತಾರೆ.

೨. ಯಾವ ಲೋಕಸಭಾ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲೂಕಿನ ಒಳಗೆ ಇದ್ದ ತಾಲೂಕನ್ನು ಪೂರ್ತಿ ಅಥವಾ ಭಾಗಶಃ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ.

೩. ತಾಲೂಕಿನಲ್ಲಿ ಮತದಾರರಾಗಿ ನೋಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಸದಸ್ಯರಾಗಿರುತ್ತಾರೆ.

೪. ತಾಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಲ್ಲಿ ೫/೧ ಭಾಗದಷ್ಟು ಅಧ್ಯಕ್ಷರು ಚೀಟಿ ಎತ್ತುವ ಮೂಲಕ ತಾಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಒಂದು ವರ್ಷ ಅವಧಿಗೆ ಆಯ್ಕೆ ಮಾಡುತ್ತಾರೆ. ಅಲ್ಲದೆ ಒಮ್ಮೆ ತಾಲೂಕು ಪಂಚಾಯಿತಿಗೆ ಅಧ್ಯಕ್ಷರಾದವರು ಎರಡನೇ ಅವಧಿಗೆ ಅಧ್ಯಕ್ಷರಾಗಲು ಅರ್ಹರಿರುವುದಿಲ್ಲ.

ಜಿಲ್ಲೆಯಲ್ಲಿ ೨೦೧೦ ರಲ್ಲಿ ನಡೆದ ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ತಾಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆ ೨೧೨(೧೧೬) ಆಗಿದ್ದು, ಅದರಲ್ಲಿ ೪೨(೨೩) ಪರಿಶಿಷ್ಟ ಜಾತಿ, ೨೦(೧೩) ಪರಿಶಿಷ್ಟ ಪಂಗಡದವರಿಗೆ, ೩೨(೧೯) ಹಿಂದುಳಿದ (ಅ) ವರ್ಗಕ್ಕೆ, ೯(೪) ಹಿಂದುಳಿದ (ಬ) ವರ್ಗಕ್ಕೆ ಹಾಗೂ ೧೦೯(೫೭) ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದಾರೆ. ಆವರಣದಲ್ಲಿ ನೀಡಿರುವ ಅಂಕಿಗಳು ಮಹಿಳಾ ಸದಸ್ಯರನ್ನು ಬಿಂಬಿಸುತ್ತವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೨ ಅನ್ನು ನೋಡಿ. ಹಾಗೂ ೨೦೧೬ರ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರ ವಿವರವನ್ನು ಕೋಷ್ಟಕ ೧೨.೨ಎ ನೋಡಿ

**ಕೋಷ್ಟಕ ೧೨.೨ ತುಮಕೂರು ಜಿಲ್ಲೆಯ ತಾಲೂಕುವಾರು ತಾಲೂಕು ಪಂಚಾಯಿತಿಗಳ ಸಂಖ್ಯೆ ಹಾಗೂ ಸದಸ್ಯರ ವಿವರ.**

| ಕ್ರ.ಸಂ | ತಾಲೂಕುಗಳು | ತಾ.ಪಂ ಕ್ಷೇತ್ರಗಳ ಸಂಖ್ಯೆ | ಚುನಾವಣೆ ಮುಂದೂಡಿದ ಕ್ಷೇತ್ರ | ಅವಿರೋಧವಾಗಿ ಆಯ್ಕೆಯಾದ ಸದಸ್ಯರ ಸಂಖ್ಯೆ | ಚುನಾವಣೆ ನಡೆದು ಪ್ರಕಟಿಸಲಾದ ಕ್ಷೇತ್ರಗಳ ಸಂಖ್ಯೆ | ಫಲಿತಾಂಶ ಘೋಷಿತವಾದ ಒಟ್ಟು ಕ್ಷೇತ್ರಗಳ ಸಂಖ್ಯೆ |
|---|---|---|---|---|---|---|
| ೧ | ತಿಪಟೂರು | ೭೧ | ೦ | ೦ | ೧೭ | ೧೭ |
| ೨ | ಚಿಕ್ಕನಾಯಕನಹಳ್ಳಿ | ೧೯ | ೦ | ೦ | ೧೯ | ೧೯ |
| ೩ | ಶಿರಾ | ೨೬ | ೦ | ೦ | ೨೬ | ೨೬ |
| ೪ | ಪಾವಗಡ | ೨೨ | ೦ | ೦ | ೨೨ | ೨೨ |
| ೫ | ಮಧುಗಿರಿ | ೨೪ | ೦ | ೦ | ೨೪ | ೨೪ |
| ೬ | ಕೊರಟಗೆರೆ | ೧೫ | ೦ | ೦ | ೧೫ | ೧೫ |
| ೭ | ತುಮಕೂರು | ೨೭ | ೦ | ೦ | ೨೭ | ೨೭ |
| ೮ | ಗುಬ್ಬಿ | ೨೪ | ೦ | ೧ | ೨೩ | ೨೪ |
| ೯ | ತುರುವೇಕೆರೆ | ೧೭ | ೦ | ೦ | ೧೭ | ೧೭ |
| ೧೦ | ಕುಣಿಕಲ್ | ೨೧ | ೦ | ೦ | ೨೧ | ೨೧ |
| ಒಟ್ಟು | | ೨೧೨ | ೦ | ೧ | ೨೧೧ | ೨೧೨ |

## ಕೋಷ್ಟಕ ೧೨.೨ಎ ತುಮಕೂರು ತಾಲ್ಲೂಕು ಪಂಚಾಯಿತಿಗೆ ೨೦೧೬ರಲ್ಲಿ ಆಯ್ಕೆಯಾದ ಸದಸ್ಯರು ಹಾಗೂ ಮೀಸಲಾತಿ ವಿವರ

| ಕ್ರ.ಸಂ | ತಾಲೂಕುಗಳು | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಹಿಂದುಳಿದ ವರ್ಗ–ಅ | | ಹಿಂದುಳಿದ ವರ್ಗ–ಬ | | ಸಾಮಾನ್ಯ | | ಒಟ್ಟು | | |
|---|---|---|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳ | ಒಟ್ಟು |
| ೧ | ತುಮಕೂರು | ೦೩ | ೦೩ | ೦೧ | ೦೧ | ೦೩ | ೦೩ | – | ೦೧ | ೦೮ | ೦೭ | ೧೫ | ೧೫ | ೩೦ |
| ೨ | ತಿಪಟೂರು | ೦೧ | ೦೨ | – | ೦೧ | ೦೧ | ೦೨ | ೦೧ | – | ೦೫ | ೦೪ | ೦೮ | ೦೯ | ೧೭ |
| ೩ | ಚಿಕ್ಕನಾಯಕನಹಳ್ಳಿ | ೦೨ | ೦೨ | ೦೧ | ೦೧ | – | ೦೨ | ೦೧ | – | ೦೫ | ೦೫ | ೦೯ | ೧೦ | ೧೯ |
| ೪ | ಶಿರಾ | ೦೩ | ೦೩ | ೦೧ | ೦೨ | ೦೧ | ೦೨ | ೦೧ | – | ೦೭ | ೦೬ | ೧೩ | ೧೩ | ೨೬ |
| ೫ | ಪಾವಗಡ | ೦೩ | ೦೩ | ೦೨ | ೦೨ | – | ೦೧ | – | – | ೦೬ | ೦೫ | ೧೧ | ೧೧ | ೨೨ |
| ೬ | ಮಧುಗಿರಿ | ೦೩ | ೦೩ | ೦೧ | ೦೨ | – | ೦೨ | ೦೧ | – | ೦೭ | ೦೫ | ೧೨ | ೧೨ | ೨೪ |
| ೭ | ಕೊರಟಗೆರೆ | ೦೨ | ೦೨ | ೦೧ | ೦೧ | ೦೧ | ೦೧ | – | – | ೦೪ | ೦೪ | ೦೮ | ೦೮ | ೧೬ |
| ೮ | ಗುಬ್ಬಿ | ೦೨ | ೦೨ | ೦೧ | ೦೧ | ೦೩ | ೦೨ | – | ೦೧ | ೦೬ | ೦೭ | ೧೨ | ೧೩ | ೨೫ |
| ೯ | ತುರುವೇಕೆರೆ | ೦೧ | ೦೧ | – | ೦೧ | ೦೨ | ೦೨ | – | ೦೧ | ೦೫ | ೦೩ | ೦೮ | ೦೮ | ೧೬ |
| ೧೦ | ಕುಣಿಗಲ್ | ೦೧ | ೦೨ | ೦೦ | ೦೧ | ೦೩ | ೦೨ | ೦೦ | ೦೧ | ೦೬ | ೦೪ | ೧೦ | ೧೦ | ೨೦ |
| | ಒಟ್ಟು | ೨೧ | ೨೩ | ೦೮ | ೧೩ | ೧೪ | ೧೯ | ೦೪ | ೦೪ | ೫೯ | ೫೦ | ೧೦೬ | ೧೦೯ | ೨೧೫ |

ಆಧಾರ: ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.

## ತುಮಕೂರು ಜಿಲ್ಲಾ ಪಂಚಾಯಿತಿಗೆ ೨೦೧೬ರಲ್ಲಿ ಆಯ್ಕೆಯಾದ ಸದಸ್ಯರು ಹಾಗೂ ಮೀಸಲಾತಿ ವಿವರ

| ಕ್ರ.ಸಂ | ತಾಲೂಕುಗಳು | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಹಿಂದುಳಿದ ವರ್ಗ–ಅ | | ಹಿಂದುಳಿದ ವರ್ಗ–ಬ | | ಸಾಮಾನ್ಯ | | ಒಟ್ಟು | | |
|---|---|---|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳ | ಒಟ್ಟು |
| ೧ | ತುಮಕೂರು | ೦೬ | ೦೬ | ೦೨ | ೦೩ | ೦೪ | ೦೫ | ೦೧ | ೦೧ | ೧೫ | ೧೪ | ೨೮ | ೨೯ | ೫೭ |

ಆಧಾರ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಜಿಲ್ಲಾ ಪಂಚಾಯಿತಿಯಲ್ಲಿ ಪಕ್ಷವಾರು ಗಳಿಸಿದ ಸ್ಥಾನ : * ಕಾಂಗ್ರೇಸ್ – ೨೩ * ಬಿ.ಜೆ.ಪಿ – ೧೯ * ಜನತಾದಳ (ಜಾ) – ೧೪ * ಪಕ್ಷೇತರ – ೧

ಪಂಚಾಯಿತಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸಿಕೊಳ್ಳಬಹುದಾಗಿದೆ. ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಐದು ವರ್ಷಗಳು. ಚುನಾಯಿತ ಸದಸ್ಯರು ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಆಯ್ಕೆಯು ಆಗಿಂದಾಗ್ಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ ನಿಯಮಕ್ಕನುಗುಣವಾಗಿರಬೇಕಾಗುತ್ತದೆ. ತಾಲೂಕು ಪಂಚಾಯಿತಿಗಳು ಕನಿಷ್ಠ ತಿಂಗಳಿಗೊಮ್ಮೆ ಸಭೆ ಸೇರಿ ತನ್ನ ಕಲಾಪ ನಡೆಸಬೇಕು. ತಾಲೂಕು ಪಂಚಾಯಿತಿ ಅಧ್ಯಕ್ಷರು ತಾಲೂಕಿನ ಎಲ್ಲಾ ವಿಧದ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸಿಬ್ಬಂದಿ ಮೇಲ್ವಿಚಾರಣೆ, ಹಣಕಾಸಿನ ನಿರ್ವಹಣೆ, ಗೊತ್ತುವಳಿಗಳ ನಿರ್ಣಯ, ಸ್ಥಾಯಿಸಮಿತಿಗಳ ನಿರ್ವಹಣೆ ಮುಂತಾದ ಅಧಿಕಾರಗಳನ್ನು ಹೊಂದಿರುವರು. ಇದರ ಸಿಬ್ಬಂದಿ ವೆಚ್ಚವನ್ನು ಸರ್ಕಾರದ ಅನುದಾನದಿಂದ ಭರಿಸಲಾಗುತ್ತದೆ. ತಾಲೂಕು ಪಂಚಾಯ್ತಿಯು ಕಾಲಕಾಲಕ್ಕೆ ಸರ್ಕಾರ ಸೂಚಿಸುವ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ತಾಲೂಕು ಪಂಚಾಯ್ತಿಗೆ ಸರ್ಕಾರವು ೨೭ ವಿಧದ ಕಾರ್ಯಗಳ ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ ಜಿಲ್ಲಾ ಪಂಚಾಯ್ತಿ ಸೂಚಿಸಿದ ವಾರ್ಷಿಕ ಯೋಜನೆಯ ಕರಡು ತಯಾರಿಕೆ ಮತ್ತು ತಾಲೂಕಿನ ಆಯವ್ಯಯ ಪತ್ರ ತಯಾರಿಸುವುದು, ವ್ಯವಸಾಯ ಹಾಗೂ ಅದರ ವಿಸ್ತರಣಾ ಯೋಜನೆಗಳು, ಜಮೀನು ಅಭಿವೃದ್ಧಿ ಹಾಗೂ ಭೂಸಾರ ಸಂರಕ್ಷಣೆ, ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ, ಪಶುಪಾಲನೆ ಹಾಗೂ ಹೈನು ಅಭಿವೃದ್ಧಿ, ಮೀನುಗಾರಿಕೆ, ಗೃಹ ಕೈಗಾರಿಕೆ, ಗ್ರಾಮೀಣ ವಸತಿ ಯೋಜನೆ, ಗ್ರಾಮಾಂತರ ಕುಡಿಯುವ ನೀರಿನ ಯೋಜನೆ, ಅಸಾಂಪ್ರದಾಯಿಕ ಇಂಧನ ಶಕ್ತಿಯ ಬಳಕೆ, ಗ್ರಾಮೀಣ ನೈರ್ಮಲ್ಯ, ರಸ್ತೆ ಚರಂಡಿಗಳ ನಿರ್ಮಾಣ, ತಾಲೂಕು ಪಂಚಾಯಿತಿಗಳ ಆಸ್ತಿ ನಿರ್ವಹಣೆ ಮತ್ತು ರಕ್ಷಣೆ, ಶಿಕ್ಷಣ (ಪ್ರಾಥಮಿಕ, ಪ್ರೌಢ, ತಾಂತ್ರಿಕ, ವೃತ್ತಿಪರ) ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಚಟುವಟಿಕೆಗಳು, ಸಮಾಜ ಕಲ್ಯಾಣ, ಗ್ರಾಮೀಣ ವಿದ್ಯುದೀಕರಣ ಹಾಗೂ ಸಹಕಾರಿ ಚಟುವಟಿಕೆಗಳಾಗಿವೆ.

**ತಾಲೂಕು ಪಂಚಾಯಿತಿಯ ಸ್ಥಾಯಿ ಸಮಿತಿಯ ರಚನೆ:** ತಾಲೂಕು ಪಂಚಾಯಿತಿಯು ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ, ೧) ಸಾಮಾನ್ಯ ಸ್ಥಾಯಿ ಸಮಿತಿ, ೨) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ೩) ಯೋಜನಾ ಸಮಿತಿ. ಈ ಮೂರು ಸಮಿತಿಗಳ ರಚನೆ ಮತ್ತು ಕಾರ್ಯವಿಧಾನ, ಸಾಮಾನ್ಯವಾಗಿ ಜಿಲ್ಲಾ ಪಂಚಾಯಿತಿಯ ಎಲ್ಲಾ ಸ್ಥಾಯಿ ಸಮಿತಿಗಳ ಕಾರ್ಯಕಲಾಪಗಳಂತೆ ನಿರ್ವಹಿಸುತ್ತದೆ.

## ಜಿಲ್ಲಾ ಪಂಚಾಯಿತಿ ರಚನೆ

ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯಿತಿ ಇದ್ದು, ಪ್ರತಿ ೪೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ೩೦,೦೦೦ ಜನಸಂಖ್ಯೆಗೆ ಒಬ್ಬರಂತೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ೧೮,೦೦೦ ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಹಾಗೂ ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಜಿಲ್ಲೆಯ ತಾಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಇರುತ್ತಾರೆ.

## ಸ್ಥಾನಗಳ ಮೀಸಲಾತಿ

ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸ್ಥಾನಗಳ ಮೀಸಲಾತಿ ಈ ಕೆಳಗಿನಂತಿದೆ.

೧. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ಕ್ರಮವಾಗಿ ಒಟ್ಟು ಸ್ಥಾನಗಳ ಸಂಖ್ಯೆಯ ಶೇ. ೧೫ರಷ್ಟು ಮತ್ತು ಶೇ. ೩ ರಷ್ಟಿರಬೇಕು.

೨. ಒಟ್ಟು ಸ್ಥಾನಗಳಲ್ಲಿ ⅓ ಸ್ಥಾನಗಳನ್ನು ಹಿಂದುಳಿದ "ಅ" ಮತ್ತು "ಬ" ಪ್ರವರ್ಗಗಳಿಗೆ, ಈ ⅓ ಸ್ಥಾನಗಳ ಪೈಕಿ ಈ ಪ್ರವರ್ಗಗಳಿಗೆ ಕ್ರಮವಾಗಿ ಶೇ. ೮೦ ಮತ್ತು ಶೇ. ೨೦ನ್ನು ಮೀಸಲಾಗಿಡುವುದು. ಹಿಂದುಳಿದ ವರ್ಗದವರು ಅವಕಾಶ ವಂಚಿತರಾಗಬಾರದೆಂಬ ಉದ್ದೇಶದಿಂದ "ಅ" ಪ್ರವರ್ಗದ ಯಾವುದೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ ಆ ಪ್ರವರ್ಗಕ್ಕೆ ಮೀಸಲಿಟ್ಟ ಹುದ್ದೆಗಳನ್ನು "ಬ" ಪ್ರವರ್ಗದ ವ್ಯಕ್ತಿಗಳಿಗೂ ಹಾಗೂ "ಬ" ಪ್ರವರ್ಗದ ಯಾವುದೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ "ಅ" ಪ್ರವರ್ಗದ ವ್ಯಕ್ತಿಗಳಿಗೂ ಆ ಹುದ್ದೆಗಳನ್ನು ತುಂಬಲಾಗುವುದು.

೩. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ⅓ ರಷ್ಟು ಸ್ಥಾನಗಳನ್ನು ಆಯಾ ವರ್ಗದ ಮಹಿಳೆಯರಿಗೆ ಮೀಸಲಿಡಲಾಗುವುದು.

೪. ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಹುದ್ದೆಗಳಿಗೂ ಸಹ ಮೀಸಲಾತಿಯನ್ನು ಆವರ್ತನ (ಸರದಿಯ) ಪದ್ಧತಿಯ ಮೇರೆಗೆ ಮಾಡಲಾಗುವುದು.

೫. ಈ ಎಲ್ಲಾ ಮೀಸಲಾತಿಯನ್ನು ಅಳವಡಿಸಿಕೊಂಡು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗುತ್ತದೆ.

**ಜಿಲ್ಲಾ ಯೋಜನಾ ಸಮಿತಿ**

ರಾಜ್ಯಾಂಗದ ೭೪ನೇ ತಿದ್ದುಪಡಿಯ ಕಲಂ ೨೪೩ರನ್ವಯ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳು ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಈ ಸಮಿತಿಯು ಸಮಗ್ರೀಕರಿಸಿ ಪಂಚಾಯಿತಿ ಮತ್ತು ಪುರಸಭೆಗಳ ನಡುವೆ ಪ್ರಾದೇಶಿಕ ಯೋಜನೆ ರೂಪಿಸುವುದು, ನೀರು ಹಂಚಿಕೆ ಮತ್ತು ಇತರೆ ಪ್ರಾಕೃತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನೂ ಸೇರಿ ಸಾಮಾನ್ಯ ಆಸಕ್ತಿಯ ವಿಚಾರಗಳಿಗೆ ಸಂಬಂಧಪಟ್ಟಂತೆ ಇಡಿಯಾಗಿ ಪರಿಗಣಿಸಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ಹಣಕಾಸು ಮತ್ತು ಇತರ ಸಂಪನ್ಮೂಲಗಳ ಲಭ್ಯತೆಯ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಯೋಜನಾ ಸಮಿತಿ ಕಾರ್ಯತಂತ್ರವನ್ನು ರೂಪಿಸುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳು ಮಾರ್ಗದರ್ಶನವನ್ನು ಮಾಡುತ್ತವೆ. ಸ್ಥಳೀಯ ಸಂಸ್ಥೆಗಳು ತಯಾರಿಸುವ ಪಂಚವಾರ್ಷಿಕ ಯೋಜನೆಗಳನ್ನು ಚರ್ಚಿಸಿ, ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾರ್ಯಗಳ ಅನುಷ್ಠಾನದ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ಹಾಗೂ ಇತರೆ ವಿಷಯಗಳಲ್ಲಿ ಸಮನ್ವಯ ಸಾಧಿಸುವ ವಿಶೇಷ ಅಧ್ಯಯನಗಳನ್ನು, ವಿಚಾರ ಸಂಕಿರಣಗಳನ್ನು ಹಾಗೂ ಹೊಸ ಸುಧಾರಣೆಗಳನ್ನು ತರುವ ಪ್ರಕಾರ್ಯಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ವಹಿಸಲಾಗಿದೆ.

ಪಂಚಾಯತ್ ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ರಾಜ್ಯ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ. ಈ ಸಂಸ್ಥೆಗಳಿಗೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" (ಸಿ.ಇ.ಓ) ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಮೂರನೆಯ ಎರಡು (⅔) ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವುದಕ್ಕೆ ಸಹಾಯಕವಾಗುತ್ತದೆ.

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯಿತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಸಭೆಯಲ್ಲಿ ನಿರ್ಣಯಿಸಿದ ಗೊತ್ತುವಳಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕೆ ಇದೆ. ಪ್ರತಿ ಗ್ರಾಮಪಂಚಾಯಿತಿ, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

**ಪಂಚಾಯಿತಿಗಳಿಗೆ ಬಹುಮಾನ**

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ೧೯೯೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ

ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ. ಒಂದು ಲಕ್ಷ, ರೂ. ೫೦ ಸಾವಿರ ಮತ್ತು ರೂ. ೨೫ ಸಾವಿರ), ತಾಲೂಕು ಪಂಚಾಯಿತಿಗಳಿಗೂ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ, ಮತ್ತು ರೂ. ೫೦ಸಾವಿರ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ರೂ. ಐದು ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯಿತಿ ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆ, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲಾ ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

### ಅಧ್ಯಕ್ಷರು/ಉಪಾಧ್ಯಕ್ಷರು

ಚುನಾಯಿತ ಸದಸ್ಯರು ತಮ್ಮಲ್ಲಿಯೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರೆಂದು ಆಯ್ಕೆ ಮಾಡಿಕೊಳ್ಳುವರು. ಹೀಗೆ ಆಯ್ಕೆಯಾದವರು ಸರ್ಕಾರ ನಿರ್ದಿಷ್ಟಪಡಿಸಿದಷ್ಟು ಸಂಬಳ, ಸಾರಿಗೆ ಭತ್ಯೆ ಹಾಗೂ ಇತರೆ ಸೌಲಭ್ಯ ಪಡೆಯುವರು. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಇರುತ್ತದೆ. ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಯಾದ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ರಾಜ್ಯ ಸರ್ಕಾರದ ರಾಜ್ಯ ಮಂತ್ರಿಗಳ ಸ್ಥಾನ ಹಾಗೂ ಉಪಾಧ್ಯಕ್ಷರಿಗೆ ಉಪಸಚಿವರ ಸ್ಥಾನ ಮಾನ ದೊರಕುತ್ತದೆ.

### ಆಡಳಿತ

ಕಾನೂನಿನನ್ವಯ ಜಿಲ್ಲಾ ಪಂಚಾಯತ್ ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು. ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದ ಗೊತ್ತುವಳಿ ನಕಲನ್ನು ವಿಭಾಗೀಯ ಕಮಿಷನರಿಗೆ ಸಲ್ಲಿಸಬೇಕು. ಆಡಳಿತ ಸುಗಮ ಹಾಗೂ ಪರಿಣಾಮಕಾರಿಯಾಗಿ ನಡೆಯಲು ಅನುಕೂಲವಾಗುವಂತೆ ಚುನಾಯಿತ ಸದಸ್ಯರು ಒಳಗೊಂಡಿರುವ ಸ್ಥಾಯಿಸಮಿತಿಗಳನ್ನು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲಾ ಪಂಚಾಯ್ತಿಗಳು ರಚಿಸಿಕೊಂಡ ಸ್ಥಾಯಿಸಮಿತಿಗಳು ಯಾವುವೆಂದರೆ (೧) ಸಾಮಾನ್ಯ ಸಮಿತಿ ೨) ಹಣಕಾಸು, ಲೆಕ್ಕ ಪರಿಶೋದನೆ ಮತ್ತು ಯೋಜನೆ ಸಮಿತಿ ೩) ಸಾಮಾಜಿಕ ನ್ಯಾಯ ಸಮಿತಿ ೪) ಶಿಕ್ಷಣ ಮತ್ತು ಆರೋಗ್ಯ ೫) ವ್ಯವಸಾಯ ಮತ್ತು ಕೈಗಾರಿಕಾ ಸಮಿತಿ.

ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗ ನಡೆಸುತ್ತದೆ. ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಪಂಚಾಯಿತಿಯ ಆಡಳಿತದ ಪ್ರತಿಯೊಂದು ವಿಭಾಗ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಆಡಳಿತಾತ್ಮಕ ಹಾಗೂ ಹಣಕಾಸಿನ ನಿರ್ವಹಣೆ, ಸಿಬ್ಬಂದಿ ನಿಯಂತ್ರಣ ಮುಂತಾದವುಗಳ ಮೇಲೆ ಅಧ್ಯಕ್ಷರ ಪರಮಾಧಿಕಾರವಿರುತ್ತದೆ. ನೈಸರ್ಗಿಕ ವಿಪತ್ತು ಬರಗಾಲದಂತಹ ತುರ್ತು ಸಂದರ್ಭಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಅನುವಾಗುವಂತೆ ಅಧ್ಯಕ್ಷರು ರೂ. ಒಂದು ಲಕ್ಷಗಳನ್ನು ಮಂಜೂರು ಮಾಡಬಹುದು. ಹೊಸ ಕಾನೂನಿನ್ವಯ ಜಿಲ್ಲೆಗೊಂದರಂತೆ ಜಿಲ್ಲಾ ಯೋಜನಾ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ.

### ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳು

ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯ ಯೋಜನೆಗಳ ರೂಪಿಸಿ ಅನುಷ್ಠಾನಗೊಳಿಸುವುದು, ತಾಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ನಡುವೆ ಪರಸ್ಪರ ಸಾಮರಸ್ಯ ಉಂಟು ಮಾಡುವುದು, ಅವು ಕೈಗೊಂಡಿರುವ ಅಭಿವೃದ್ಧಿ ಯೋಜನೆಯ ಕಾರ್ಯಪಾಲನೆ, ಪ್ರಗತಿ ಪರಿಶೀಲಿಸಿ ಅವಶ್ಯಕ ಮಾರ್ಗದರ್ಶನ ನೀಡುವುದು ಜಿಲ್ಲಾ ಪಂಚಾಯ್ತಿಯ ಸಾಮಾನ್ಯ ಕರ್ತವ್ಯಗಳಾಗಿವೆ. ಕಾಯ್ದೆಯಲ್ಲಿ ನಿಗದಿಗೊಳಿಸಿರುವಂತೆ ಜಿಲ್ಲಾ ಪಂಚಾಯ್ತಿಯು ೩೦ ವಿವಿಧ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗುವುದು. ಅವುಗಳಲ್ಲಿ ಮುಖ್ಯವಾದವೆಂದರೆ, ೧. ವ್ಯವಸಾಯ ಮತ್ತು

ತೋಟಗಾರಿಕೆ, ೨. ಭೂ ಅಭಿವೃದ್ಧಿ ಮತ್ತು ಭೂ ಸಾರ ಸಂರಕ್ಷಣೆ ೩. ಸಣ್ಣ ನೀರಾವರಿ ೪. ಪಶುಸಂಗೋಪನೆ ಮತ್ತು ಹೈನುಗಾರಿಕೆ, ೫. ಆಹಾರ ಸಂರಕ್ಷಣೆ ೬. ಸಣ್ಣ ಕೈಗಾರಿಕೆ ಅಭಿವೃದ್ಧಿ ೭. ಗ್ರಾಮೀಣ ವಸತಿ, ನೈರ್ಮಲ್ಯ ಮತ್ತು ಕುಡಿಯುವ ನೀರಿನ ಪೂರೈಕೆ ೮. ರಸ್ತೆಗಳು, ಕಟ್ಟಡಗಳು ಮತ್ತು ಸೇತುವೆ ನಿರ್ಮಾಣ ೯. ಅಸಾಂಪ್ರದಾಯಿಕ ಇಂಧನ ಬಳಕೆ ಅಭಿವೃದ್ಧಿ ೧೦. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಡತನ ನಿರ್ಮೂಲನೆ ಯೋಜನೆಗಳ ಅನುಷ್ಠಾನ ೧೧. ಪ್ರಾಥಮಿಕ, ಪ್ರೌಢ ಮತ್ತು ವೃತ್ತಿ ಹಾಗೂ ತಾಂತ್ರಿಕ ಶಿಕ್ಷಣ ವ್ಯವಸ್ಥೆಯ ನಿರ್ವಹಣೆ ೧೨. ಮಹಿಳಾ ಮತ್ತು ಮಕ್ಕಳ ಕಲ್ಯಾಣ ೧೩. ಸಮಾಜ ಕಲ್ಯಾಣ, ಪರಿಶಿಷ್ಟ ಜಾತಿ ಮತ್ತು ಪಂಗಡ ಕಲ್ಯಾಣ ಅಭಿವೃದ್ಧಿ ಯೋಜನೆ ೧೪. ಸಾರ್ವಜನಿಕ ಆಸ್ತಿಪಾಸ್ತಿ ಸಂರಕ್ಷಣೆ ೧೫. ಸಾರ್ವಜನಿಕ ಆಹಾರ ಸರಬರಾಜು ೧೬. ಗ್ರಾಮೀಣ ವಿದ್ಯುದೀಕರಣ ೧೭. ಸಹಕಾರ ೧೮. ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು ಮುಂತಾದವು.

**ಹಣಕಾಸು**

ಜಿಲ್ಲಾ ಪಂಚಾಯತ್‌ಗೆ ತನ್ನದೇ ಆದ ಪಂಚಾಯಿತಿ ನಿಧಿ ಇರುತ್ತದೆ. ಈ ನಿಧಿಯು ೧. ರಾಜ್ಯ ಸಂಚಿತ ನಿಧಿಯಿಂದ ವರ್ಗಾಯಿಸಿದ ಹಣ ೨. ಸರ್ಕಾರದ ಅನುದಾನ ೩. ಸಾಲಗಳು ೪. ಮುಂಗಡಗಳು ೫. ವಂತಿಕೆಗಳು ೬. ಆಸ್ತಿಗಳಿಂದ ಸಂದಾಯವಾಗುವ ಬಾಡಿಗೆ ೭. ವಿವಿಧ ಸೇವೆಗಳ ಶುಲ್ಕಗಳು ೮. ಬಡ್ಡಿ ಮುಂತಾದ ಸಂಪನ್ಮೂಲಗಳಿಂದ ಆದಾಯ ಸಂಗ್ರಹಿಸುತ್ತದೆ. ಜಿಲ್ಲಾ ಪಂಚಾಯಿತಿಯು ತನ್ನ ಆದಾಯದ ಕನಿಷ್ಟ ಶೇ. ೨೦ ರಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು.

**ಜಿಲ್ಲಾ ಪಂಚಾಯತ್, ತುಮಕೂರು**

ತುಮಕೂರು ಜಿಲ್ಲಾ ಪಂಚಾಯಿತಿಯು ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಂತೆ ೧೯೯೫ರಲ್ಲಿ ಸ್ಥಾಪನೆಗೊಂಡಿತು. ೨೦೧೬ರಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆ ನಡೆದಿದ್ದು, ಆಯ್ಕೆಯಾದ ೫೭(೨೯) ಸದಸ್ಯರಲ್ಲಿ ೧೨(೦೬) ಪರಿಶಿಷ್ಟ ಜಾತಿಗೂ, ೦೫(೦೩) ಪರಿಶಿಷ್ಟ ಪಂಗಡಕ್ಕೂ, ೯(೦೫) ಹಿಂದುಳಿದ (ಅ) ವರ್ಗಕ್ಕೂ, ೦೨(೦೧) ಹಿಂದುಳಿದ(ಬ) ವರ್ಗಕ್ಕೂ ಹಾಗೂ ೨೯(೧೪) ಸಾಮಾನ್ಯ ವರ್ಗಕ್ಕೂ ಸ್ಥಾನಗಳ ಮೀಸಲಾತಿ ನೀಡಲಾಗಿದೆ. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ಮಹಿಳಾ ಸದಸ್ಯರ ಸಂಖ್ಯೆಯನ್ನು ಸೂಚಿಸುತ್ತದೆ. ವಿವರಗಳಿಗೆ ಕೋಷ್ಟಕ ೧೨.೨ಎ ನೋಡಿ. ಜಿಲ್ಲಾ ಪಂಚಾಯತ್‌ನಲ್ಲಿ ಆರು ಸ್ಥಾಯಿ ಸಮಿತಿಗಳಿದ್ದು, ಅವುಗಳು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳನ್ನು ಮುಂದೆ ನೀಡಲಾಗಿದೆ.

೧) **ಸಾಮಾನ್ಯ ಸ್ಥಾಯಿ ಸಮಿತಿ**: ಇದು ತನ್ನ ವ್ಯಾಪ್ತಿಯ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ ಹಾಗೂ ಅವುಗಳ ಬಗ್ಗೆ ತೀರ್ಮಾನ ಕೈಗೊಳ್ಳುತ್ತದೆ. ಸಿಬ್ಬಂದಿ ವಿಷಯಗಳು, ಸಂಪರ್ಕ, ಕಟ್ಟಡಗಳು, ಗ್ರಾಮೀಣ ಗೃಹ ನಿರ್ಮಾಣ, ವಿಸ್ತರಣಾ ಕಾರ್ಯಗಳು, ಪ್ರಕೃತಿ ವಿಕೋಪಗಳಿಗಾಗಿ ಪರಿಹಾರ ಇತ್ಯಾದಿ.

೨) **ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿಸಮಿತಿ**: ಯೋಜನೆಗಳು, ಹಣಕಾಸು ಹಾಗೂ ಬಜೆಟ್ ರೂಪಿಸುತ್ತದೆ. ಲೆಕ್ಕಪತ್ರ ತಪಾಸಣೆಯ ವ್ಯವಹಾರಗಳ ಪರಿಶೀಲನೆ, ಅನುಮೋದನೆ, ಮಂಜೂರಾತಿ ನೀಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

೩) **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ:** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಕಾರ್ಯಕ್ರಮಗಳು, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಿತಾಸಕ್ತಿಗಳ ಸಂರಕ್ಷಣೆ. ಸಾಮಾಜಿಕ ನ್ಯಾಯ ಹಾಗೂ ಎಲ್ಲಾ ರೀತಿಯ ಶೋಷಣೆಗಳಿಂದ ಅವರನ್ನು ಸಂರಕ್ಷಿಸುವುದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ, ಇತರ ದುರ್ಬಲ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು.

೪) **ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ**: ಜಿಲ್ಲಾ ಪಂಚಾಯಿತಿಯು ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಹೊಣೆಗಾರಿಕೆ ಹೊಂದಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಯೋಜನೆಗಳ ಚೌಕಟ್ಟಿನೊಳಗೆ ಜಿಲ್ಲೆಯಲ್ಲಿ ಶಿಕ್ಷಣ ಯೋಜನೆಗಳನ್ನು ಕೈಗೊಳ್ಳುವುದು. ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯ ನಿರ್ಣಯ ಮಾಡುವುದು,

ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿತ ಕಾರ್ಯಗಳನ್ನು ನೆರವೇರಿಸುವುದು, ಆರೋಗ್ಯ ಸೇವೆಗಳು, ಆಸ್ಪತ್ರೆಗಳು, ನೀರು ಸರಬರಾಜು, ಕುಟುಂಬ ಕಲ್ಯಾಣ ಮತ್ತು ಇತರ ಕಾರ್ಯಗಳನ್ನು ನಿರ್ವಹಿಸುವುದು.

೫) **ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ:** ಕೃಷಿ ಉತ್ಪಾದನೆ, ಬದು ನಿರ್ಮಾಣ ಮತ್ತು ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡುವುದು. ಪಶುಸಂಗೋಪನೆ, ರೇಷ್ಮೆ, ಸಹಕಾರಗಳಿಗೆ ಸಂಬಂಧಿತ ಕಾರ್ಯ ನೆರವೇರಿಸುವುದು. ಗೃಹ ಹಾಗೂ ಗುಡಿ ಕೈಗಾರಿಕೆಗಳು ಸೇರಿದಂತೆ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ಉತ್ತೇಜಿಸುವುದು.

೬) **ಖರೀದಿ ಸಮಿತಿ:** ಜಿಲ್ಲಾ ಪಂಚಾಯಿತಿ ಆಡಳಿತ ವ್ಯಾಪ್ತಿಯ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಖರೀದಿ ಬಗ್ಗೆ ಚರ್ಚಿಸಿ, ನಿರ್ಧಾರ ಕೈಗೊಳ್ಳುವ ಕಾರ್ಯವನ್ನು ಹೊಂದಿರುತ್ತದೆ.

### ಸ್ಥಾಯಿ ಸಮಿತಿಗಳ ಕಾರ್ಯಾಚರಣೆ

೧) ಪ್ರತಿಯೊಂದು ಸ್ಥಾಯಿ ಸಮಿತಿಯು ಅಧ್ಯಕ್ಷರನ್ನು ಒಳಗೊಂಡಂತೆ ಏಳು ಚುನಾಯಿತ ಸದಸ್ಯರನ್ನು ಒಳಗೊಂಡಿರುತ್ತದೆ. ೨) ಯಾವ ಸದಸ್ಯರು ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳಿಗೆ ಸದಸ್ಯನಾಗಿರುವಂತಿಲ್ಲ. ೩) ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಹಣಕಾಸು ಮತ್ತು ಲೆಕ್ಕ ಪರಿಶೋಧನೆ ಹಾಗೂ ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ೪) ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ೫) ಇನ್ನುಳಿದ ಸಮಿತಿಗಳು ಆಯಾ ಸಮಿತಿಯ ಸದಸ್ಯರುಗಳ ಪೈಕಿಯಿಂದ ಒಬ್ಬನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿಕೊಳ್ಳುತ್ತದೆ. ೬) ಸಾಮಾಜಿಕ ನ್ಯಾಯ ಸಮಿತಿಯು ಒಬ್ಬ ಮಹಿಳಾ ಸದಸ್ಯೆ ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರ ವರ್ಗಗಳಿಗೆ ಸೇರಿದ ಸದಸ್ಯರನ್ನು ಒಳಗೊಂಡಿರುತ್ತದೆ. ೭) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಇನ್ನುಳಿದ ಸಮಿತಿಗಳಿಗೆ ಉಪಕಾರ್ಯದರ್ಶಿಗಳನ್ನು ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ನಾಮನಿರ್ದೇಶನ ಮಾಡುತ್ತಾರೆ. ೮) ಸ್ಥಾಯಿ ಸಮಿತಿಗಳ ಸದಸ್ಯರ ಮತ್ತು ಪದಾಧಿಕಾರಿಗಳ ಅವಧಿಯು ೨೦ ತಿಂಗಳು ಅಥವಾ ಜಿಲ್ಲಾ ಪಂಚಾಯಿತಿಯ ಸದಸ್ಯತ್ವ ಅವಧಿ ಮುಕ್ತಾಯವಾಗುವವರೆಗೆ ಇದರಲ್ಲಿ ಯಾವುದೂ ಮೊದಲೋ ಆ ಅವಧಿಯಾಗಿರುತ್ತದೆ. ಮತ್ತು ೯) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಎಲ್ಲಾ ಸ್ಥಾಯಿ ಸಮಿತಿಗಳ ಸಭೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ.

**ಗ್ರಾಮೀಣ ನೀರು ಸರಬರಾಜು :** ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಗ್ರಾಮೀಣ ನೀರು ಪೂರೈಕೆಯ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ) ವಿಭಾಗಗಳು ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಸ್ತುತ ಈ ಕಾರ್ಯವನ್ನು ಜಿಲ್ಲಾ ಪಂಚಾಯಿತಿಗೆ ವಹಿಸಿಕೊಡಲಾಗಿದೆ. ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯ ವಲಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರ ವಲಯ) ಎಂದು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ಈ ಪ್ರಮುಖ ಯೋಜನೆಗಳಲ್ಲದೆ ಜಿಲ್ಲಾ ಕಿರು ನೀರು ಸರಬರಾಜು ಯೋಜನೆ, ತೆರೆದ ಬಾವಿ ಯೋಜನೆ ಮುಂತಾದ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿ ಪ್ರದೇಶಗಳಿಗೆ ಪ್ರತ್ಯೇಕ ಕುಡಿಯುವ ನೀರಿನ ಯೋಜನೆಗಳನ್ನು ವಿಶೇಷ ಘಟಕ ಯೋಜನೆಗಳಡಿ ಅಳವಡಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಮೂಲಕ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಕೊಳಾಯಿಗಳ ಮೂಲಕ ಒದಗಿಸಲಾಗುತ್ತಿದೆ. ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಿಗೆ ಕೊಳಾಯಿ ನೀರಿನ ಸರಬರಾಜು ಯೋಜನೆಗಳನ್ನು, ನೀರಿನ ಕೊರತೆಯಿರುವ ಎಲ್ಲಾ ಗ್ರಾಮಗಳಿಗೆ ಟ್ಯಾಂಕುಗಳಲ್ಲಿ ನೀರು ಪೂರೈಕೆ ಮಾಡುವುದು ಸರ್ಕಾರದ ಕಾರ್ಯನೀತಿಯಾಗಿದೆ. ನೀರು ಸರಬರಾಜು ಯೋಜನೆಯ ವೆಚ್ಚವನ್ನು ಸರ್ಕಾರವು ಭರಿಸುತ್ತಿದೆ. ಇವುಗಳ ಕಾರ್ಯನಿರ್ವಹಣೆಯನ್ನು ಜಿಲ್ಲೆಯ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ (ಪಿ.ಹೆಚ್.ಇ–೩) ವಿಭಾಗ ನೋಡಿಕೊಳ್ಳುತ್ತದೆ.

**ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ (ವಿಶ್ವಬ್ಯಾಂಕ್ ನೆರವು)**

ಕರ್ನಾಟಕ ಸರ್ಕಾರವು ಕರ್ನಾಟಕದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗೆ ರೂ. ೪೪೨.೨೦ ಕೋಟಿಗಳ ಸಾಲವನ್ನು ವಿಶ್ವ ಬ್ಯಾಂಕಿನಿಂದ ಪಡೆದಿದ್ದು, ಈ ಯೋಜನೆಯು ೧,೨೦೦ ಹಳ್ಳಿಗಳನ್ನು ಒಳಗೊಂಡಿದೆ. ಈ ಯೋಜನೆಯ ಮೊದಲನೆಯ ಹಂತದಲ್ಲಿ ೨೫೦ ಹಳ್ಳಿಗಳು ಮತ್ತು ಎರಡನೇ ಹಂತದಲ್ಲಿ ೯೫೦ ಹಳ್ಳಿಗಳು ಸೇರಿವೆ. ಈ ಹಳ್ಳಿಗಳನ್ನು ಕರ್ನಾಟಕದ ೧೩ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ, ದಕ್ಷಿಣಕನ್ನಡ, ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲಬರ್ಗಾ, ಬೀದರ್, ತುಮಕೂರು ಮತ್ತು ಹಾಸನ ಜಿಲ್ಲೆಗಳಿಂದ ಆಯ್ಕೆ ಮಾಡಲಾಗಿದೆ.

ಈ ಕೆಳಕಂಡ ಮಾನದಂಡಗಳ ಅಡಿಯಲ್ಲಿ ಬರುವ ಹಳ್ಳಿಗಳನ್ನು ಆಯ್ಕೆ ಮಾಡಲಾಗಿದೆ. ೧) ಅತೀ ತೀವ್ರವಾದ ನೀರಿನ ಕೊರತೆ ಇರುವ ಹಳ್ಳಿಗಳು. ೨) ನಾರು ಹುಣ್ಣಿನ ಹುಳು, ಫ್ಲೋರೋಸಿಸ್, ಹೆಪಟೈಟಸ್, ಕಾಲರ ಮತ್ತು ಜಠರ–ಕರುಳು ಬೇನೆಯಂತಹ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ನೀರಿನ ಸರಬರಾಜು ಹೊಂದಿರುವ ಹಳ್ಳಿಗಳು. ೩) ಪ್ರಾಂತೀಯ ನೀರು ಸರಬರಾಜು ಯೋಜನೆಗಳು ಅಗತ್ಯವಿರುವ ಸಾಕಷ್ಟು ಅಂತರ್ಜಲ ಮೂಲವಿಲ್ಲದ ಹಳ್ಳಿಗಳು. ೪) ೪೦ ಎಲ್.ಪಿ.ಸಿ.ಡಿ. ಗಿಂತ ಕಡಿಮೆ ನೀರು ಸರಬರಾಜು ಆಗುತ್ತಿರುವ ಹಳ್ಳಿಗಳು. ಮತ್ತು ೫) ಶೌಚಾಲಯ ಹಾಗೂ ಒಳಚರಂಡಿ ಸಮಸ್ಯೆ ಇರುವ ಹಳ್ಳಿಗಳು. ಇಲ್ಲಿ ನಮೂದಿಸಿರುವ ಕಾರ್ಯಾನುಷ್ಠಾನ ನಿಯಮಗಳನ್ನು ಉಪಯೋಗಿಸಿಕೊಂಡು ತಮ್ಮ ಜಿಲ್ಲೆಯಲ್ಲಿರುವ ಹಳ್ಳಿಗಳನ್ನು ಆದ್ಯತೆಯ ಮೇಲೆ ಆರಿಸಿಕೊಳ್ಳುವ ಜವಾಬ್ದಾರಿಯು ಜಿಲ್ಲಾ ಪಂಚಾಯಿತಿಯದಾಗಿದೆ.

**ಜಿಲ್ಲಾ ಪಂಚಾಯಿತಿಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಮುಖ್ಯ ಕಾರ್ಯ ಚಟುವಟಿಕೆಗಳೆಂದರೆ.**

ಅ) ಅಭಿವೃದ್ಧಿ ಕಾರ್ಯಗಳು – ೧. ಗ್ರಾಮೀಣ ನೀರು ಸರಬರಾಜು, ೨. ಪರಿಸರ ನೈರ್ಮಲ್ಯ.

ಆ) ಗ್ರಾಮದ ರಸ್ತೆಗಳು ಮತ್ತು ಒಳಚರಂಡಿ.

ಇ) ವಾಸಸ್ಥಳದ ಅಭಿವೃದ್ಧಿ– ೧. ಅಂತರ್ಜಲ ನವೀಕರಣ, ೨. ಸೋರುವಿಕೆಯನ್ನು ಕಂಡುಹಿಡಿಯುವ ಸರ್ವೆ ಮತ್ತು ರಿಪೇರಿ ಕಾರ್ಯಗಳು.

ಈ) ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಪ್ರಯೋಗಾಲಯಗಳ ನಿರ್ಮಾಣ.

ಉ) ಜಾಗೃತಿಯನ್ನುಂಟು ಮಾಡಲು ಮತ್ತು ಸಮುದಾಯ ಸಹಭಾಗಿತ್ವಕ್ಕೆ ಸರಕಾರೇತರ ಸಂಸ್ಥೆಗಳನ್ನು ತೊಡಗಿಸುವುದು.

ಊ) ತರಬೇತಿ ಕಾರ್ಯಕ್ರಮಗಳು ಮತ್ತು

ಋ) ಸಮುದಾಯ ಜಾಗೃತಿ ಮತ್ತು ಉತ್ತಮವಾದ ಆರೋಗ್ಯಕ್ಕೆ ಸಂಪರ್ಕ ಮುಂತಾದವು.

ಕರ್ನಾಟಕ ಸರ್ಕಾರವು ನೀರು ಸರಬರಾಜು ಕಾರ್ಯಗಳಿಗೆ ಶೇ. ೧೦೦ರಷ್ಟು ಹಣ ಒದಗಿಸುತ್ತದೆ. ಆದರೆ, ಪರಿಸರ ನೈರ್ಮಲ್ಯದ ವೆಚ್ಚದಲ್ಲಿ ಶೇ. ೭೦ ರಷ್ಟನ್ನು ಒದಗಿಸಿ ಉಳಿದ ಶೇ. ೩೦ರಷ್ಟು ಹಣ ಅಥವಾ ವಸ್ತು ಅಥವಾ ಶ್ರಮದ ರೂಪದಲ್ಲಿ ಅಥವಾ ಈ ಮೂರು ಸೇರಿದಂತೆ ಗ್ರಾಮಸ್ಥರು ಒದಗಿಸಬೇಕು. ಕರ್ನಾಟಕ ಸರ್ಕಾರವು ಮಾಡಿದ ವೆಚ್ಚವನ್ನು ತದನಂತರ ವಿಶ್ವಬ್ಯಾಂಕು ಭರಿಸುತ್ತದೆ. ಈ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಒಂದನೇ ಹಂತದಲ್ಲಿ ೩೦ ಮತ್ತು ಎರಡನೇ ಹಂತದಲ್ಲಿ ೭೦ ಹಳ್ಳಿಗಳನ್ನು ಆರಿಸಲಾಗಿದೆ.

ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಯೋಜಿಸಿ ಆರ್ಥಿಕ ನೆರವು ಹಾಗೂ ಅನುದಾನ ನೀಡುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುಮೋದನೆಗೊಂಡ ಕೆಳಗೆ ನೀಡಲಾದ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯಿತಿ ಹಣ ಸಹಾಯ ಒದಗಿಸಿ ಮೇಲ್ವಿಚಾರಣೆ ಕೈಗೊಳ್ಳುತ್ತದೆ. ೧) ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆ ೨) ಸ್ವರ್ಣ ಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆ ೩) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ ೪) ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆ ೫) ಇಂದಿರಾ ಆವಾಸ್ ಯೋಜನೆ ೬) ಅಂಬೇಡ್ಕರ್ ಆವಾಸ್ ಯೋಜನೆ ೭) ಆಶ್ರಯ ಯೋಜನೆ ೮) ಉದ್ಯೋಗ ಭರವಸೆ ಯೋಜನೆ ೯) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಯೋಜನೆ ೧೦) ಸುಧಾರಿತ ಅಸ್ತ್ರ ಒಲೆ ಯೋಜನೆ ೧೧) ಜೈವಿಕ ಅನಿಲ ಯೋಜನೆ ೧೨) ಗ್ರಾಮೀಣ ಸಾಮೂಹಿಕ ವಿಮಾ ಯೋಜನೆ ೧೩) ಸ್ವಸ್ತಿ ಗ್ರಾಮ ಯೋಜನೆ ೧೪) ನಿರ್ಮಲ ಗ್ರಾಮಯೋಜನೆ ೧೫) ನವ ಗ್ರಾಮ ಯೋಜನೆ ೧೬) ಕುಟೀರ ಜ್ಯೋತಿ ಯೋಜನೆ ೧೭) ನೆರಳಿನ ಭಾಗ್ಯ ಯೋಜನೆ ೧೮) ಸುವರ್ಣ ಗ್ರಾಮ ಯೋಜನೆ.

**ಪುರಸಭೆಗಳು**

೧೮೫೦ರ ಕಾಯ್ದೆಯ ಪ್ರಕಾರ ಕಮೀಷನರ್‌ಗಳ ಆಳ್ವಿಕೆಯ ಕಾಲದಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರಯೋಗಾರ್ಥವಾಗಿ ಪೌರಸಮಿತಿಗಳನ್ನು ಪ್ರಾರಂಭಿಸಲಾಯಿತು. ೧೮೬೫ರಲ್ಲಿ ಉಳಿದ ಜಿಲ್ಲಾ ಕೇಂದ್ರಗಳಲ್ಲಿ ಪೌರಸಮಿತಿಗಳನ್ನು ರಚಿಸಲಾಯಿತು. ನಂತರ ಇತರ ಎಲ್ಲಾ ಪಟ್ಟಣಗಳಲ್ಲಿ ಈ ಪೌರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಪೌರ ಸಂಸ್ಥೆಗಳು ೫೦ ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರಿಂದ ೧೯೦೨ ಮತ್ತು ೧೯೦೬ ರಲ್ಲಿ ಪೌರ ಸಂಸ್ಥೆಗಳಿಗೆ ಶಾಸನಬದ್ಧ ನೆಲೆ ನೀಡಲಾಯಿತು.ಅದಕ್ಕಾಗಿ ೧೯೦೨ರ ಮೈಸೂರು ಸ್ಥಳೀಯ ಮಂಡಳಿಗಳ ನಿಬಂಧನೆ-೨ ನ್ನು ಜಾರಿಗೊಳಿಸಲಾಯಿತು. ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಐಯ್ಯರ್ ಅವರು ಪೌರಸಂಸ್ಥೆಗಳ ರಚನೆಗಳ ನಿಯಮಾವಳಿಗಳ ಬಗ್ಗೆ ಕರಡು ಪ್ರತಿಗಳನ್ನು ರಚಿಸಿ ೧೮೮೫ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದರು. ಇವರ ಪ್ರಗತಿ ಪರ ವಿಚಾರಗಳನ್ನು ಆಧರಿಸಿ ೧೯೦೩ರಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರಚನೆಗೊಂಡವು. ಈ ಕಾಯ್ದೆಗಳ ೧೯೦೧ರ ಬೊಂಬಾಯಿ ಜಿಲ್ಲಾ ಪುರಸಭೆಗಳ ಕಾಯ್ದೆ, ಮಧ್ಯ ಪ್ರಾಂತಗಳ ಸ್ಥಳೀಯ ಮಂಡಳಿಗಳ ಕಾಯ್ದೆ ಮತ್ತು ೧೯೦೬ರ ಮೈಸೂರು ರೆಗ್ಯುಲೇಷನ್ ಕಾಯ್ದೆ-೨ ಇವುಗಳನ್ನು ಆಧರಿಸಿದ್ದವು.

೧೮೭೦ರ ಪುರಸಭೆ ನಿಬಂಧನೆ (೧೮೭೦ ರ ಭಾರತ ಸರ್ಕಾರ ಕಾಯ್ದೆ)ಯನ್ನು ೧೮೭೧ರಲ್ಲಿ ಜಾರಿಗೊಳಿಸಿ ನಂತರ ೧೮೮೮ರಲ್ಲಿ ಮೈಸೂರು ಪುರಸಭೆಗೆ ಮೇಲಿನ ನಿಬಂಧನೆಯ ಪ್ರಕಾರ ಶಾಸನಬದ್ಧ ಸ್ಥಾನವನ್ನು ನೀಡಲಾಯಿತು. ಸಣ್ಣ ಪಟ್ಟಣಗಳಿಗೆ ಸಮಿತಿಗಳನ್ನು ರಚಿಸಲು ಸಾಧ್ಯವಿಲ್ಲದಿರುವೆಡೆಯಲ್ಲಿ ಮುನಿಸಿಪಲ್ ನಿಬಂಧನೆಗಳನ್ನು ಕಂದಾಯದ ಅಧಿಕಾರಿಗಳ ಮೂಲಕ ಜಾರಿಗೊಳಿಸಲಾಯಿತು. ಆಗಿನ ಪುರಸಭೆಗಳ ಸಮಿತಿಗಳಲ್ಲಿಯೂ ಸ್ಥಳೀಯ ಸದಸ್ಯರಿದ್ದು, ಜಿಲ್ಲಾ ಅಧಿಕಾರಿಗಳು ಆ ಸಮಿತಿಯ ಮುಖ್ಯಸ್ಥರಾಗಿದ್ದರು. ಜಿಲ್ಲೆಯಲ್ಲಿನ ಮೂರು ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಕಡೆ ತಾತ್ಕಾಲಿಕ ಪೌರಸಮಿತಿಗಳನ್ನು ರಚಿಸಿ ಆ ಸಂಸ್ಥೆಗಳ ಅಧ್ಯಕ್ಷರನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇಲೆ ಸರ್ಕಾರವು ನೇಮಿಸುತ್ತಿತ್ತು. ೧೮೬೧ರ ನಿಬಂಧನೆಯಡಿಯಲ್ಲಿ ಈ ಕೆಳಗಿನ ತೆರಿಗೆಗಳನ್ನು ವಿಧಿಸಲಾಗಿತ್ತು. ಸುಂಕದಕಟ್ಟೆ ತೆರಿಗೆ (ಆಕ್ಟ್ರಾಯ್), ಮನೆ-ನಿವೇಶನ ತೆರಿಗೆ, ಜಮೀನುಗಳ ಮೇಲೆ ತೆರಿಗೆ, ಉದ್ಯೋಗ ಮತ್ತು ಕಸುಬುಗಳ ಮೇಲೆ ತೆರಿಗೆ, ಸವಾರಿ ಬಂಡಿ, ಗಾಡಿಗಳ ಮೇಲೆ ತೆರಿಗೆ, ಇಟ್ಟಿಗೆ ಮತ್ತು ಹೆಂಚುಗಳ ಮೇಲೆ ತೆರಿಗೆ. ಆಕ್ಟ್ರಾಯ್ ಸಂಗ್ರಹವು ಸಾಕಷ್ಟಿಲ್ಲದಿದ್ದಾಗ ಅದಕ್ಕೆ ಬದಲಾಗಿ ಮನೆ ಕಂದಾಯವನ್ನು ಜಾರಿಗೊಳಿಸಲಾಗುತ್ತಿತ್ತು. ಹೀಗೆ ಸಂಗ್ರಹಿಸಲಾದ ಎಲ್ಲಾ ತೆರಿಗೆಗಳನ್ನು ಪುರಸಭೆಗೆ ಕೊಡಲಾಗುತ್ತಿತ್ತು.

ಕಾಲಾನಂತರ, ೧೮೭೦ರ ನಿಬಂಧನೆಯನ್ನು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಅಗತ್ಯಗಳಿಗೆ ಹೊಂದಿಕೊಳ್ಳುವಂತೆ ೧೮೮೦, ೧೮೮೯, ೧೯೦೦ ಮತ್ತು ೧೯೦೬ರಲ್ಲಿ ತಿದ್ದುಪಡಿ ಮಾಡಿ, ೧೯೦೭ರ ಜನವರಿ ಒಂದರಿಂದ ಜಾರಿಗೊಳಿಸಲಾಯಿತು. ಅದರ ಪ್ರಕಾರ ಮೊದಲಿನ ತಾತ್ಕಾಲಿಕ ಪುರಸಭೆಗಳನ್ನು ೧೯೦೧ ಮತ್ತು ೧೯೦೮ರಲ್ಲಿ ಪಟ್ಟಣ ಮುನಿಸಿಪಾಲಿಟಿಗಳೆಂದು ಸಕ್ರಮಗೊಳಿಸಲಾಯಿತು. ಮೈಸೂರು ನಗರ ಟ್ರಸ್ಟ್‌ಅನ್ನು ೧೯೦೩ರಲ್ಲಿ ರಚಿಸಲಾಯಿತು. ನಂತರ ೧೯೦೬ರ ಮುನಿಸಿಪಲ್ ಕಾಯ್ದೆಯನ್ನು ೧೯೧೧, ೧೯೧೮ ಮತ್ತು ೧೯೨೩ರಲ್ಲಿ ತಿದ್ದುಪಡಿ ಮಾಡಿ, ಪೌರಸಂಸ್ಥೆಗಳ ರಚನೆ ಮತ್ತು ಕಾರ್ಯವಿಧಾನದಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು.

೧೯೦೬ರ ರೆಗ್ಯುಲೇಷನ್ ನಂ ೭ರ ಪ್ರಕಾರ ಸಮಿತಿಯ ಅವಧಿಯು ಮೂರು ವರ್ಷಗಳಾಗಿದ್ದು, ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ೧೯೧೪ರಲ್ಲಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಕಾರ್ಯವನ್ನು ಉತ್ತಮಪಡಿಸಲು ಸರಕಾರವು ಎರಡು ಸಮಿತಿಗಳನ್ನು ರಚಿಸಿತು. ಅವು ೧. ಎಂ.ಕಾಂತರಾಜ ಅರಸರು ಅಧ್ಯಕ್ಷರಾಗಿದ್ದ ಸ್ಥಳೀಯ ಸ್ವಯಂ ಆಡಳಿತ ಸರಕಾರ ಸಮಿತಿ, ೨. ಶ್ರೀನಿವಾಸ ಐಯ್ಯಂಗಾರ್‌ರವರ ನೇತೃತ್ವದ ಸ್ಥಳೀಯ ಹಣಕಾಸು ಸಮಿತಿ. ಸಂಸ್ಥೆಗಳ ರಚನೆ ಮತ್ತು ಅಧಿಕಾರವನ್ನು ಉದಾರೀಕರಣಗೊಳಿಸಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡುವುದೇ ಈ ಸಮಿತಿಗಳ ಸ್ಥಾಪನೆಯ ಹಿಂದಿನ ಉದ್ದೇಶವಾಗಿತ್ತು. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ೧೯೧೮ರ ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ನಂತರ ೧೯೧೮ರ ಮುನಿಸಿಪಲ್ ರೆಗ್ಯುಲೇಷನ್ ಐದು ಮತ್ತು ಆರರ ಅಡಿಯಲ್ಲಿ ಪುರಸಭಾ ಆಡಳಿತದಲ್ಲಿ ಮುಖ್ಯವಾದ ಬದಲಾವಣೆಗಳನ್ನು ಮಾಡಲಾಯಿತು. ಅದರ ಪ್ರಕಾರ ಕಾರ್ಯನಿರ್ವಹಿಸದ ಮುನಿಸಿಪಾಲಿಟಿಗಳನ್ನು ರದ್ದುಪಡಿಸಲು

ಅವಕಾಶ ಮಾಡಿಕೊಡಲಾಯಿತು. ಕಾರ್ಯಾಂಗದ ಆಜ್ಞೆಗಳ ಪ್ರಕಾರ ರಚಿತವಾದ ಮುನಿಸಿಪಾಲಿಟಿಗಳನ್ನು ನಗರ, ಪಟ್ಟಣ, ಮುನಿಸಿಪಾಲಿಟಿಗಳೆಂದು ಅವುಗಳ ಪ್ರಾಮುಖ್ಯತೆಯ ಮೇಲೆ ವರ್ಗೀಕರಿಸಲಾಯಿತು. ಇದರಿಂದ ನಗರ ಮುನಿಸಿಪಲ್ ಸಮಿತಿಗಳಲ್ಲಿ ಮತ್ತು ಇತರ ಪೌರ ಸಂಸ್ಥೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚುನಾಯಿತ ಸದಸ್ಯರುಗಳಿರುವಂತಾಯಿತು. ನಗರ ಮುನಿಸಿಪಾಲಿಟಿಗಳು ತಮ್ಮದೇ ಆದ ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅವಕಾಶ ನೀಡಲಾಯಿತು. ಪೌರಸಂಸ್ಥೆಗಳಲ್ಲಿ ಹಸ್ತಕ್ಷೇಪವನ್ನು ಕನಿಷ್ಠ ಮಟ್ಟಕ್ಕೆ ಇಳಿಸಲಾಯಿತು. ಒಂದು ದಶಕದ ನಂತರ ೧೯೨೬ ಮತ್ತು ೧೯೨೭ರಲ್ಲಿ ೧೯೧೮ರ ನಿಬಂಧನೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಲಾಯಿತು. ೧೯೨೩ರಲ್ಲಿ ಎರಡನೆಯ ಸ್ಥಳೀಯ ಸ್ವಯಂ ಆಡಳಿತ ಸಮ್ಮೇಳನವನ್ನು ನಡೆಸಲಾಯಿತು. (ಮೊದಲನೆಯದನ್ನು ೧೯೧೫ರಲ್ಲಿ ನಡೆಸಲಾಗಿತ್ತು) ಕಾಲಾನಂತರ ತೆರಿಗೆಯ ಜಾಲವನ್ನು ವಿಸ್ತರಿಸಿದ್ದರಿಂದ ಮುನಿಸಿಪಲ್ ವರಮಾನವು ಅಧಿಕಗೊಂಡಿತು. ಹಾಗೆಯೇ ಪೌರಸೌಲಭ್ಯಗಳಿಗೆ ಹೆಚ್ಚಿನ ಬೇಡಿಕೆಯಿದ್ದುದರಿಂದ ಮತ್ತು ಅಭಿವೃದ್ಧಿಯ ಚಟುವಟಿಕೆಗಳು ಹೆಚ್ಚಾದ್ದುದರಿಂದ ವೆಚ್ಚವೂ ಅಧಿಕವಾಯಿತು. ೧೯೨೮–೨೯ ರ ಮುನಿಸಿಪಲ್ ನಿಬಂಧನೆಯಂತೆ ಮಹಿಳೆಯರಿಗೆ ಮುನಿಸಿಪಲ್ ಸಮಿತಿಯ ಸದಸ್ಯರಾಗುವ ಅರ್ಹತೆಯನ್ನು ನೀಡಲಾಯಿತು.

## ೧೯೪೭ರ ನಂತರದ ಬೆಳವಣಿಗೆಗಳು

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ಪ್ರದೇಶಗಳಿಗಾಗಿ ಸೀಮಿತಗೊಂಡಂತೆ, ಮೂಲಭೂತ ಪೌರಸೌಲಭ್ಯ ಒದಗಿಸುವ ಹಾಗೂ ಜನೋಪಯೋಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿ ಪ್ರಗತಿ ಸಾಧಿಸಿವೆ. ಸರ್ಕಾರವು ಸಹ ಈ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಹಾಗೂ ಕಾಲ ಕಾಲಕ್ಕೆ ಅವುಗಳ ವರಮಾನ ಅಧಿಕಗೊಳ್ಳುವ ದಿಸೆಯಲ್ಲಿ ವಿವಿಧ ಆರ್ಥಿಕ ಮೂಲಗಳನ್ನು ಯೋಜಿಸಿ ಅವುಗಳ ತೆರಿಗೆ ಜಾಲವನ್ನು ವಿಸ್ತರಿಸುತ್ತಾ ಬಂದಿದೆ. ಸಮಾಜದ ಎಲ್ಲಾ ವರ್ಗದ ಜನರಿಗೂ ಹಾಗೂ ಮಹಿಳೆಯರಿಗೂ ಸಮಿತಿಗಳ ಸದಸ್ಯರಾಗುವ ಅರ್ಹತೆಯನ್ನು ನೀಡಲಾಗಿದೆ. ೧೯೫೧ರ ಪುರಸಭೆಗಳ ಕಾಯ್ದೆಯು ಚುನಾಯಿತ ಸದಸ್ಯರು ತಮ್ಮೊಳಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ನೀಡಿತು. ಸರ್ಕಾರದ ಹಸ್ತಕ್ಷೇಪವು ಕ್ರಮೇಣ ಕನಿಷ್ಠ ಮಟ್ಟಕ್ಕೆ ಇಳಿಯಿತು. ಅಭಿವೃದ್ಧಿ ಚಟುವಟಿಕೆಗಳಿಗೆ ಸರ್ಕಾರದ ಪ್ರೋತ್ಸಾಹ ದೊರೆಯಿತು. ಅಧಿಕಾರ ವಿಕೇಂದ್ರೀಕರಣ, ಆರ್ಥಿಕ ಸ್ವಾಯತ್ತತೆ ಮುಂತಾದ ಪ್ರಗತಿಪರ ಹೆಜ್ಜೆಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳನ್ನು ಶಕ್ತಿ ಸಂವರ್ಧನೆಗೊಳಿಸುತ್ತಾ ಬಂದಿವೆ.

## ೧೯೬೪ರ ಕರ್ನಾಟಕ ಮುನಿಸಿಪಾಲಿಟಿಗಳ ಕಾಯ್ದೆ

ರಾಜ್ಯ ಪುನರ್ವಿಂಗಡಣೆ ನಂತರ, ರಾಜ್ಯದಲ್ಲಿರುವ ಮುನಿಸಿಪಲ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹೆಚ್ಚು ವ್ಯಾಪಕವಾದ ಮತ್ತು ಏಕರೂಪವಾದ ಕಾನೂನನ್ನು ೧೯೬೪ರ ಏಪ್ರಿಲ್ ೧ ರಿಂದ ಜಾರಿಗೆ ತರಲಾಯಿತು. ಸದಸ್ಯರ ಅಧಿಕಾರಾವಧಿಯು ೧೯೫೧ರ ಕಾಯ್ದೆಯಲ್ಲಿದ್ದ ನಾಲ್ಕು ವರ್ಷಗಳಿಗೆ ಬದಲಾಗಿ ಐದು ವರ್ಷಗಳಾಯಿತು. ಈ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ೧೯೮೩ರಿಂದ ಮತದಾನದ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಲಾಯಿತು. ಈ ಕಾಯ್ದೆಯು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೂ ಅನ್ವಯವಾಗುವಂತೆ ಜಾರಿಗೆ ತಂದ ರಾಜ್ಯಗಳಲ್ಲಿ ಕರ್ನಾಟಕವು ಮೊದಲನೆಯದಾಗಿದೆ. ಒಟ್ಟು ಸ್ಥಾನಗಳಲ್ಲಿ ಶೇ ೩೦ರಷ್ಟನ್ನು ಮಹಿಳೆಯರಿಗೆ ಮೀಸಲಿಡುವ ಅವಕಾಶ ಒದಗಿಸಲಾಯಿತು. ಮುನಿಸಿಪಾಲಿಟಿಗಳಿಗೆ ತಮ್ಮ ಪ್ರದೇಶದಲ್ಲಿ ಸರಕಾರದ ವಿವಿಧ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕೆಲಸವನ್ನು ವಹಿಸಲಾಗಿದೆ. ಪ್ರತಿ ಮುನಿಸಿಪಾಲಿಟಿಯು ತನ್ನ ವಾರ್ಷಿಕ ಆಯವ್ಯಯದಲ್ಲಿ ಶೇ ೧೮ರಷ್ಟನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಖರ್ಚು ಮಾಡಬೇಕೆಂದು ನಿಗದಿಪಡಿಸಿದೆ. ೧೯೬೪ರ ಕಾಯ್ದೆಯು ಮುನಿಸಿಪಾಲಿಟಿಗಳಿಗೆ ಅನೇಕ ಜವಾಬ್ದಾರಿ ಕಾರ್ಯಗಳನ್ನು ನಿಗದಿಪಡಿಸಿದೆ. ಅವುಗಳಲ್ಲಿ ನೈರ್ಮಲ್ಯ, ಆರೋಗ್ಯ, ರಸ್ತೆ, ಸಾರ್ವಜನಿಕ ಉದ್ಯಾನವನಗಳು, ಮಾರುಕಟ್ಟೆ ಮುಂತಾದವುಗಳ ನಿರ್ವಹಣೆ ಇತ್ಯಾದಿಗಳು ಸೇರಿವೆ. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿಯ ಕೇಂದ್ರ ಪ್ರಾಯೋಜಿತ ಯೋಜನೆಯನ್ನು ಏಳನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಅಂದರೆ ೧೯೭೮–೮೩ರಲ್ಲಿ ಪ್ರಾರಂಭಿಸಲಾಗಿದ್ದು, ಈ ಯೋಜನೆಯು ಒಂದು ಲಕ್ಷ ಜನಸಂಖ್ಯೆಗಿಂತ ಕಡಿಮೆ ಇರುವ ಪಟ್ಟಣಗಳಿಗೆ ಅನ್ವಯವಾಗುತ್ತದೆ. ಪುರಸಭೆಯು ಉದ್ಯೋಗಗಳನ್ನು ಸೃಷ್ಟಿಸುವ ಉದ್ದೇಶದಿಂದ ರಸ್ತೆ ಕಾಮಗಾರಿ, ಗೃಹನಿರ್ಮಾಣ, ನೀರು ಸರಬರಾಜು, ಮತ್ತು ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ.

## ನಗರ ಸ್ಥಳೀಯ ಸಂಸ್ಥೆಗಳು

ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಏಕರೂಪದ ಆಯಾಮ ನೀಡುವ ಉದ್ದೇಶದಿಂದ, ಭಾರತ ಸಂವಿಧಾನಕ್ಕೆ ೭೪ನೇ ತಿದ್ದುಪಡಿಯನ್ನು ತರುವ ಮೂಲಕ ಜನತೆಗೆ ಅಧಿಕಾರವನ್ನು ಅತ್ಯಂತ ಕೆಳಹಂತದಿಂದಲೇ ನೀಡುವುದು ಸರ್ಕಾರದ ಪ್ರಾಥಮಿಕ ಉದ್ದೇಶವಾಗಿದೆ. ೧೯೬೪ರ ಕರ್ನಾಟಕ ಪುರಸಭೆಗಳ ಅಧಿನಿಯಮಕ್ಕೆ ೧೯೯೪ರ ೩೬ನೇ ಪರಿಚ್ಛೇದಕ್ಕೆ ಸೂಕ್ತ ತಿದ್ದುಪಡಿ ತರಲಾಗಿದೆ. ಅದರಂತೆಯೇ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ ೧೯೭೬ಕ್ಕೂ ತಿದ್ದುಪಡಿ ತಂದಿದ್ದು, ಪುರಸಭೆ, ನಗರಸಭೆಗಳ ರಚನೆ ಹಾಗೂ ಸ್ವರೂಪದ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸರ್ಕಾರ ನಗರ ಸ್ಥಳೀಯ ಸಂಸ್ಥೆಗಳನ್ನು ನಗರ ಹಾಗೂ ಬೃಹತ್‌ನಗರ ಪ್ರದೇಶಗಳೆಂದು ಗುರುತಿಸಿದೆ. ಸಣ್ಣ ನಗರ ಪ್ರದೇಶಗಳು ಮತ್ತು ಪರಿವರ್ತನಾಶೀಲ ಪ್ರದೇಶಗಳು ಎಂಬುದಾಗಿ ನಿರ್ದಿಷ್ಟ ಪಡಿಸಿದೆ. ಈ ರೀತಿ ನಿರ್ದಿಷ್ಟಪಡಿಸುವಾಗ ಮುಖ್ಯವಾಗಿ ಆಯಾ ಪ್ರದೇಶದ ಜನಸಂಖ್ಯೆ, ಜನಸಾಂದ್ರತೆ, ಸ್ಥಳೀಯ ಸಂಸ್ಥೆಗೆ ದೊರಕುವ ರಾಜಸ್ವ ಕೃಷಿಯೇತರ ಚಟುವಟಿಕೆಗಳಲ್ಲಿ ದೊರೆಯುವ ಉದ್ಯೋಗದ ಶೇಕಡವಾರು ಪ್ರಮಾಣ, ಆರ್ಥಿಕ ಸ್ಥಿತಿಗತಿ ಮುಂತಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅದರ ಆಧಾರದ ಮೇಲೆ ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ, ಪರಿವರ್ತನಾಶೀಲ ಪ್ರದೇಶ ಎಂಬುದಾಗಿ ನಿರ್ದಿಷ್ಟಪಡಿಸಲಾಗುತ್ತದೆ.

## ೧. ತುಮಕೂರು ಬೃಹತ್ ಮಹಾನಗರ ಪಾಲಿಕೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ ೧೯೭೬ರ ಪರಿಚ್ಛೇದ ಮೂರರನ್ವಯ ಒಂದು ನಗರ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಲ್ಲಿ ಕಂಡು ಬರುವ ಅಂಶಗಳೆಂದರೆ: ಆ ಪ್ರದೇಶದ ಜನಸಂಖ್ಯೆ ಮೂರು ಲಕ್ಷಕ್ಕಿಂತ ಕಡಿಮೆ ಇರಕೂಡದು ಹಾಗೂ ಜನಸಾಂದ್ರತೆ ಒಂದು ಚದುರ ಕಿಲೋಮೀಟರ್‌ಗೆ ೨,೦೦೦ಕ್ಕಿಂತ ಕಡಿಮೆ ಇರಕೂಡದು. ಅಂತಹ ಪ್ರದೇಶದಲ್ಲಿ ಸ್ಥಳೀಯ ಆಡಳಿತಕ್ಕಾಗಿ ಹಿಂದಿನ ಜನಗಣತಿ ವರ್ಷದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಸ್ಥಳೀಯ ಆಡಳಿತಕ್ಕೆ ದೊರಕಿದ್ದ ರಾಜಸ್ವವು ರೂ. ಆರು ಕೋಟಿಗಳಿಗಿಂತ ಕಡಿಮೆಯಾಗಿರಕೂಡದು ಅಥವಾ ತಲಾ ಆದಾಯವು ರೂ. ೨೦೦ಕ್ಕಿಂತ ಕಡಿಮೆಯಾಗಿರಕೂಡದು. ಈ ಎರಡೂ ಅಂಶಗಳಲ್ಲಿ ಯಾವುದು ಹೆಚ್ಚಾಗಿರುತ್ತದೆಯೋ ಅದನ್ನು ಪರಿಗಣಿಸತಕ್ಕದ್ದು ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗ ಪ್ರಮಾಣ ಶೇಕಡ ೫೦ಕ್ಕಿಂತ ಹೆಚ್ಚಾಗಿರಬೇಕು. ಈ ಅಂಶಗಳನ್ನು ಪರಿಗಣಿಸಿ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅಂತಹ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದೂ ರಾಜ್ಯಪಾಲರು ಘೋಷಿಸುತ್ತಾರೆ ಮತ್ತು ಇಂತಹ ದೊಡ್ಡನಗರ ಪ್ರದೇಶವನ್ನು ಮಹಾನಗರಪಾಲಿಕೆಯೆಂದು ಕರೆಯಲಾಗುತ್ತದೆ. ತುಮಕೂರು ಬೃಹತ್ ಮಹಾನಗರ ಪಾಲಿಕೆಯೆಂದು ೨೦೧೩ ಘೋಷಿಸಲ್ಪಟ್ಟಿದೆ.

## ೨. ನಗರಸಭೆ ಮತ್ತು ಪುರಸಭೆ

ಯಾವುದೇ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಾಗ ಅಲ್ಲಿನ ಜನಸಂಖ್ಯೆ ೨೦,೦೦೦ಕ್ಕಿಂತ ಕಡಿಮೆ ಇರಬಾರದು ಮತ್ತು ಮೂರು ಲಕ್ಷಗಳನ್ನು ಮೀರತಕ್ಕದ್ದಲ್ಲ. ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿಲೋ ಮೀಟರ್‌ಗೆ ೧೫೦೦ಕ್ಕಿಂತ ಕಡಿಮೆ ಇರತಕ್ಕದ್ದಲ್ಲ; ಹಿಂದಿನ ಜನಗಣತಿ ವರ್ಷದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಸ್ಥಳೀಯ ಆಡಳಿತಕ್ಕೆ ದೊರಕಿದ್ದ ರಾಜಸ್ವವು ರೂ. ಒಂಬತ್ತು ಲಕ್ಷಕ್ಕಿಂತ ಕಡಿಮೆಯಾಗಿರಬಾರದು ಅಥವಾ ಆ ಪ್ರದೇಶದ ವಾರ್ಷಿಕ ತಲಾ ಆದಾಯವು ರೂ. ೪೫ಕ್ಕಿಂತ ಕಡಿಮೆಯಾಗಿರಬಾರದು. ಲೆಕ್ಕ ಹಾಕಿದಾಗ ಈ ಮೊತ್ತಗಳಲ್ಲಿ ಯಾವುದು ಗರಿಷ್ಠವೋ ಆ ಮೊತ್ತವನ್ನು ಪರಿಗಣಿಸತಕ್ಕದ್ದು. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳು ಒಟ್ಟು ಉದ್ಯೋಗದ ಪ್ರಮಾಣದ ಶೇ ೫೦ಕ್ಕಿಂತ ಕಡಿಮೆ ಇರಬಾರದು. ಈ ಅಂಶಗಳನ್ನು ಪರಿಗಣಿಸಿ, ರಾಜ್ಯಪಾಲರು ಅಂತಹ ಪ್ರದೇಶವನ್ನು ಸಣ್ಣನಗರ ಪ್ರದೇಶವೆಂದು ಘೋಷಿಸುತ್ತಾರೆ. ಅಂತಹ ಸಣ್ಣನಗರ ಪ್ರದೇಶಗಳ ಜನಸಂಖ್ಯೆ ೫೦,೦೦೦ಕ್ಕಿಂತ ಹೆಚ್ಚಾಗಿದ್ದಲ್ಲಿ ಅದನ್ನು ನಗರಸಭೆಯೆಂದೂ, ಜನಸಂಖ್ಯೆ ೨೦,೦೦೦ಕ್ಕಿಂತ ಹೆಚ್ಚಾಗಿದ್ದು, ೫೦,೦೦೦ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಸಣ್ಣ ನಗರ ಪ್ರದೇಶವನ್ನು ಪುರಸಭೆಗಳೆಂದು ಘೋಷಿಸಿರುತ್ತಾರೆ. ಜಿಲ್ಲೆಯಲ್ಲಿ ಎರಡು ನಗರ ಸಭೆಗಳು( ಶಿರಾ ಮತ್ತು ತಿಪಟೂರು), ನಾಲ್ಕು ಪುರಸಭೆ(ಪಾವಗಡ, ಮಧುಗಿರಿ, ಚಿಕ್ಕನಾಯಕನಹಳ್ಳಿ ಹಾಗೂ ಕುಣಿಗಲ್) ಗಳಿದ್ದವು.

## ೩. ಪಟ್ಟಣ ಪಂಚಾಯಿತಿ

ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪರಿಚ್ಛೇದ ೩೪೯ರನ್ವಯ ಪರಿವರ್ತನಾಶೀಲ ಪ್ರದೇಶವನ್ನು

ನಿರ್ದಿಷ್ಟಪಡಿಸುವ ಬಗ್ಗೆ ತಿಳಿಸಲಾಗಿದೆ. ಇದರನ್ವಯ ಯಾವುದೇ ಪ್ರದೇಶದ ಜನಸಂಖ್ಯೆಯು ೧೦,೦೦೦ಕ್ಕಿಂತ ಹೆಚ್ಚಾಗಿದ್ದು, ೨೦,೦೦೦ ಕ್ಕಿಂತ ಕಡಿಮೆ ಇದ್ದಲ್ಲಿ ಮತ್ತು ಆ ಪ್ರದೇಶದ ಜನಸಾಂದ್ರತೆಯು ಪ್ರತಿ ಚದುರ ಕಿಲೋ ಮೀಟರ್‌ಗೆ ೪೦೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಪ್ರಮಾಣ ಶೇ. ೫೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದೂ ಇಂತಹ ಪ್ರದೇಶವನ್ನು ಪಟ್ಟಣ ಪಂಚಾಯಿತಿಯೆಂದೂ ರಾಜ್ಯಪಾಲರು ಘೋಷಿಸಿರುತ್ತಾರೆ. ಒಂದು ವೇಳೆ ಇಂತಹ ಪರಿವರ್ತನಾ ಶೀಲ ಪ್ರದೇಶವು ತಾಲೂಕು ಕೇಂದ್ರವಾಗಿದ್ದಲ್ಲಿ ಆ ಪ್ರದೇಶದ ಜನಸಂಖ್ಯೆ ೧೦,೦೦೦ ಕ್ಕಿಂತ ಕಡಿಮೆ ಇದ್ದರೂ ಸಹಾ ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದು ಪರಿಗಣಿಸಬಹುದಾಗಿದೆ. ಜಿಲ್ಲೆಯಲ್ಲಿ ಮೂರು ಪಟ್ಟಣ ಪಂಚಾಯಿತಿ(ಕೊರಟಗೆರೆ, ಗುಬ್ಬಿ ಹಾಗೂ ತುರುವೇಕೆರೆ)ಗಳಿದ್ದವು.

### ಪುರಸಭೆಗಳಿಗೆ ಚುನಾವಣೆ

ಪೌರಸಭೆಗಳ ಚುನಾವಣೆಯನ್ನು ಸಂವಿಧಾನದ ಪರಿಚ್ಛೇದ ೨೪೩ರನ್ವಯ ರಾಜ್ಯ ಚುನಾವಣಾ ಆಯುಕ್ತರು ನಡೆಸುತ್ತಾರೆ. ರಾಜ್ಯ ಚುನಾವಣಾ ಆಯೋಗವು ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಸಂಬಂಧಿಸಿದ ಎಲ್ಲಾ ಮತದಾರರ ಪಟ್ಟಿ ತಯಾರಿಸಿ, ಚುನಾವಣೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ. ಚುನಾವಣೆಯನ್ನು ಪುರಸಭೆ ಅವಧಿ ಮುಕ್ತಾಯಗೊಳ್ಳುವ ಮುನ್ನವೇ ಪೂರ್ಣಗೊಳಿಸಬೇಕಾಗುತ್ತದೆ. ಪುರಸಭೆಯ ಅಧಿಕಾರಾವಧಿಯು ಅದರ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ಐದು ವರ್ಷಗಳ ಕಾಲ ಇರುತ್ತದೆ.

### ಸ್ಥಾನಗಳ ಮೀಸಲಾತಿ

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿಗಾಗಿ ಅಧಿನಿಯಮಗಳನ್ನು ಉಪಬಂಧಗಳನ್ನು ಕಲ್ಪಿಸಲಾಗಿದೆ. ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ಸ್ಥಾನಗಳನ್ನು ಪುರಸಭೆಯ ವಿವಿಧ ವಾರ್ಡುಗಳಲ್ಲಿ ಸರದಿ ಪ್ರಕಾರ ಹಂಚಿಕೆ ಮಾಡಬಹುದಾಗಿದೆ. ಅದರಂತೆ ಆಯ್ಕೆಗೊಂಡ ಈ ವರ್ಗದ ಜನರಿಗೆ ಪುರಸಭೆಯಲ್ಲಿನ ಅಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ಸಹ ಮಾಡಲು ಉಪಬಂಧಗಳನ್ನು ಕಲ್ಪಿಸಲಾಗಿದೆ.

### ಪೌರಾಡಳಿತ ನಿರ್ದೇಶನಾಲಯ

ಪೌರಾಡಳಿತ ನಿರ್ದೇಶನಾಲಯವು ೧೯೪೮ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹಲವಾರು ಸ್ಥಳೀಯ ಸಂಸ್ಥೆಗಳನ್ನು ಹೊಂದಿದೆ. ಸಂವಿಧಾನದ ೭೪ನೇ ತಿದ್ದುಪಡಿಯ ಅನುಸಾರವಾಗಿ ಕರ್ನಾಟಕ ಸರ್ಕಾರವು ನಗರ ಪಾಲಿಕೆಗಳನ್ನು ಹೊರತುಪಡಿಸಿ ಮಹಾನಗರಪಾಲಿಕೆ, ನಗರ ಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿ ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳು ಎಂಬ ನಾಲ್ಕು ಹಂತದ ವ್ಯವಸ್ಥೆಯನ್ನು ಕಲ್ಪಿಸಿದೆ.

### ಪುರಸಭೆಯ ಕರ್ತವ್ಯಗಳು

ರಸ್ತೆ ಹಾಗೂ ಬೀದಿ ದೀಪಗಳ ನಿರ್ವಹಣೆ, ನೈರ್ಮಲ್ಯ ವ್ಯವಸ್ಥೆ, ನೀರಿನ ಸರಬರಾಜು ಹಾಗೂ ನಿರ್ವಹಣೆ, ಜನನ ಮತ್ತು ಮರಣ ನೋಂದಣಿ, ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ, ಕಟ್ಟಡ ಸಕ್ರಮಗೊಳಿಸುವುದು, ಬಡಾವಣೆ, ಉದ್ಯಾನವನ, ಶಾಲೆ, ಗ್ರಂಥಾಲಯ ಮತ್ತು ಆಸ್ಪತ್ರೆಗಳು ಮೊದಲಾದವುಗಳ ನಿರ್ಮಾಣ ಮತ್ತು ನಿರ್ವಹಣೆಯನ್ನೊಳಗೊಂಡಂತೆ ವಿವೇಚನಾಧಿಕಾರಕ್ಕೊಳಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

### ಪುರಸಭೆಗಳ ಸಂಪನ್ಮೂಲಗಳು

ಪುರಸಭೆಗಳ ಅಧಿನಿಯಮ ಸೆಕ್ಷನ್ ೯೪ರನ್ವಯ ಕಟ್ಟಡ ತೆರಿಗೆ, ಭೂ ತೆರಿಗೆ, ಮೋಟಾರು ವಾಹನ ಹೊರತುಪಡಿಸಿ ಇತರ ವಾಹನಗಳ ಮೇಲೆ ಹಾಕಲಾದ ತೆರಿಗೆಗಳು; ನೀರು ಕರ, ಬೀದಿ ದೀಪಗಳ ತೆರಿಗೆ; ಸ್ಥಿರಾಸ್ತಿ ನೋಂದಣಿ ತೆರಿಗೆ, ಬಡಾವಣೆಗಳ ಮೇಲಿನ ಹೆಚ್ಚುವರಿ ಸಂಪನ್ಮೂಲ ತೆರಿಗೆ ಮತ್ತು ಜಾಹಿರಾತು ತೆರಿಗೆ ಮೊದಲಾದವು ಪುರಸಭೆಗಳ ವಿವಿಧ ಆದಾಯದ ಮೂಲಗಳಾಗಿವೆ, ಸ್ಥಳೀಯ ಸಂಸ್ಥೆಗಳ ವಿವರ ಹೀಗಿದೆ.

## ಕುಣಿಗಲ್ ಪುರಸಭೆ

ಕುಣಿಗಲ್ ಪುರಸಭೆಯು ೧೯೧೮ರಲ್ಲಿ ಪೌರಾಡಳಿತ ಸಂಸ್ಥೆಯಾಗಿ ಮೊದಲು ಸ್ಥಾಪನೆಗೊಂಡಿತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ಪುರಸಭೆಯು ೧೯೫೯ರಲ್ಲಿ ಪುನಾರಚನೆಗೊಂಡಿತು. ೧೯೬೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆ ೧೦,೫೬೬ ಆಗಿದ್ದು, ೨.೫೦ ಚದರ ಕಿ.ಮೀ. ವಿಸ್ತೀರ್ಣ ಹೊಂದಿತ್ತು. ೧೯೪೩ ವಾಸದ ಮನೆಗಳಿದ್ದವು. ಕುಣಿಗಲ್

ಪುರಸಭಾ ಕ್ಷೇತ್ರ ಐದು ವಿಭಾಗಗಳಾಗಿ ವಿಂಗಡನೆಗೊಂಡು ಪ್ರತಿಯೊಂದು ವಿಭಾಗದಿಂದ ಮೂವರು ಸದಸ್ಯರಂತೆ ಒಟ್ಟು ೧೫ ಸದಸ್ಯರು ಆಯ್ಕೆಗೊಂಡಿದ್ದರು.

೨೦೦೧ರ ಜನಗಣತಿಯಂತೆ ಪುರಸಭೆಯ ಜನಸಂಖ್ಯೆ ೩೦,೩೪೩ ಆಗಿದ್ದು, ೬,೩೬೯ ಕುಟುಂಬಗಳನ್ನು ಹೊಂದಿತ್ತು. ಪುರಸಭೆಯ ವ್ಯಾಪ್ತಿಯು ೫.೭ ಚ.ಕಿ.ಮೀ. ಆಗಿತ್ತು. ೨೦೧೧ರ ಜನಗಣತಿಯ ಪ್ರಕಾರ ಪುರಸಭೆ ಜನಸಂಖ್ಯೆ ೩೪,೧೫೫ ಆಗಿದ್ದು, ೭,೯೧೧ ಕುಟುಂಬಗಳನ್ನು ಹೊಂದಿದೆ. ಪುರಸಭೆಯ ವ್ಯಾಪ್ತಿಯು ೫.೬೮ ಚ.ಕಿ.ಮೀ. ಆಗಿದೆ. ೨೦೧೩ ರ ಮಾರ್ಚ್ ತಿಂಗಳಲ್ಲಿ ಪುರಸಭೆ ಚುನಾವಣೆ ನಡೆದಿದ್ದು, ೨೩ ವಾರ್ಡ್‌ಗಳಿಂದ ಆಯ್ಕೆಯಾದ ಸದಸ್ಯರ ಸ್ಥಾನಗಳ ಮೀಸಲಾತಿ ವಿವರವನ್ನು ಕೋಷ್ಟಕ ೧೨.೩ ರಲ್ಲಿ ನೀಡಿದೆ.

**ಕೋಷ್ಟಕ ೧೨.೩ ಕುಣಿಗಲ್ ಪುರಸಭಾ ಚುನಾವಣೆಯಲ್ಲಿ ೨೦೧೩ರಲ್ಲಿ ಆಯ್ಕೆಗೊಂಡ ಸದಸ್ಯರುಗಳ ಮೀಸಲಾತಿ ವಿವರ.**

| | ಸ್ಥಾನ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | **ಸಾಮಾನ್ಯ ವರ್ಗ** | ೮ | ೪ | ೧೨ |
| ೨ | **ಹಿಂದುಳಿದ ವರ್ಗ 'ಎ'** | ೪ | ೨ | ೬ |
| ೩ | **ಹಿಂದುಳಿದ ವರ್ಗ 'ಬಿ'** | ೧ | ೧ | ೨ |
| ೪ | **ಪರಿಶಿಷ್ಟ ಜಾತಿ** | ೧ | ೧ | ೨ |
| ೫ | **ಪರಿಶಿಷ್ಟ ವರ್ಗ** | – | ೧ | ೧ |
| ಒಟ್ಟು | | ೧೪ | ೯ | ೨೩ |

**ಆಧಾರ: ಪುರಸಭೆ, ಕುಣಿಗಲ್**

## ನೀರು ಸರಬರಾಜು

ಪುರಸಭೆ ಪ್ರಾರಂಭಕ್ಕೆ ಮೊದಲಿನಿಂದಲೂ, ಪಟ್ಟಣ ವ್ಯಾಪ್ತಿಯಲ್ಲಿ ಬಾವಿಗಳು, ಸಿಹಿನೀರು ಕೊಳ, ಕುಣಿಗಲ್ ಕೆರೆ ಹಾಗೂ ೭೩ ಕೊಳವೆ ಬಾವಿಗಳು ಜನರಿಗೆ ಸುರಕ್ಷಿತ ಕುಡಿಯುವ ನೀರು ಪೂರೈಕೆಗಾಗಿ ಪಟ್ಟಣದ ಮುಖ್ಯ ನೀರಿನ ಮೂಲಗಳಾಗಿವೆ. ಪುರಸಭೆಯು ೦೪ ಪಂಪಿಂಗ್ ಸ್ಟೇಷನ್ ಹಾಗೂ ಆರು ನೀರು ಸಂಗ್ರಾಹಕ (ಟ್ಯಾಂಕ್) ಗಳನ್ನು ನಿರ್ಮಿಸಿದೆ. ಈ ಆರು ಸಂಗ್ರಾಹಕಗಳು ಒಟ್ಟು ೧೨ ಲಕ್ಷ ಗ್ಯಾಲನ್ ಕ್ಷಮತೆಯನ್ನು ಹೊಂದಿವೆ. ಪಟ್ಟಣದ ವ್ಯಾಪ್ತಿಯಲ್ಲಿ ೭೦ ಕೊಳವೆ ಬಾವಿಗಳನ್ನು ಕೊರೆಸಿದ್ದು, ಕೊಳವೆ ಬಾವಿಗಳಿಗೆ ಕೈಪಂಪು ಮತ್ತು ಮೋಟಾರನ್ನು ಅಳವಡಿಸಲಾಗಿದೆ. ಕುಣಿಗಲ್ ಪುರಸಭಾ ವ್ಯಾಪ್ತಿಯಲ್ಲಿ ೨೦೧೧-೧೨ ರಲ್ಲಿ ೫೦೦ ಸಾರ್ವಜನಿಕ ಕೊಳಾಯಿಗಳು (ಬೀದಿ), ೩,೭೦೦ ಗೃಹ ಬಳಕೆ ಹಾಗೂ ೩೦ ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಲಾಗಿದ್ದು, ಪ್ರತಿ ದಿನ ೧೪,೪೦೦ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೭೦ ಎಲ್‌ಪಿಸಿಡಿ (LPCD) ಲೀಟರ್ ಆಗಿದೆ. ೨೦೧೧-೧೨ರಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚ ರೂ. ೨೪.೫೦ ಲಕ್ಷಗಳು ಹಾಗೂ ಪುರಸಭೆಗೆ ತೆರಿಗೆ ಮೂಲಕ ಸಂದಾಯವಾದ ಹಣ ರೂ. ೨೩.೩ ಲಕ್ಷಗಳಾಗಿದ್ದಿತು. ೨೦೦೮-೦೯ರಿಂದ ೨೦೧೩-೧೪ ರವರೆಗೆ ನೀರು ಸರಬರಾಜು ಯೋಜನೆಗೆ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೪ ರಲ್ಲಿ ನೀಡಿದೆ.

**ಕೋಷ್ಟಕ ೧೨.೪ ಕುಣಿಗಲ್ ಪುರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ.**

| ವರ್ಷ | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|
| ೨೦೦೮-೦೯ | ೨೪.೦೫ |
| ೨೦೦೯-೨೦೧೦ | ೨೩.೦೪ |
| ೨೦೧೦-೨೦೧೧ | ೨೨.೭೫ |
| ೨೦೧೧-೨೦೧೨ | ೨೪.೫೦ |
| ೨೦೧೨-೨೦೧೩ | ೨೫.೨೩ |
| ೨೦೧೩-೨೦೧೪ | ೨೭.೫೬ |

**ಜನಾರೋಗ್ಯ ಮತ್ತು ನೈರ್ಮಲ್ಯ**

ಪುರಸಭೆಯ ಆರೋಗ್ಯ ವಿಭಾಗ ಪಟ್ಟಣದಲ್ಲಿ ಸಾಂಕ್ರಾಮಿಕ ರೋಗಗಳ ತಡೆಗೆ ಮುನ್ನೆಚ್ಚರಿಕೆ ಕ್ರಮವಾಗಿ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ನಿರೀಕ್ಷಕರು, ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನೈರ್ಮಲ್ಯ ಕಾಪಾಡಲು ೨೧ ಜನ ಪೌರಕಾರ್ಮಿಕರನ್ನು ಪುರಸಭೆ ನೇಮಿಸಿಕೊಂಡಿದೆ. ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಶೌಚಾಲಯಗಳಿಗೆ ಪಿಟ್‌ಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಯೋಜನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. ಪುರಸಭೆಯ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ.

## ಇತರೆ ಸೌಲಭ್ಯಗಳು

ಈ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ೧೯೩೮ರಲ್ಲಿ ದೊರೆತಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ೨೦೧೧-೧೨ರಲ್ಲಿ ೨೩೦೫ ಬೀದಿ ದೀಪಗಳನ್ನು ಹೊಂದಿದ್ದು, ೧೪೦೦ ಟ್ಯೂಬ್‌ಲೈಟ್, ೯೦೦ ಸೋಡಿಯಂ ವೇಪರ್ ದೀಪಗಳು ಮತ್ತು ೦೫ ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿತ್ತು. ವಾಣಿಜ್ಯ ಸಂಪರ್ಕ ಹಾಗೂ ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ವಿದ್ಯುತ್ ದೀಪಗಳಿಗಾಗಿ ೨೦೧೧-೨೦೧೨ರಲ್ಲಿ ರೂ. ೧೨ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿರುವ ೧೩೬.೭೫ ಕಿ.ಮೀ. ರಸ್ತೆಯಲ್ಲಿ ೨೮ ಕಿ.ಮೀ. ಗೆ ಡಾಂಬರ್ ಹಾಕಲಾಗಿದೆ. ರಸ್ತೆ ಉಸ್ತುವಾರಿಗಾಗಿ ಪುರಸಭೆ ರೂ. ೮೧.೭ ಲಕ್ಷಗಳನ್ನು ಖರ್ಚು ಮಾಡಿದೆ. ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ಈಜುಕೊಳ, ಉದ್ಯಾನವನ, ಬಯಲು ರಂಗಮಂದಿರ, ಕ್ರೀಡಾ ಮೈದಾನ, ಸಾರ್ವಜನಿಕ ಗ್ರಂಥಾಲಯ, ಅಂಗನವಾಡಿ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಪುರಸಭೆ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿ ಪ್ರತಿ ತಿಂಗಳು ರೂ. ೧.೫ ಲಕ್ಷ ಬಾಡಿಗೆಯನ್ನು ಪಡೆಯುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ಆರು ಕೊಳಚೆ ಪ್ರದೇಶಗಳಿದ್ದು, ಅಲ್ಲಿನ ನಿವಾಸಿಗಳಿಗೆ ಪುನರ್‌ವಸತಿಗಾಗಿ ಪಕ್ಕಾ ಮನೆಗಳನ್ನು ನಿರ್ಮಿಸಿ ಮೂಲಸೌಕರ್ಯಗಳನ್ನು ಒದಗಿಸಿದೆ. ಪುರಸಭೆಯು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಪುರಸಭೆಯು ೨೦೦೮-೦೯ ರಿಂದ ೨೦೧೩-೧೪ ರವರೆಗೆ ನಾಗರಿಕರಿಗೆ ವಿವಿಧ ಮೂಲ ಸೌಕರ್ಯಗಳನ್ನು ಒದಗಿಸಲು ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೫ ರಲ್ಲಿ ನೀಡಿದೆ.

**ಕೋಷ್ಟಕ: ೧೨.೫ ಕುಣಿಗಲ್ ಪುರಸಭೆಯು ವಿವಿಧ ಮೂಲ ಸೌಕರ್ಯ ಒದಗಿಸಲು ಮಾಡಿದ ವೆಚ್ಚದ ವಿವರ.**

**(ರೂ.ಲಕ್ಷಗಳಲ್ಲಿ)**

| ವಿವರ | ೨೦೦೮-೦೯ | ೨೦೦೯-೨೦೧೦ | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ |
|---|---|---|---|---|---|---|
| ಜನಾರೋಗ್ಯ ಮತ್ತು ನೈರ್ಮಲ್ಯ | ೩೦.೪೫ | ೪೦.೧೨ | ೩೯.೪೫ | ೪೦.೪೫ | ೩೦.೧೨ | ೪೦.೪೯ |
| ಸಾರ್ವಜನಿಕ ಕಾಮಗಾರಿ | ೧೨೦.೪೫ | ೧೧೦.೪೫ | ೧೨೯.೭೫ | ೧೪೦.೧೫ | ೧೩೯.೭೫ | – |
| ನೀರು ಸರಬರಾಜು | ೨೪.೦೫ | ೨೩.೦೪ | ೨೨.೭೫ | ೨೪.೫೦ | ೨೫.೨೩ | ೨೭.೫೬ |
| ರಸ್ತೆ ಮತ್ತು ದೀಪ ನಿರ್ವಹಣೆ | ೨೫.೦೦ | ೨೪.೩೫ | ೨೨.೪೫ | ೨೮.೪೫ | ೩೦.೪೫ | ೩೨.೩೨ |
| ಚರಂಡಿ ಮತ್ತು ಸಾಂಕ್ರಾಮಿಕರೋಗ ನಿಯಂತ್ರಣ | ೫.೪೫ | ೩.೪೮ | ೪.೪೮ | ೩.೩೨ | ೪.೫೬ | ೪.೯೮ |
| **ಇತರೆ** | **೨೩೧.೨೮** | **೩೩೮.೪೪** | **೪೨೬.೩೪** | **೩೪೫.೪೬** | ೧೧೩.೭೪ | **೧೪೫.೮೭** |

**ಮೂಲ: ಪುರಸಭೆ, ಕುಣಿಗಲ್**

ಕುಣಿಗಲ್ ಪುರಸಭೆಗೆ ವಿವಿಧ ಮೂಲಗಳಿಂದ ಬಂದ ಆದಾಯ ೨೦೦೮-೦೯ ರಲ್ಲಿ ರೂ. ೮೫೧.೬೭ ಲಕ್ಷಗಳಿಂದ ೨೦೧೩-೧೪ ರಲ್ಲಿ ರೂ. ೫೫೧.೯೬ ಲಕ್ಷಗಳಿಗೆ ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ಗೋಚರಿಸುತ್ತದೆ. ವಿವರಗಳಿಗೆ ಕೋಷ್ಟಕ ೧೨.೬ ಅನ್ನು ನೋಡಿ ಹಾಗೂ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿಯ ವಿವರ ಹಾಗೂ ಸದರಿ ಬಾಬ್ತುಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೭ ರಲ್ಲಿ ನೀಡಿದೆ.

**ಕೋಷ್ಟಕ ೧೨. ೬ ಕುಣಿಗಲ್ ಪುರಸಭೆಯ ಆದಾಯ ಮತ್ತು ವೆಚ್ಚಗಳ ತಃಖ್ತೆ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮–೦೯ | ೮೫೧.೬೭ | ೫೯೨.೧೮ |
| ೨೦೦೯–೧೦ | ೬೬೫.೫೫ | ೫೫೩.೨೨ |
| ೨೦೧೦–೧೧ | ೮೮೭.೮೪ | ೫೮೬.೨೫ |
| ೨೦೧೧–೧೨ | ೬೩೮.೯೨ | ೪೦೩.೩ |
| ೨೦೧೨–೧೩ | ೫೦೬.೪೫ | ೩೭೭.೩೮ |
| ೨೦೧೩–೧೪ | ೫೫೧.೯೬ | ೨೭೫.೭೫ |

**ಆಧಾರ: ಪುರಸಭೆ, ಕುಣಿಗಲ್.**

**ಕೋಷ್ಟಕ ೧೨.೭ ಕುಣಿಗಲ್ ಪುರಸಭೆಯು ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ರೂ. ಲಕ್ಷಗಳಲ್ಲಿ)

| ವಿವರ | ೨೦೦೮–೦೯ | | ೨೦೦೯–೨೦೧೦ | | ೨೦೧೦–೧೧ | |
|---|---|---|---|---|---|---|
| | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು |
| ತರಬೇತಿ ಕಾರ್ಯಕ್ರಮ | ೦.೮೬ | ೦.೮೬ | ೦.೫೨ | ೦.೫೨ | ೩.೧೦ | ೩.೧೦ |
| ಸಾಮಾಜಿಕ ಸೇವೆ | ೦.೮೨ | ೦.೮೨ | ೦.೬೪ | ೦.೬೪ | ೦.೫೧ | ೦.೫೧ |
| ನಗರ ಕೂಲಿ ಉದ್ಯೋಗ | ೨.೦೭ | ೨.೦೭ | ೩.೧೯ | ೩.೧೯ | ೧.೪೭ | ೧.೪೭ |
| ನಿರಂತರ ಉಳಿತಾಯ ಗುಂಪು ರಚನೆ | ೦.೪೦ | ೦.೪೦ | ೧.೨೦ | ೧.೨೦ | ೦.೬೦ | ೦.೬೦ |
| ಡ್ವಾಕ್ರಾ | ೧.೨೫ | ೧.೨೫ | ೩.೦ | ೩.೦ | ೩.೦೦ | ೩.೦೦ |
| ಮೂಲಭೂತ ಸೌಕರ್ಯ | ೦ | ೦ | ೦.೦ | ೦.೦ | ೦.೦೦ | ೦.೦೦ |
| ಸ್ವಯಂ ಉದ್ಯೋಗ ಯೋಜನೆ | ೧.೩೫ | ೧.೩೫ | ೨.೦ | ೨.೦ | ೧.೫೦ | ೧.೫೦ |

| ವಿವರ | ೨೦೧೧–೧೨ | | ೨೦೧೨–೧೩ | | ೨೦೧೩–೧೪ | |
|---|---|---|---|---|---|---|
| | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು |
| ತರಬೇತಿ ಕಾರ್ಯಕ್ರಮ | ೧.೦೯ | ೧.೦೯ | ೫.೦೭ | ೫.೦೭ | ೨.೦೦ | ೨.೦೦ |
| ಸಾಮಾಜಿಕ ಸೇವೆ | ೦.೬೩ | ೦.೬೩ | ೦.೬೩ | ೦.೬೩ | ೦ | ೦ |
| ನಗರ ಕೂಲಿ ಉದ್ಯೋಗ | ೨.೦ | ೨.೦ | ೧.೫೩ | ೧.೫೩ | ೦.೯೦ | ೦.೯೦ |
| ನಿರಂತರ ಉಳಿತಾಯ ಗುಂಪು ರಚನೆ | ೦.೮೦ | ೦.೮೦ | ೦.೮೦ | ೦.೮೦ | ೩.೦೦ | ೩.೦೦ |
| ಡ್ವಾಕ್ರಾ | ೩.೦೦ | ೩.೦೦ | ೩.೦ | ೩.೦ | ೩.೦ | ೩.೦ |
| ಮೂಲಭೂತ ಸೌಕರ್ಯ | ೦ | ೦ | ೦ | ೦ | ೦ | ೦ |
| ಸ್ವಯಂ ಉದ್ಯೋಗ ಯೋಜನೆ | ೨.೫೦ | ೨.೫೦ | ೫.೦ | ೫.೦ | ೬.೦ | ೬.೦ |

## ಚಿಕ್ಕನಾಯಕನಹಳ್ಳಿ ಪುರಸಭೆ

ಚಿಕ್ಕನಾಯಕನಹಳ್ಳಿ ಪುರಸಭೆ ಮೊದಲು ೧೯೧೮ರಲ್ಲಿ ಮೈನರ್ ಪುರಸಭೆಯಾಗಿ ಸ್ಥಾಪನೆಗೊಂಡಿತು. ನಂತರ ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆ ಅನ್ವಯ ಪುರಸಭೆಯಾಗಿ ಪುನಾರಚನೆಗೊಂಡಿತು. ೧೯೬೪ರ ಹೊಸಕಾಯ್ದೆ ಪ್ರಕಾರ ಚುನಾವಣೆ ನಡೆದು ಪಟ್ಟಣದ ೧೫ ವಿಭಾಗಗಳಿಂದ ೧೫ ಸದಸ್ಯರು ಚುನಾಯಿತಗೊಂಡಿದ್ದರು. ಮೀಸಲಾತಿ ನಿಯಮದಂತೆ ಒಬ್ಬ ಮಹಿಳೆ ಮತ್ತು ಒಬ್ಬ ಪರಿಶಿಷ್ಟ ಜಾತಿಯಿಂದ ಚುನಾಯಿತಗೊಂಡಿದ್ದರು. ೧೯೬೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆಯು ೧೦,೩೭೫ ಆಗಿತ್ತು. ೧೯೬೮ ರಲ್ಲಿ ೨.೬೦ ಚ ಕಿ.ಮೀ ವಿಸ್ತೀರ್ಣಹೊಂದಿದ್ದು, ೨,೫೯೫ ವಾಸದ ಮನೆಗಳನ್ನು ಹೊಂದಿತ್ತು.

೨೦೦೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೨೨,೩೮೯ ಇದ್ದು, ೫,೧೧೫ ಕುಟುಂಬಗಳನ್ನು ಹೊಂದಿತ್ತು. ಪುರಸಭೆಯ ವ್ಯಾಪ್ತಿಯು ೫.೦೦ ಕಿ.ಮೀ ಆಗಿತ್ತು. ೨೦೧೧ರ ಜನಗಣತಿಯಂತೆ ಪುರಸಭೆಯ ಜನಸಂಖ್ಯೆ ೨೩,೨೦೬ ಇದ್ದು, ೫,೮೫೮ ಕುಟುಂಬಗಳನ್ನು ಹೊಂದಿತ್ತು. ಪುರಸಭೆಯ ವ್ಯಾಪ್ತಿಯು ೫.೦೨ ಚ.ಕಿ.ಮೀ. ಆಗಿತ್ತು. ೨೦೧೩ ರ ಮಾರ್ಚ್ ತಿಂಗಳಿನಲ್ಲಿ ಪುರಸಭೆ ಚುನಾವಣೆ ನಡೆದಿದ್ದು, ೨೩ ವಾರ್ಡ್‌ಗಳಿಂದ ಆಯ್ಕೆಯಾದ ೨೩ ಜನ ಸದಸ್ಯರ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೮ ರಲ್ಲಿ ನೀಡಲಾಗಿದೆ.

### ಕೋಷ್ಟಕ: ೧೨.೮ ಸದಸ್ಯರುಗಳ ಮೀಸಲು ಹಂಚಿಕೆಯ ವಿವರ.

| | ಸ್ಥಾನ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೦೮ | ೦೪ | ೧೨ |
| ೨ | ಹಿಂದುಳಿದ ವರ್ಗ 'ಎ' | ೦೪ | ೦೨ | ೦೬ |
| ೩ | ಹಿಂದುಳಿದ ವರ್ಗ 'ಬಿ' | ೦೧ | ೦೧ | ೦೨ |
| ೪ | ಪರಿಶಿಷ್ಟ ಜಾತಿ | ೦೧ | ೦೧ | ೦೨ |
| ೫ | ಪರಿಶಿಷ್ಟ ಪಂಗಡ | – | ೦೧ | ೦೧ |
| ಒಟ್ಟು | | ೧೪ | ೦೯ | ೨೩ |

ಪುರಸಭೆ ವ್ಯಾಪ್ತಿಯಲ್ಲಿ ೨೦೧೨ರಲ್ಲಿ ತೆರಿಗೆ ಸಂದಾಯ ಮಾಡುವ ಖಾತೆದಾರರ ಸಂಖ್ಯೆ ೭,೨೬೪ ಆಗಿದ್ದು, ಒಟ್ಟು ಕರ ವಸೂಲಿಯು ರೂ. ೪೦.೩೪ ಲಕ್ಷ ಆಗಿತ್ತು. ಕೋಷ್ಟಕ ೧೨.೯ ರಲ್ಲಿ ಚಿಕ್ಕನಾಯಕನಹಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿ ನಗರಯೋಜನಾ ಪ್ರಾಧಿಕಾರಕ್ಕೆ ಒಳಪಟ್ಟ ಬಡಾವಣೆಗಳ ವಿವರಗಳನ್ನು ನೀಡಲಾಗಿದೆ.

### ಕೋಷ್ಟಕ ೧೨.೯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಮತ್ತು ಗ್ರಾಮಗಳ ವಿವರ

| ಕ್ರಮ ಸಂಖ್ಯೆ | ಪಟ್ಟಣ – ಗ್ರಾಮದ ಹೆಸರು | ಷರಾ |
|---|---|---|
| ೧ | ಚಿಕ್ಕನಾಯಕನಹಳ್ಳಿ | (ಭಾಗಶಃ)ಸ.ನಂ.೧–೪, ೧೩–೩೩, ೮೬–೯೩, ೧೪೧–೧೮೬ |
| ೨ | ಜೋಗಿಹಳ್ಳಿ | (ಪೂರ್ಣಗ್ರಾಮ) ಸ.ನಂ.೧–೮೯ |
| ೩ | ದಬ್ಬೇಘಟ್ಟ | (ಭಾಗಶಃ) ಸ.ನಂ.೧–೩೫, ೬೦–೭೦, ೭೫–೯೩, ೧೦೧, ೧೫೯–೧೮೨, ೨೧೬–೩೦೬ |
| ೪ | ಕೇದಿಗೆಹಳ್ಳಿ | (ಭಾಗಶಃ) ಸ.ನಂ.೧–೩೨,೩೮–೫೫ |
| ೫ | ಕುರುಬರಹಳ್ಳಿ | (ಭಾಗಶಃ) ಸ.ನಂ.೧–೬೬, ೧೦೦–೧೨೨ |
| ೬ | ಮೇಲನಹಳ್ಳಿ | (ಭಾಗಶಃ) ಸ.ನಂ.೧೬,೧೭,೨೪–೫೭,೬೨–೬೪ |
| ೭ | ದಾಸಿಹಳ್ಳಿ | (ಪೂರ್ಣಗ್ರಾಮ) ಸ.ನಂ.೧–೩೧ |

ಪುರಸಭೆಯು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಲಿ ವತಿಯಿಂದ ೧ ಎಕರೆ ೧೫ ಗುಂಟೆ ಪ್ರದೇಶದಲ್ಲಿ ೨೦೧೧-೧೨ರವರೆಗೆ ೫೦ ಮನೆಗಳನ್ನು ನಿರ್ಮಿಸಿ ವಿತರಣೆ ಮಾಡಿದೆ. ಈ ಬಡಾವಣೆಗಳಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ವ್ಯವಸ್ಥೆ, ನೀರು ಸರಬರಾಜು, ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಒದಗಿಸಿದೆ. ನಿರ್ವಹಣೆಯನ್ನು ಪುರಸಭಾ ವತಿಯಿಂದ ಮಾಡಲಾಗಿದೆ.

## ನೀರು ಸರಬರಾಜು

ಪುರಸಭೆ ಪ್ರಾರಂಭಕ್ಕೆ ಮೊದಲು ಪಟ್ಟಣ ವ್ಯಾಪ್ತಿಯಲ್ಲಿ ಬಾವಿಗಳು, ಸಿಹಿನೀರು ಕೊಳ ಹಾಗೂ ಕೆರೆ ಮುಖ್ಯ ಜಲಮೂಲಗಳಾಗಿದ್ದವು. ಪುರಸಭೆಯು ಜನರಿಗೆ ಸುರಕ್ಷಿತ ಕುಡಿಯುವ ನೀರು ಪೂರೈಕೆಗಾಗಿ ೨೪ ಕೊಳವೆ ಬಾವಿಗಳನ್ನು ಕೊರೆಸಿ ಪಟ್ಟಣದ ಮುಖ್ಯ ನೀರಿನ ಮೂಲಗಳನ್ನು ನಿರ್ಮಿಸಿತ್ತು. ಪುರಸಭೆಯು ೨೦೦೫ ರಲ್ಲಿ ಪಂಪಿಂಗ್ ಸ್ಟೇಷನ್ ಹಾಗೂ ಆರು ನೀರು ಸಂಗ್ರಾಹಕ (ಟ್ಯಾಂಕ್) ಗಳನ್ನು ನಿರ್ಮಿಸಿತ್ತು. ಈ ಆರು ಸಂಗ್ರಾಹಕಗಳು ಒಟ್ಟು ೨.೫ ಲಕ್ಷ ಗ್ಯಾಲನ್ ಕ್ಷಮತೆಯನ್ನು ಹೊಂದಿವೆ. ಪಟ್ಟಣದ ವ್ಯಾಪ್ತಿಯಲ್ಲಿ ೧೦ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಿದ್ದು, ೧೦ ಕೊಳವೆ ಬಾವಿಗಳಿಗೆ ಪಂಪು ಮತ್ತು ಮೋಟಾರನ್ನು ಅಳವಡಿಸಲಾಗಿದೆ. ೨೦೧೨ರ ಮಾರ್ಚ್ ಅಂತ್ಯಕ್ಕೆ ಪಟ್ಟಣದಲ್ಲಿ ೨೨೦೦ ಸಾರ್ವಜನಿಕ ಕೊಳಾಯಿಗಳು (ಬೀದಿ) ಮತ್ತು ಗೃಹ ಬಳಕೆ ಹಾಗೂ ೧೨ ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಲಾಗಿದ್ದು, ಪ್ರತಿ ದಿನ ೧.೮ ದಶಲಕ್ಷ ಗ್ಯಾಲನ್ ನೀರು ಸರಬರಾಜುಗೊಳ್ಳುತ್ತಿದೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೫೫ ಲೀಟರ್ ಆಗಿದೆ. ೨೦೧೧-೧೨ರಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚ ರೂ. ೫೦ ಲಕ್ಷಗಳು ಹಾಗೂ ಪುರಸಭೆಗೆ ತೆರಿಗೆ ಮೂಲಕ ಸಂದಾಯವಾದ ಹಣ ರೂ. ೨೦.೭೦ ಲಕ್ಷ ಆಗಿದ್ದಿತು. ಹೆಚ್ಚುವರಿ ಹಣವನ್ನು ಸರ್ಕಾರದ ಎಸ್. ಎಫ್.ಸಿ.ಅನುದಾನದಲ್ಲಿ ಭರಿಸಲಾಗಿದೆ. ೨೦೦೮-೦೯ರಿಂದ ೨೦೧೧-೧೨ರವರೆಗೆ ನೀರು ಸರಬರಾಜು ಯೋಜನೆಗೆ ಆದ ಒಟ್ಟು ವೆಚ್ಚದ ವಿವರವನ್ನು ಕೋಷ್ಟಕ ೧೨.೧೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೧೦ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ.**

| ವರ್ಷ | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|
| ೨೦೦೮-೨೦೦೯ | ೩೫.೦೦ |
| ೨೦೦೯-೨೦೧೦ | ೩೮.೦೦ |
| ೨೦೧೦-೨೦೧೧ | ೪೨.೦೦ |
| ೨೦೧೧-೨೦೧೨ | ೫೦.೦೦ |

## ಜನಾರೋಗ್ಯ ಮತ್ತು ನೈರ್ಮಲ್ಯ

ಪುರಸಭೆಯ ಆರೋಗ್ಯ ವಿಭಾಗ ಪಟ್ಟಣದಲ್ಲಿ ಸಾಂಕ್ರಾಮಿಕ ರೋಗಗಳ ತಡೆಗೆ ಮುನ್ನೆಚ್ಚರಿಕೆ ಕ್ರಮವಾಗಿ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪುರಸಭೆಯ ಆರೋಗ್ಯ ನಿರೀಕ್ಷಕರು ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನೈರ್ಮಲ್ಯ ಕಾಪಾಡಲು ४೦ ಜನ ಪೌರಕಾರ್ಮಿಕರನ್ನು ಪುರಸಭೆ ನೇಮಿಸಿಕೊಂಡಿದೆ. ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಯೋಜನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. ಪುರಸಭೆಯ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ.

## ಇತರೆ ಸೌಲಭ್ಯಗಳು

ಈ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ೦೮.೦೪.೧೯೫೬ ರಲ್ಲಿ ದೊರೆತಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ಪೂರೈಕೆಯ ಹೊಣೆಹೊತ್ತಿದೆ. ೨೦೧೧-೧೨ರಲ್ಲಿ ೧೮೯೬ ಬೀದಿ ದೀಪಗಳನ್ನು ಹೊಂದಿದ್ದು, ೧೨೪೩ ಟ್ಯೂಬ್‌ಲೈಟ್‌ಗಳು, ೬೪೭ ಸೋಡಿಯಂ ವೇಪರ್ ದೀಪಗಳು ಮತ್ತು ನಾಲ್ಕು ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿರುವ ೧೨೫ ಕಿ.ಮೀ. ರಸ್ತೆಯಲ್ಲಿ ೫೨ ಕಿ.ಮೀ. ಡಾಂಬರ್ ರಸ್ತೆ ಆಗಿದೆ. ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ಎರಡು ಉದ್ಯಾನವನ, ಬಯಲು ರಂಗಮಂದಿರ, ಕ್ರೀಡಾ ಮೈದಾನ, ಸಾರ್ವಜನಿಕ ಗ್ರಂಥಾಲಯ, ಅಂಗನವಾಡಿ ಮುಂತಾದ ಸೌಲಭ್ಯ ಒದಗಿಸಲಾಗಿದೆ. ಪುರಸಭೆ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿ ಪ್ರತಿ ತಿಂಗಳು

ರೂ. ೬೮,೪೧೦ ಬಾಡಿಗೆಯನ್ನು ಪಡೆಯುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ಆರು ಕೊಳಚೆ ಪ್ರದೇಶಗಳಿದ್ದು, ಅಲ್ಲಿನ ನಿವಾಸಿಗಳಿಗೆ ಪುನರ್‌ವಸತಿಗಾಗಿ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸಿ ಮೂಲಸೌಕರ್ಯಗಳನ್ನು ಒದಗಿಸಿರುತ್ತದೆ. ಪುರಸಭೆಯು ಕ್ರೀಡೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೧೧ ಅನ್ನು ನೋಡಿ.

**ಕೋಷ್ಟಕ ೧೨.೧೧ ಪುರಸಭೆಯು ವಿವಿಧ ಬಾಬ್ತುಗಳಿಗೆ ಮಾಡಿದ ವೆಚ್ಚದ ವಿವರ**

**(ರೂ. ಲಕ್ಷಗಳಲ್ಲಿ)**

| ಕ್ರ.ಸಂ | ವಿವರ | ೨೦೦೮-೦೯ | ೨೦೦೯-೨೦೧೦ | ೨೦೧೦-೧೧ | ೨೦೧೧-೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೪೦.೦೦ | ೪೨.೦೦ | ೪೮.೦೦ | ೫೦.೦೦ |
| ೨ | ಸಾರ್ವಜನಿಕ ಕಾಮಗಾರಿ | – | – | – | – |
| ೩ | ನೀರು ಸರಬರಾಜು | ೩೬.೦೦ | ೩೮.೦೦ | ೪೨.೦೦ | ೫೦.೦೦ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | – | – | – | – |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೩.೦೦ | ೩.೫೦ | ೬.೦೦ | ೭.೦೦ |

ಚಿಕ್ಕನಾಯಕನಹಳ್ಳಿ ಪುರಸಭೆಯು ವಿವಿಧ ಮೂಲಗಳಿಂದ ಗಳಿಸಿದ ಆದಾಯ ೨೦೦೮-೦೯ ರಲ್ಲಿ ರೂ. ೩೭೧.೩೩ ಲಕ್ಷಗಳಾಗಿದ್ದರೆ, ೨೦೧೧-೧೨ ರಲ್ಲಿ ರೂ. ೪೩೪.೦೦ ಲಕ್ಷಗಳಾಗಿತ್ತು. ಇದೇ ಅವಧಿಯಲ್ಲಿ ಕ್ರಮವಾಗಿ ರೂ. ೨೭೪.೫೮ ಲಕ್ಷ ಹಾಗೂ ರೂ. ೪೬೨.೪೬ ಲಕ್ಷ ವೆಚ್ಚ ಮಾಡಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೧೨ ರಲ್ಲಿ ನೋಡಿ. ೨೦೦೮-೦೯ ರಿಂದ ೨೦೧೧-೧೨ ರ ವರೆಗೆ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ಮಾಡಿದ ಪ್ರಗತಿ ವಿವರಗಳನ್ನು ಕೋಷ್ಟಕ ೧೨.೧೩ ರಲ್ಲಿ ನೀಡಿದೆ.

**ಕೋಷ್ಟಕ ೧೨.೧೨ ಪುರಸಭೆಯ ಆದಾಯ ಮತ್ತು ವೆಚ್ಚಗಳ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೦೯ | ೩೭೧.೩೩ | ೨೭೪.೫೮ |
| ೨೦೦೯-೧೦ | ೪೯೬.೫೪ | ೩೬೨.೯೯ |
| ೨೦೧೦-೧೧ | ೭೨೦.೨೩ | ೭೫೮.೦೧ |
| ೨೦೧೧-೧೨ | ೪೩೪.೦೦ | ೪೬೨.೪೬ |

**ಕೋಷ್ಟಕ ೧೨.೧೩ ಚಿಕ್ಕನಾಯಕನಹಳ್ಳಿ ಪುರಸಭೆಯು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ರೂ. ಲಕ್ಷಗಳಲ್ಲಿ)

| ವಿವರ | ೨೦೦೮-೦೯ | | ೨೦೦೯-೨೦೧೦ | | ೨೦೧೦-೧೧ | | ೨೦೧೧-೧೨ | |
|---|---|---|---|---|---|---|---|---|
| | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು |
| ತರಬೇತಿ ಕಾರ್ಯಕ್ರಮ | ೧.೦೨ | ೧.೦೨ | ೦.೭೨ | ೦.೭೨ | ೪.೩೫ | ೪.೩೫ | ೧.೫೨ | ೧.೫೨ |
| ಸಾಮಾಜಿಕ ಸೇವೆ | ೧.೧೫ | ೧.೧೫ | ೦.೯೦ | ೦.೯೦ | ೦.೭೧ | ೦.೭೧ | ೦.೮೯ | ೦.೮೯ |
| ನಗರ ಕೂಲಿ ಉದ್ಯೋಗ | ೨.೯೦ | ೨.೯೦ | ೪.೪೧ | ೪.೪೧ | ೨.೦೬ | ೨.೦೬ | ೩.೪೭ | ೩.೪೭ |
| ನಿರಂತರ ಉಳಿತಾಯ ಗುಂಪು ರಚನೆ | ೦.೪೦ | ೦.೪೦ | ೧.೮೦ | ೧.೮೦ | ೦.೮೦ | ೦.೮೦ | ೧.೨೦ | ೧.೨೦ |
| ಡ್ವಾಕ್ರಾ | ೨.೫೦ | ೨.೫೦ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೩.೦೦ |
| ಮೂಲಭೂತ ಸೌಕರ್ಯ | ೦ | ೦ | ೦ | ೦ | ೦ | ೦ | ೦ | ೦ |
| ಸ್ವಯಂ ಉದ್ಯೋಗ ಯೋಜನೆ | ೧.೫೦ | ೧.೫೦ | ೩.೦೦ | ೩.೦೦ | ೨.೦೦ | ೨.೦೦ | ೩.೫೦ | ೩.೫೦ |

ಚಿಕ್ಕನಾಯಕನಹಳ್ಳಿ ಪುರಸಭೆಯು ಪಟ್ಟಣದ ಜನತೆಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ಕಾರ್ಯದಲ್ಲಿ ಉತ್ತಮ ಸಾಧನೆ ಮಾಡಿರುವುದಕ್ಕಾಗಿ ರಾಜ್ಯ ಸರ್ಕಾರದಿಂದ ಬಹುಮಾನವನ್ನು ಪಡೆದಿದೆ.

## ಮಧುಗಿರಿ ಪುರಸಭೆ

ಮಧುಗಿರಿ ಪುರಸಭೆ ಆರಂಭದಲ್ಲಿ ೧೯೨೮ರಲ್ಲಿ ಮೈನರ್‌ಪುರಸಭೆಯಾಗಿ ಸ್ಥಾಪನೆಗೊಂಡಿತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆ ಅನ್ವಯ ಪುರಸಭೆಯಾಗಿ ಪುನಾರಚನೆಗೊಂಡು ೧೫ ಚುನಾಯಿತ ಸದಸ್ಯರಿದ್ದರು. ೧೯೬೧ರ ಜನಗಣತಿಯಂತೆ ೧೧,೭೭೫ ಜನಸಂಖ್ಯೆ ಹೊಂದಿದ್ದು, ೩೦೧೧ ವಾಸದ ಮನೆಗಳಿದ್ದವು. ಪುರಸಭೆಯು ೨.೪೦ ಚ.ಕಿ.ಮೀ ವಿಸ್ತೀರ್ಣ ಹೊಂದಿತ್ತು.

೨೦೦೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೨೬,೩೦೪ ಆಗಿದ್ದು, ವಿಸ್ತೀರ್ಣವು ೮.೦೦ ಚ.ಕಿ.ಮೀ. ಆಗಿತ್ತು. ೫,೬೪೪ ಕುಟುಂಬಗಳನ್ನು ಹೊಂದಿತ್ತು. ೨೦೧೧ರ ಜನಗಣತಿಯ ಪ್ರಕಾರ ಪುರಸಭೆಯ ಜನಸಂಖ್ಯೆ ೨೯,೧೫೯ ಆಗಿದ್ದು, ೬,೯೩೮ ಕುಟುಂಬಗಳನ್ನು ಹೊಂದಿತ್ತು. ಪುರಸಭೆ ವ್ಯಾಪ್ತಿಯು ೮.೦೦ ಚ.ಕಿ.ಮೀ. ಆಗಿದೆ. ಮಾರ್ಚಿ ೨೦೧೩ರಲ್ಲಿ ಪುರಸಭೆ ಚುನಾವಣೆ ನಡೆಸಿದ್ದು, ೨೩ ವಾರ್ಡ್‌ಗಳಿಂದ ಆಯ್ಕೆಯಾದ ೨೩ ಜನ ಸದಸ್ಯರ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೧೪ ರಲ್ಲಿ ನೀಡಿದೆ.

**ಕೋಷ್ಟಕ ೧೨.೧೪ ಪುರಸಭೆ ಸದಸ್ಯರ ಮೀಸಲು ಹಂಚಿಕೆಯ ವಿವರ.**

| ಕ್ರ.ಸಂ. | ಸ್ಥಾನವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೭ | ೩ | ೧೦ |
| ೨ | ಹಿಂದುಳಿದ ವರ್ಗ 'ಅ' | ೪ | ೨ | ೬ |
| ೩ | ಹಿಂದುಳಿದ ವರ್ಗ 'ಬ' | ೧ | ೧ | ೨ |
| ೪ | ಪರಿಶಿಷ್ಟ ಜಾತಿ | ೨ | ೧ | ೩ |
| ೫ | ಪರಿಶಿಷ್ಟ ಪಂಗಡ | ೧ | ೧ | ೨ |
| ಒಟ್ಟು | | ೧೫ | ೮ | ೨೩ |

ಪುರಸಭೆಗೆ ೨೦೧೨ರಲ್ಲಿ ತೆರಿಗೆ ಸಂದಾಯ ಮಾಡುವ ಖಾತೆದಾರರ ಸಂಖ್ಯೆ ೬,೪೯೯ ಆಗಿದ್ದು, ಒಟ್ಟು ಕರ ವಸೂಲಿಯು ರೂ. ೩೬.೩೪ ಲಕ್ಷಗಳಾಗಿತ್ತು.

ಮಧುಗಿರಿ ಪುರಸಭೆಗೆ ಹೊಂದಿಕೊಂಡಿರುವ ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳನ್ನೊಳಗೊಂಡ ವಿಶಾಲವಾದ ಆಟದ ಮೈದಾನವಿದೆ. ಪುರಸಭೆಯು ಪ್ರಾರಂಭದಲ್ಲಿ ೧೮ ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ನಿರ್ಮಿಸಿ ಸಾರ್ವಜನಿಕ ಹರಾಜ್ ಮೂಲಕ ಹಂಚಿದೆ. ಹರಿಜನ ಗಿರಿಜನ ಹಿಂದುಳಿದ ದುರ್ಬಲ ವರ್ಗ ಹಾಗೂ ಅಲ್ಪಸಂಖ್ಯಾತ ಖಾಯಂ ನಿವಾಸಿಗಳಿಗೆ ರಿಯಾಯಿತಿ ಬೆಲೆಗಳಲ್ಲಿ ನಿವೇಶನಗಳನ್ನು ಹಂಚುವುದರ ಮೂಲಕ ಹೊಸ ಬಡಾವಣೆಗಳು ಬೆಳೆದಿವೆ.

### ನೀರು ಪೂರೈಕೆ

ಪುರಸಭೆಯು ಪ್ರಾರಂಭದಲ್ಲಿ ಪಟ್ಟಣದ ನಾಗರಿಕರಿಗೆ ಶುದ್ಧಕುಡಿಯುವ ನೀರಿನ ಪೂರೈಕೆಗಾಗಿ ಮೂರು ಕೊಳವೆ ಬಾವಿಗಳನ್ನು ಲಿಂಗದಹಳ್ಳಿ ಮತ್ತು ಪ್ರವಾಸಿ ಮಂದಿರದಲ್ಲಿ ಕೊರೆದು ೩೦,೦೦೦ ಮತ್ತು ೨೫,೦೦೦ ಗ್ಯಾಲನ್ ನೀರು ಸಾಮರ್ಥ್ಯವುಳ್ಳ ಎರಡು ನೀರು ಸಂಗ್ರಹಣಾ (ಟ್ಯಾಂಕ್)ಗಳನ್ನು ನಿರ್ಮಿಸಿ ಕೊಳಾಯಿಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿತ್ತು. ೧೯೬೮ರಲ್ಲಿ ಪುರಸಭೆ ರೂ. ೨.೨೬ ಲಕ್ಷಗಳ ವೆಚ್ಚದಲ್ಲಿ ಪಟ್ಟಣದಲ್ಲಿ ೩೦ ಬೀದಿ ಕೊಳಾಯಿಗಳು ಮತ್ತು ೩೪೦ ಖಾಸಗಿ ಕೊಳಾಯಿಗಳ ಮೂಲಕ ಪ್ರತಿ ದಿನ ನೀರು ಸರಬರಾಜು ಮಾಡುತ್ತಿತ್ತು.

ಪುರಸಭೆಯು ೧೯೭೭ ರಲ್ಲಿ ಪಂಪಿಂಗ್ ಸ್ಟೇಷನ್ ಹಾಗೂ ನಾಲ್ಕು ನೀರು ಸಂಗ್ರಾಹಕ (ಟ್ಯಾಂಕ್) ಗಳನ್ನು

ನಿರ್ಮಿಸಿದೆ. ಇವು ಒಟ್ಟು ೪.೬೨ ಲಕ್ಷ ಗ್ಯಾಲನ್ ಕ್ಷಮತೆಯನ್ನು ಹೊಂದಿವೆ. ೧೫ ಕೊಳವೆ ಬಾವಿಗಳಿಗೆ ಕೈಪಂಪು ಮತ್ತು ೪೮ಕ್ಕೆ ವಿದ್ಯುತ್ ಮೋಟಾರನ್ನು ಅಳವಡಿಸಿದೆ. ೨೦೧೧-೧೨ ರಲ್ಲಿ ಪಟ್ಟಣದಲ್ಲಿ ಒಟ್ಟು ೨೯೯೭ ಸಾರ್ವಜನಿಕ ಕೊಳಾಯಿಗಳು, ೨೬೭೦ ಗೃಹ ಬಳಕೆಗೆ ಮತ್ತು ೨೭ ವಾಣಿಜ್ಯ ಸಂಪರ್ಕ ಕಲ್ಪಿಸಲಾಗಿದ್ದು, ಪ್ರತಿ ದಿನ ೦.೪೮ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೭೦ ಲೀಟರ್ ಆಗಿದೆ. ೨೦೧೧-೧೨ ರಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚ ರೂ. ೨೩೪.೫೦ ಲಕ್ಷಗಳಾಗಿತ್ತು, ಹಾಗೂ ನೀರು ತೆರಿಗೆಯಿಂದ ಬಂದ ಆದಾಯ ರೂ. ೨೫.೬೭ ಲಕ್ಷಗಳಾಗಿತ್ತು. ೨೦೦೮-೦೯ ರಿಂದ ೨೦೧೧-೧೨ರವರೆಗೆ ನೀರು ಸರಬರಾಜು ಯೋಜನೆಗೆ ಆಯಾ ಸಾಲಿನಲ್ಲಿ ಆದ ಒಟ್ಟು ವೆಚ್ಚದ ವಿವರವನ್ನು ಕೋಷ್ಟಕ ೧೨.೧೫ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೧೫ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ.**

| ವರ್ಷ | ರೂ. ಲಕ್ಷಗಳಲ್ಲಿ |
|---|---|
| ೨೦೦೮-೨೦೦೯ | ೧,೦೩.೦೦ |
| ೨೦೦೯-೨೦೧೦ | ೧,೧೯.೫೦ |
| ೨೦೧೦-೨೦೧೧ | ೧,೨೯.೦೦ |
| ೨೦೧೧-೨೦೧೨ | ೨,೩೪.೫೦ |

## ಜನಾರೋಗ್ಯ ಮತ್ತು ನೈರ್ಮಲ್ಯ

ಪುರಸಭೆಯ ಆರೋಗ್ಯ ವಿಭಾಗ ಪಟ್ಟಣದಲ್ಲಿ ಸಾಂಕ್ರಾಮಿಕ ರೋಗಗಳ ತಡೆಗೆ ಮುನ್ನೆಚ್ಚರಿಕೆ ಕ್ರಮವಾಗಿ ರೋಗ ನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ನಿರೀಕ್ಷಕರು, ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನೈರ್ಮಲ್ಯ ಕಾಪಾಡಲು ೩೫ ಜನ ಪೌರಕಾರ್ಮಿಕರನ್ನು ಪುರಸಭೆ ನೇಮಿಸಿಕೊಂಡಿದೆ. ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ಪುರಸಭೆಯ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯುವ ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

## ಇತರೆ ಸೌಲಭ್ಯಗಳು

ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ೧೯೪೨ರಲ್ಲಿ ದೊರೆತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ಅಕ್ಟೋಬರ್ ೮, ೨೦೧೩ರಲ್ಲಿದಂತೆ ೨,೧೭೪ ಬೀದಿ ದೀಪಗಳನ್ನು ಹೊಂದಿದ್ದು, ೧೩೩೯ ಟ್ಯೂಬ್‌ಲೈಟ್, ೪೦೧ ಸೋಡಿಯಂ ವೇಪರ್ ದೀಪಗಳು, ಇನ್‌ಕ್ಯಾಂಡೆಸೆಂಟ್ (ಸಿ.ಎಫ್.ಎಲ್) ೩೩೮ ಮತ್ತು ೯೬ ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ.

ಪುರಸಭೆ ವ್ಯಾಪ್ತಿಯಲ್ಲಿ ಅಕ್ಟೋಬರ್ ೮, ೨೦೧೩ಕ್ಕೆ ೪೩ ಕಿ.ಮೀ. ರಸ್ತೆಯಲ್ಲಿ ೧೧.೩೯ ಕಿ.ಮೀ. ಡಾಂಬರ್ ರಸ್ತೆ, ೧೨.೫೮ ಕಿ.ಮೀ. ಕಾಂಕ್ರಿಟ್ ರಸ್ತೆ, ೪.೨೧ ಕಿ.ಮೀ. ಜಲ್ಲಿ ರಸ್ತೆ (WBM) ಹಾಗೂ ೧೪.೮೨ ಕಿ.ಮೀ. ಮಣ್ಣಿನ ರಸ್ತೆ ಸೇರಿದೆ. ರಸ್ತೆ ಉಸ್ತುವಾರಿಗಾಗಿ ಪುರಸಭೆ ೨೦೧೧-೧೨ರಲ್ಲಿ ರೂ. ೨೮.೭೦ ಲಕ್ಷ ಖರ್ಚು ಮಾಡಿದೆ. ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ಈಜುಕೊಳ, ಉದ್ಯಾನವನ, ಬಯಲುರಂಗಮಂದಿರ, ಕ್ರೀಡಾ ಮೈದಾನ, ಸಾರ್ವಜನಿಕ ಗ್ರಂಥಾಲಯ, ಅಂಗನವಾಡಿ ಮುಂತಾದವುಗಳನ್ನು ಒದಗಿಸಲಾಗಿದೆ. ಪುರಸಭೆಯು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಪುರಸಭೆಯು ವಿವಿಧ ಬಾಬ್ತುಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೧೬ ರಲ್ಲಿ ನೀಡಿದೆ.

**ಕೋಷ್ಟಕ ೧೨.೧೬ ಮಧುಗಿರಿ ಪುರಸಭೆಯು ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ೨೦೦೮-೦೯ | ೨೦೦೯-೨೦೧೦ | ೨೦೧೦-೧೧ | ೨೦೧೧-೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೧.೪೪ | ೩೨.೪೦ | ೫೭.೨೮ | ೩೩.೦೧ |
| ೨ | ನೀರು ಸರಬರಾಜು | ೧೨.೨೨ | ೭೦.೪೮ | ೪೦.೮೧ | ೭೪.೮೨ |
| ೩ | ರಸ್ತೆ ಮತ್ತು ದೀಪ ನಿರ್ವಹಣೆ | ೨೮.೮೯ | ೪೭.೭೩ | ೩೧.೯೪ | ೫೯.೩೦ |
| ೪ | ಸಾರ್ವಜನಿಕ ಕಾಮಗಾರಿ | ೨೯೭.೯೦ | ೫೩೭.೪೮ | ೬೩೩.೭೧ | ೪೨೭.೦೧ |
| ೫ | ಇತರೆ | ೧೫.೧೭ | ೪೩.೪೩ | ೫೩.೬೫ | ೪೭.೨೮ |

ಮಧುಗಿರಿ ಪುರಸಭೆಯು ವಿವಿಧ ಮೂಲಗಳಿಂದ ಗಳಿಸಿದ ಆದಾಯ ೨೦೦೮-೦೯ ರಲ್ಲಿ ರೂ. ೩೬೮.೩೫ ಲಕ್ಷಗಳಾಗಿತ್ತು. ಇದು ೨೦೧೧-೧೨ ರಲ್ಲಿ ರೂ. ೪೯೦.೬೯ ಲಕ್ಷಗಳಿಗೆ ಹೆಚ್ಚಿರುವುದು ಗಮನಾರ್ಹವಾಗಿದೆ. ಹಾಗೆಯೇ ಇದೇ ಅವಧಿಗಳಲ್ಲಿ ಕ್ರಮವಾಗಿ ರೂ. ೨೫೩.೫೮ ಹಾಗೂ ರೂ. ೨೯೦.೨೦ ಲಕ್ಷ ವೆಚ್ಚ ಮಾಡಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೧೭ ರಲ್ಲಿ ನೀಡಿದೆ. ಹಾಗೂ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೧೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೧೭ ಮಧುಗಿರಿ ಪುರಸಭೆಯ ವಿವಿಧ ಮೂಲಗಳಿಂದ ಬಂದ ಆದಾಯ ಮತ್ತು ವೆಚ್ಚಗಳ ವಿವರ**

(ರೂ. ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೨೦೦೯ | ೩೬೮.೩೫ | ೨೫೩.೫೮ |
| ೨೦೦೯-೨೦೧೦ | ೬೫೭.೦೦ | ೩೬೮.೯೬ |
| ೨೦೧೦-೨೦೧೧ | ೬೦೫.೧೨ | ೩೪೬.೩೩ |
| ೨೦೧೧-೨೦೧೨ | ೪೯೦.೬೯ | ೨೯೦.೨೦ |

**ಕೋಷ್ಟಕ ೧೨.೧೮ ಮಧುಗಿರಿ ಪುರಸಭೆಯು ಸ್ವರ್ಣಜಯಂತಿ ಶಹರಿರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.**

(ಲಕ್ಷಗಳಲ್ಲಿ)

| ಕ್ರ. ಸಂ | ವಿವರ | ೨೦೦೮-೦೯ | | ೨೦೦೯-೨೦೧೦ | | ೨೦೧೦-೧೧ | | ೨೦೧೧-೧೨ | |
|---|---|---|---|---|---|---|---|---|---|
| ೧ | ತರಬೇತಿ ಕಾರ್ಯಕ್ರಮ | ೦ | ೦ | ೦ | ೦ | ೩.೧೫ | ೦ | ೧.೧೨ | ೪.೨೪ |
| ೨ | ಸಾಮಾಜಿಕ ಸೇವೆ | ೦ | ೦ | ೦ | ೦ | ೦.೫೨ | ೦.೫೨ | ೦.೬೪ | ೦.೦ |
| ೩ | ನಗರ ಕೂಲಿ ಉದ್ಯೋಗ | ೦ | ೦ | ೨.೧೭ | ೦.೦ | ೧.೪೯ | ೦.೮೧ | ೨.೫೧ | ೦.೬೩ |
| ೪ | ನಿರಂತರ ಉಳಿತಾಯ ಗುಂಪು ರಚನೆ | ೦ | ೦ | ೦.೯೮ | ೦ | ೦.೬೦ | ೦.೬೦ | ೧.೦೦ | ೦.೮೦ |
| ೫ | ಡ್ವಾಕ್ರಾ | ೦ | ೦ | ೨.೧೦ | ೨.೧೦ | ೩.೦೦ | ೨.೧೦ | ೩.೦೦ | ೫.೨೫ |
| ೬ | ಮೂಲಭೂತ ಸೌಕರ್ಯ | ೦ | ೦ | ೦ | ೦ | ೦ | ೦ | ೦ | ೦ |

| | | | | | | | | | |
|---|---|---|---|---|---|---|---|---|---|
| ೮ | ಸ್ವಯಂ ಉದ್ಯೋಗ ಯೋಜನೆ | ೦ | ೦ | ೧.೪೦ | ೦ | ೧.೫೦ | ೧.೫೦ | ೨.೫೦ | ೩.೫೦ |

## ಪಾವಗಡ ಪುರಸಭೆ

ಪಾವಗಡ ಪುರಸಭೆಯು ೧೯೫೧ಕ್ಕಿಂತ ಹಿಂದೆಯೇ ಉಪಪುರಸಭೆಯಾಗಿ ಆಡಳಿತಕ್ಕೆ ಒಳಪಟ್ಟಿತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ಪುರಸಭೆಯಾಗಿ ಪುನಾರಚನೆಗೊಂಡಿತು. ಮಾರ್ಚ್ ೧೯೬೪ರ ಪುನಾರಚಿತ ಪುರಸಭೆಯು ೧೫ ಚುನಾಯಿತ ಸದಸ್ಯರನ್ನೊಳಗೊಂಡಿದ್ದು, ಮೀಸಲಾತಿ ನಿಯಮದಂತೆ ಇಬ್ಬರು ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಿಂದ ಆಯ್ಕೆಗೊಂಡಿದ್ದರು. ೧೯೬೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆ ೫,೯೧೩ ಆಗಿದ್ದು, ೧.೦೧ ಕಿ.ಮೀ. ವಿಸ್ತೀರ್ಣ ಹೊಂದಿದ್ದು, ೬೯೬ ವಾಸದ ಮನೆಗಳನ್ನು ಹೊಂದಿತ್ತು.

೨೦೦೧ರ ಜನಗಣತಿಯಂತೆ ಪಾವಗಡ ಪುರಸಭೆ ಜನಸಂಖ್ಯೆ ೨೮,೦೬೮ ಆಗಿದ್ದು, ೫,೭೫೯ ಕುಟುಂಬಗಳನ್ನು ಹೊಂದಿತ್ತು. ಪುರಸಭೆಯ ವ್ಯಾಪ್ತಿಯು ೬.೫೭ ಚ.ಕಿ.ಮೀ. ಆಗಿತ್ತು. ೨೦೧೧ರ ಜನಗಣತಿಯ ಪ್ರಕಾರ ಪುರಸಭೆಯ ಜನಸಂಖ್ಯೆ ೨೮,೪೮೬ ಆಗಿದ್ದು, ೬,೫೩೪ ಕುಟುಂಬಗಳನ್ನು ಹೊಂದಿದೆ. ಪುರಸಭೆಯ ವ್ಯಾಪ್ತಿಯು ೬.೫೭ ಕಿ.ಮೀ ಗೆ ವಿಸ್ತರಿಸಿದೆ. ಪುರಸಭೆಗೆ ೨೦೧೨ರಲ್ಲಿ ತೆರಿಗೆ ಸಂದಾಯ ಮಾಡುವ ಖಾತೆದಾರರ ಸಂಖ್ಯೆ ೪,೬೨೪ ಆಗಿದ್ದು, ಒಟ್ಟು ಕರ ವಸೂಲಿಯು ರೂ. ೩೨.೫೮ ಲಕ್ಷಗಳಾಗಿತ್ತು. ೨೦೧೩ ರಲ್ಲಿ ಪುರಸಭೆ ಚುನಾವಣೆ ನಡೆದಿದ್ದು, ೨೩ ವಾರ್ಡ್‌ಗಳಿಂದ ಆಯ್ಕೆಯಾದ ೨೩ ಜನ ಸದಸ್ಯರ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೧೯ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೧೯ ಸದಸ್ಯರುಗಳ ಮೀಸಲಾತಿ ವಿವರ.**

| | ಸ್ಥಾನವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೦೪ | ೦೨ | ೦೬ |
| ೨ | ಪರಿಶಿಷ್ಟ ಜಾತಿ | ೦೩ | ೦೧ | ೦೪ |
| ೩ | ಪರಿಶಿಷ್ಟ ಪಂಗಡ | ೦೨ | ೦೨ | ೦೪ |
| ೪ | ಹಿಂದುಳಿದ ವರ್ಗ 'ಎ' | ೦೫ | ೦೨ | ೦೭ |
| ೫ | ಹಿಂದುಳಿದ ವರ್ಗ 'ಬಿ' | ೦೧ | ೦೧ | ೦೨ |
| **ಒಟ್ಟು** | | **೧೫** | **೦೮** | **೨೩** |

### ನೀರು ಪೂರೈಕೆ

ಪುರಸಭೆಯು ಶುದ್ಧ ಕುಡಿಯುವ ನೀರು ಪೂರೈಕೆಗಾಗಿ ೧೨ ಕೊಳವೆ ಬಾವಿಗಳನ್ನು ಹೊಂದಿದ್ದು, ಪಟ್ಟಣದ ಮುಖ್ಯ ನೀರಿನ ಮೂಲವಾಗಿವೆ. ಪುರಸಭೆಯು ಎರಡು ಪಂಪಿಂಗ್ ಸ್ಟೇಷನ್ ಹಾಗೂ ಮೂರು ನೀರು ಸಂಗ್ರಾಹಕ ಟ್ಯಾಂಕ್‌ಗಳನ್ನು ನಿರ್ಮಿಸಿದೆ. ಈ ಸಂಗ್ರಾಹಕಗಳು ೩,೦೦,೦೦೦ ಗ್ಯಾಲನ್ ಕ್ಷಮತೆಯನ್ನು ಹೊಂದಿವೆ. ಪುರಸಭೆಯ ವ್ಯಾಪ್ತಿಯಲ್ಲಿ ೧೦ ಕೊಳವೆ ಬಾವಿಗಳನ್ನು ಕೊರೆಯಿಸಿದ್ದು, ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಮತ್ತು ವಿದ್ಯುತ್ ಮೋಟಾರನ್ನು ಅಳವಡಿಸಲಾಗಿದೆ. ೨೦೧೧-೧೨ರ ಮಾರ್ಚ್ ಅಂತ್ಯಕ್ಕೆ ಪಟ್ಟಣದಲ್ಲಿ ೨೬೦೦ ಸಾರ್ವಜನಿಕ ಬೀದಿ ನಲ್ಲಿಗಳು, ೨,೫೭೮ ಗೃಹ ಬಳಕೆ ನಲ್ಲಿಗಳ ಮೂಲಕ ಸಂಪರ್ಕಗಳನ್ನು ಕಲ್ಪಿಸಲಾಗಿದ್ದು, ಪ್ರತಿ ದಿನ ೯೦,೦೦೦ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ೨೦೧೧-೧೨ರಲ್ಲಿ ನೀರು ಸರಬರಾಜು ಯೋಜನೆಗಾಗಿ ಪುರಸಭೆ ಮಾಡಿದ ವೆಚ್ಚ ರೂ. ೨೮.೬೫ ಲಕ್ಷಗಳು ಹಾಗೂ ಪುರಸಭೆಗೆ ನೀರಿನ ತೆರಿಗೆಗಳ ಮೂಲಕ ಸಂದಾಯವಾದ ಹಣ ರೂ. ೬.೩೪ ಲಕ್ಷ ಆಗಿದ್ದಿತು. ೨೦೦೮-೦೯ ರಿಂದ ೨೦೧೧-೧೨ರವರೆಗೆ ನೀರು ಸರಬರಾಜು ಯೋಜನೆಗೆ ವೆಚ್ಚವಾದ ವಿವರವನ್ನು ಕೋಷ್ಟಕ ೧೨.೨೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೦ ಪಾವಗಡ ಪುರಸಭೆಯಲ್ಲಿ ನೀರು ಸರಬರಾಜು ಯೋಜನೆಗೆ ಮಾಡಿದ ವೆಚ್ಚದ ವಿವರ.**

| ವರ್ಷ | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|
| ೨೦೦೮-೨೦೦೯ | ೨೭.೫೭ |
| ೨೦೦೯-೨೦೧೦ | ೧೫.೭ |
| ೨೦೧೦-೨೦೧೧ | ೨೪.೧೯ |
| ೨೦೧೧-೨೦೧೨ | ೨೮.೬೫ |

## ಜನಾರೋಗ್ಯ ಮತ್ತು ನೈರ್ಮಲ್ಯ

ಪುರಸಭೆಯ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಸಾಂಕ್ರಾಮಿಕ ರೋಗಗಳ ತಡೆಗೆ ರೋಗ ನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪುರಸಭೆಯ ಆರೋಗ್ಯ ನಿರೀಕ್ಷಕರು, ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ಪುರಸಭೆ ನೈರ್ಮಲ್ಯ ಕಾಪಾಡಲು ೧೬ ಜನ ಪೌರಕಾರ್ಮಿಕರನ್ನು ಪುರಸಭೆ ನೇಮಿಸಿಕೊಂಡಿದೆ. ಪುರಸಭೆ ವ್ಯಾಪ್ತಿಯಲ್ಲಿ ಮಲಹಿಂಗುವ ಗುಂಡಿಗಳನ್ನು ಶೌಚಾಲಯಗಳಿಗೆ ಅಳವಡಿಸಲಾಗಿದೆ. ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ.

## ಇತರೆ ಸೌಲಭ್ಯಗಳು

ಈ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ೧೯೫೦ರಲ್ಲಿ ದೊರೆತಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ೨೦೧೧-೧೨ರಲ್ಲಿ ೨,೫೦೦ ಬೀದಿ ದೀಪಗಳನ್ನು ಹೊಂದಿದ್ದು, ೨,೯೭ ಟ್ಯೂಬ್‌ಲೈಟ್, ೪೦೦ ಸೋಡಿಯಂ ವೇಪರ್ ದೀಪಗಳು ಮತ್ತು ಮೂರು ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ.

ಪುರಸಭೆ ವ್ಯಾಪ್ತಿಯಲ್ಲಿರುವ ೪೭.೮೦ ಕಿ.ಮೀ. ರಸ್ತೆಯಲ್ಲಿ ೭.೩೦ ಕಿ.ಮೀ. ಡಾಂಬರ್ ರಸ್ತೆ ಆಗಿದೆ. ರಸ್ತೆ ಉಸ್ತುವಾರಿಗಾಗಿ ಪುರಸಭೆ ೨೦೧೧-೧೨ರಲ್ಲಿ ರೂ. ೧೪೧.೬೭ ಲಕ್ಷಗಳನ್ನು ವೆಚ್ಚ ಮಾಡಿದೆ. ಪುರಸಭೆಯು ಸಾರ್ವಜನಿಕ ಸೌಕರ್ಯಕ್ಕಾಗಿ ಉದ್ಯಾನವನ, ಬಯಲು ರಂಗಮಂದಿರ, ಕ್ರೀಡಾಂಗಣ, ಸಾರ್ವಜನಿಕ ಗ್ರಂಥಾಲಯ ಮುಂತಾದವುಗಳನ್ನು ಒದಗಿಸಿದೆ. ಪುರಸಭೆ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿ, ಪ್ರತಿ ತಿಂಗಳು ರೂ. ೧.೭೫ ಲಕ್ಷ ಬಾಡಿಗೆಯನ್ನು ಪಡೆಯುತ್ತಿದೆ. ಪುರಸಭೆಯು ಸಾಂಸ್ಕೃತಿಕ, ಕ್ರೀಡೆ ಮತ್ತು ಸಾಮಾಜಿಕ ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ೧೬ ಕೊಳಚೆ ಪ್ರದೇಶಗಳಿದ್ದು, ಅಲ್ಲಿನ ನಿವಾಸಿಗಳಿಗೆ ಪುನರ್‌ವಸತಿಗಾಗಿ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ೫೦೮ ಪಕ್ಕಾ ಮನೆಗಳನ್ನು ನಿರ್ಮಿಸಿ ಮೂಲಸೌಕರ್ಯಗಳನ್ನು ಒದಗಿಸಿದೆ. ಪಾವಗಡ ಪುರಸಭೆಯು ವಿವಿಧ ಬಾಬ್ತುಗಳಿಗಾಗಿ ಮಾಡಿದ ಖರ್ಚಿನ ವಿವರವನ್ನು ಕೋಷ್ಟಕ ೧೨.೨೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೧ ಪುರಸಭೆಯು ವಿವಿಧ ಬಾಬ್ತುಗಳಿಗಾಗಿ ಮಾಡಿದ ವೆಚ್ಚದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವಿವರ | ೨೦೦೮-೦೯ | ೨೦೦೯-೧೦ | ೨೦೧೦-೧೧ | ೨೦೧೧-೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೬.೭೫ | ೧೪.೭೧ | ೧೭.೩೯ | ೩೦.೪೯ |
| ೨ | ನೀರು ಸರಬರಾಜು | ೧೭.೫೭ | ೧೫.೭೦ | ೨೧.೧೮ | ೨೮.೬೫ |
| ೩ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೩.೧೩ | ೧.೦೦ | ೧.೫೪ | ೧.೨೨ |
| ೪ | ಸಾರ್ವಜನಿಕ ಕಾಮಗಾರಿ | ೧೨೪.೮೦ | ೩೦೧.೩೬ | ೪೦೦.೨೦ | ೨೫೩.೬೦ |
| ೫ | ರಸ್ತೆ ಮತ್ತು ದೀಪ ನಿರ್ವಹಣೆ | ೧೪.೧೭ | ೨೦.೮೪ | ೨೪.೮೦ | ೨೫.೩ |
| ೬ | ಇತರೆ | - | ೩೨.೯೬ | ೧೪.೦೦ | ೧೫.೮೯ |

**ಮೂಲ:** ಪಾವಗಡ ಪುರಸಭೆ, ಪಾವಗಡ.

ಪಾವಗಡ ಪುರಸಭೆಯು ವಿವಿಧ ಮೂಲಗಳಿಂದ ಪಡೆದ ಆದಾಯ ೨೦೦೮-೦೯ ರಲ್ಲಿ ರೂ. ೪೦೦.೩೩ ಲಕ್ಷಗಳಾಗಿದ್ದರೆ, ೨೦೧೧-೧೨ ರಲ್ಲಿ ರೂ. ೫೯೬.೦೨ ಲಕ್ಷಗಳಾಗಿತ್ತು. ಸದರಿ ಅವಧಿಯಲ್ಲಿ ಕ್ರಮವಾಗಿ ರೂ. ೨೧೯.೮೭ ಲಕ್ಷ ಹಾಗೂ ರೂ. ೪೩೯.೦೪ ಲಕ್ಷ ವೆಚ್ಚ ಮಾಡಿತ್ತು. ಆದಾಯ ಮತ್ತು ವೆಚ್ಚದ ವಿವರಗಳನ್ನು ಕೋಷ್ಟಕ ೧೨.೨೨ ರಲ್ಲಿ ನೀಡಲಾಗಿದೆ. ಹಾಗೆಯೇ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೨.೨೩ ರಲ್ಲಿ ನೀಡಲಾಗಿದೆ.

**ಕೋಷ್ಟಕ೧೨.೨೨ ಪುರಸಭೆಯ ಆದಾಯ ಮತ್ತು ವೆಚ್ಚದ ವಿವರ.**

**(ರೂ.ಲಕ್ಷ ಗಳಲ್ಲಿ)**

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೦೯ | ೪೦೦.೩೩ | ೨೧೯.೮೭ |
| ೨೦೦೯-೧೦ | ೩೨೨.೧೯ | ೪೪೨.೩೧ |
| ೨೦೧೦-೧೧ | ೬೬೩.೦೨ | ೫೪೧.೬೮ |
| ೨೦೧೧-೧೨ | ೫೯೬.೦೨ | ೪೩೯.೦೪ |

**ಕೋಷ್ಟಕ ೧೨.೨೩ ಪುರಸಭೆಯು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ**

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ೨೦೦೮-೨೦೦೯ | | ೨೦೦೯-೨೦೧೦ | | ೨೦೧೦-೨೦೧೧ | | ೨೦೧೧-೧೨ | |
|---|---|---|---|---|---|---|---|---|---|
| | | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು | ಅನುದಾನ | ಖರ್ಚು |
| ೧ | ತರಬೇತಿ ಕಾರ್ಯಕ್ರಮ | ೦.೮೩ | ೧.೦೫ | ೦.೪೦ | – | ೨.೩ | – | ೦.೮೪ | ೩.೧೦ |
| ೨ | ಸಾಮಾಜಿಕ ಸೇವೆ | ೧.೨೯ | ೧.೮೯ | ೦.೪೯ | – | ೦.೩೯ | ೦.೮೮ | ೦.೪೯ | ೦.೧೯ |
| ೩ | ನಗರ ಕೂಲಿ ಉದ್ಯೋಗ | ೨.೫೧ | ೫.೩೧ | ೭.೪೧ | ೪.೯೭ | ೫.೧೨ | ೭.೪೧ | ೧.೮೯ | ೧.೨೬ |
| ೪ | ನಿರಂತರ ಉಳಿತಾಯ ಗುಂಪು ರಚನೆ | ೦.೧೫ | ೦.೧೫ | ೧.೦೦ | – | ೦.೪೦ | ೧.೪೦ | ೦.೬೦ | ೦.೬೦ |
| ೫ | ಡ್ವಾಕ್ರಾ | ೩.೭೩ | – | ೩.೦೦ | ೨.೧೦ | ೩.೦೦ | ೨.೧೦ | ೫.೭೫ | ೭.೫೩ |
| ೬ | ಸ್ವಯಂ ಉದ್ಯೋಗ ಯೋಜನೆ | ೦.೮೨ | ೧.೪೫ | ೧.೫೦ | ೧.೦೦ | ೧.೬೩ | ೨.೧೫ | ೩.೫೦ | ೩.೫೦ |

**ಆಧಾರ:ಪಾವಗಡ ಪುರಸಭೆ, ಪಾವಗಡ.**

## ಕೊರಟಗೆರೆ ಪಟ್ಟಣ ಪಂಚಾಯಿತಿ

ಕೊರಟಗೆರೆ ಪಟ್ಟಣ ಪಂಚಾಯಿತಿಯು ೧೯೩೩ರ ಮೈಸೂರು ಮೈನರ್ ಮುನಿಸಿಪಲ್ ಕಾಯ್ದೆಯನ್ವಯ ೧೯೪೭ ರ ಜನವರಿಯಲ್ಲಿ ಮೊಟ್ಟ ಮೊದಲು ಮೈನರ್ ಪುರಸಭೆಯಾಗಿ ಸ್ಥಾಪನೆಗೊಂಡಿತು. ಆನಂತರ ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ೧೫ ಜನ ಚುನಾಯಿತ ಸದಸ್ಯರನ್ನೊಳಗೊಂಡು ಪುನಾರಚನೆಗೊಂಡಿತು. ಇದರ ವಿಸ್ತೀರ್ಣ ೦.೯೦ ಚ.ಮೈ.ಆಗಿತ್ತು. ೧೯೬೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆ ೪,೩೦೧ ಆಗಿತ್ತು. ೮೧೯ ವಾಸದ ಮನೆಗಳಿದ್ದವು.

೨೦೦೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೧೩,೬೫೫ ಆಗಿದ್ದು, ೩,೦೭೪ ಕುಟುಂಬಗಳನ್ನು ಹೊಂದಿತ್ತು. ಇದರ ವಿಸ್ತೀರ್ಣವು ೧.೨ ಚ.ಕಿ.ಮೀ. ಆಗಿತ್ತು. ೨೦೧೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆ ೧೫,೨೬೫ ಇತ್ತು. ಏಳನೇ ಮಾರ್ಚ್ ೨೦೧೩ ರಲ್ಲಿ ಪಟ್ಟಣ ಪಂಚಾಯಿತಿಗೆ ಚುನಾವಣೆ ನಡೆದಿದ್ದು, ೧೪ ವಾರ್ಡ್‌ಗಳಿಂದ ಆಯ್ಕೆಯಾದ ೧೪ ಜನ ಸದಸ್ಯರ ಮೀಸಲು ಹಂಚಿಕೆಯ ವಿವರವನ್ನು ಕೋಷ್ಟಕ ೧೨.೨೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೪ ಪಂಚಾಯಿತಿ ಸದಸ್ಯರ ಮೀಸಲಾತಿ ವಿವರ.**

| | ಸ್ಥಾನ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೪ | ೧ | ೫ |
| ೨ | ಪರಿಶಿಷ್ಟ ಜಾತಿ | ೧ | ೧ | ೨ |
| ೩ | ಪರಿಶಿಷ್ಟ ಪಂಗಡ | ೧ | ೧ | ೨ |
| ೪ | ಹಿಂದುಳಿದ ವರ್ಗ 'ಎ' | ೩ | ೧ | ೪ |
| ೫ | ಹಿಂದುಳಿದ ವರ್ಗ 'ಬಿ' | – | ೧ | ೧ |
| ಒಟ್ಟು | | ೯ | ೫ | ೧೪ |

**ಆಧಾರ: ೨೦೧೩ ರ ಚುನಾವಣಾ ಮಾಹಿತಿ.**

ಕೊರಟಗೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ೧)ಹನುಮಂತಪುರ ಮತ್ತು ೨) ಮೂಡ್ಲಪಣ್ಣೆ ಬಡಾವಣೆಗಳು ಒಳಪಟ್ಟಿವೆ. ೨೦೧೧–೧೨ರಲ್ಲಿ ಇದ್ದಂತೆ ಪಂಚಾಯಿತಿಯ ತೆರಿಗೆದಾರರ ಸಂಖ್ಯೆ ೫೦೨೧ ಆಗಿದ್ದು, ಒಟ್ಟು ಕರ ವಸೂಲಿಯು ರೂ. ೨೪.೫೦ ಲಕ್ಷ ಆಗಿತ್ತು.

## ನೀರು ಪೂರೈಕೆ

ಪ್ರಾರಂಭದಲ್ಲಿ ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಗೆ ಸುವರ್ಣಮುಖಿ ನದಿಯ ಸಮೀಪದ ದೊಡ್ಡ ಬಾವಿಯನ್ನು ಅವಲಂಬಿಸಿದ್ದು, ಅಲ್ಲಿಂದ ನೀರನ್ನು ಸಂಗ್ರಾಹಕ ಟ್ಯಾಂಕ್‌ನಲ್ಲಿ ಭರ್ತಿ ಮಾಡಿ ಜನರಿಗೆ ಸುರಕ್ಷಿತ ಕುಡಿಯುವ ನೀರನ್ನು ೫೯ ಬೀದಿಕೊಳಾಯಿಗಳು ಹಾಗೂ ೨೭೦ ಖಾಸಗಿ (ಗೃಹಬಳಕೆ) ಕೊಳಾಯಿಗಳ ಮೂಲಕ ಪ್ರತಿದಿನ ೪೦,೦೦೦ ಗ್ಯಾಲನ್ ನೀರು ಪೂರೈಕೆಯಾಗುತ್ತಿದೆ. ೨೦೧೧–೧೨ರ ಮಾರ್ಚ್ ಅಂತ್ಯಕ್ಕೆ ಪಟ್ಟಣ ಪಂಚಾಯಿತಿಯು ಎರಡು ಪಂಪಿಂಗ್ ಸ್ಟೇಷನ್ ಹಾಗೂ ನಾಲ್ಕು ನೀರು ಸಂಗ್ರಾಹಕ ಟ್ಯಾಂಕ್‌ಗಳನ್ನು ನಿರ್ಮಿಸಿದೆ. ಈ ಸಂಗ್ರಾಹಕ ಟ್ಯಾಂಕಗಳು ೮.೭೦ ಲಕ್ಷ ಗ್ಯಾಲನ್ ಕ್ಷಮತೆಯನ್ನು ಹೊಂದಿವೆ. ಪಟ್ಟಣದ ವ್ಯಾಪ್ತಿಯಲ್ಲಿ ೩೨ ಕೊಳವೆ ಬಾವಿಗಳನ್ನು ಕೊರೆಸಿದ್ದು, ಈ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಮತ್ತು ೨೪ ಕ್ಕೆ ವಿದ್ಯುತ್ ಮೋಟಾರನ್ನು ಅಳವಡಿಸಲಾಗಿದೆ. ಪ್ರಸ್ತುತ ಪಟ್ಟಣದಲ್ಲಿ ಒಟ್ಟು ೨೦೧೩ ಸಂಪರ್ಕಗಳಿದ್ದು, ಅವುಗಳಲ್ಲಿ ೨೦ ಸಾರ್ವಜನಿಕ ಬೀದಿ ನಲ್ಲಿಗಳು, ೧೯೮೧ ಗೃಹ ಬಳಕೆ ನಲ್ಲಿಗಳು ಹಾಗೂ ೧೨ ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಲಾಗಿದ್ದು, ಪ್ರತಿ ದಿನ ೧.೧೪ ಎಂ.ಎಲ್.ಡಿ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ೨೦೧೧–೧೨ರಲ್ಲಿ ನೀರು ಪೂರೈಕೆಗಾಗಿ ಪಟ್ಟಣ ಪಂಚಾಯಿತಿ ಮಾಡಿದ ವೆಚ್ಚ ರೂ. ೩೬.೪೮ ಲಕ್ಷಗಳಾಗಿತ್ತು. ಪಂಚಾಯಿತಿಗೆ ನೀರಿನ ತೆರಿಗೆಗಳ ಮೂಲಕ ಸಂದಾಯವಾದ ಹಣ ರೂ. ೧೬.೮೭ ಗಳಾಗಿತ್ತು. ೨೦೦೮–೦೯ ರಿಂದ ೨೦೧೧–೧೨ವರೆಗೆ ನೀರು ಸರಬರಾಜು ಯೋಜನೆಗೆ ಮಾಡಿದ ವೆಚ್ಚದ ವಿವರವನ್ನು ಕೋಷ್ಟಕ ೧೨.೨೫ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೫ ಕೊರಟಗೆರೆ ಪಟ್ಟಣ ಪಂಚಾಯಿತಿಯು ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ.**

| ವರ್ಷಗಳು | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|
| ೨೦೦೮–೨೦೦೯ | ೧೪.೬೮ |
| ೨೦೦೯–೨೦೧೦ | ೧೪.೯೬ |
| ೨೦೧೦–೨೦೧೧ | ೧೫.೪೦ |
| ೨೦೧೧–೨೦೧೨ | ೩೬.೪೮ |

## ಜನಾರೋಗ್ಯ ಮತ್ತು ನೈರ್ಮಲ್ಯ

ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ರೋಗ ನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ, ನೀರು ಹರಿಯುವ ಹೊರ ಚರಂಡಿ ವ್ಯವಸ್ಥೆ ಮಾಡುವುದರ ಮೂಲಕ ಜನಾರೋಗ್ಯವನ್ನು ಉತ್ತಮಪಡಿಸಲಾಗಿದೆ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಲಾಗಿದೆ. ಎಲ್ಲಾ ಮನೆಗಳಿಗೆ ಇಂಗು ಗುಂಡಿ ಸಹಿತ ಶೌಚಾಲಯ ವ್ಯವಸ್ಥೆ ಇದೆ. ಆರೋಗ್ಯ ನಿರೀಕ್ಷಕರು ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ಪಟ್ಟಣ ನೈರ್ಮಲ್ಯ ಕಾಪಾಡಲು ೨೯ ಜನ ಪೌರ ಕಾರ್ಮಿಕರನ್ನು ಪಂಚಾಯಿತಿ ನೇಮಿಸಿಕೊಂಡಿದೆ.

## ಇತರೆ ಸೌಲಭ್ಯಗಳು

ಕೊರಟಗೆರೆ ಪಟ್ಟಣ ಪಂಚಾಯಿತಿಯು ೧೯೪೭ ರಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿತು. ಪಟ್ಟಣದ ವ್ಯಾಪ್ತಿಯಲ್ಲಿ ೨೦೧೨ ರಲ್ಲಿ ೪೧ ಕಿ.ಮೀ. ರಸ್ತೆ ಸಂಪರ್ಕವಿದ್ದು, ಇದರಲ್ಲಿ ೨೫ ಕಿ.ಮೀ. ಡಾಂಬರು ರಸ್ತೆ, ೯.೩೩ ಕಿ.ಮೀ. ಜಲ್ಲಿ ರಸ್ತೆ ಮತ್ತು ೬.೬೭ ಕಿ.ಮೀ. ಇತರೆ ರಸ್ತೆಯಿತ್ತು. ಪಂಚಾಯ್ತಿ ವ್ಯಾಪ್ತಿಯಲ್ಲಿ ೮೪೩ ಬೀದಿ ದೀಪಗಳಲ್ಲಿ, ೭೧೨ ಟ್ಯೂಬ್‌ಲೈಟ್, ೧೩೧ ಸೋಡಿಯಂ ವೇಪರ್ ದೀಪಗಳು ಮತ್ತು ಎರಡು ಹೈಮಾಸ್ಟ್ ದೀಪಗಳು ಸೇರಿವೆ ಹಾಗೂ ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸಂಪರ್ಕಗಳನ್ನು ಒದಗಿಸಲಾಗಿದೆ. ೨೦೦೯-೧೦ ರಲ್ಲಿ ಪಂಚಾಯಿತಿ ವತಿಯಿಂದ ರೂ. ೩೫ ಲಕ್ಷಗಳ ವೆಚ್ಚದಲ್ಲಿ ಮಾರುಕಟ್ಟೆ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ೦೫ ಕೊಳಚೆ ಪ್ರದೇಶಗಳಿದ್ದು, ೫೦ ಪಕ್ಕಾ ಮನೆಗಳನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಾಗಿ ಮೀಸಲಿರಿಸಿದ ಶೇ ೧೮ರ ನಿಧಿಯ ವೆಚ್ಚದಲ್ಲಿ ಅವರಿಗೆ ಅವಶ್ಯಕವಾದ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ೨೦೦೮-೦೯ ರಿಂದ ೨೦೧೧-೧೨ ರವರೆಗೆ ವಿವಿಧ ಬಾಬ್ತುಗಳಿಗಾಗಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೨.೨೬ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೬ ಪಟ್ಟಣ ಪಂಚಾಯಿತಿ ವಿವಿಧ ಬಾಬ್ತುಗಳಿಗೆ ಮಾಡಿದ ವೆಚ್ಚದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ೨೦೦೮-೨೦೦೯ | ೨೦೦೯-೨೦೧೦ | ೨೦೧೦-೨೦೧೧ | ೨೦೧೧-೨೦೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೬.೦೭ | ೬.೯೩ | ೯.೫೬ | ೯.೩೦ |
| ೨ | ನೀರು ಸರಬರಾಜು | ೩.೮೧ | ೩.೭೧ | ೩.೨೦ | ೮.೨೧ |
| ೩ | ರಸ್ತೆ ಮತ್ತು ದೀಪ ನಿರ್ವಹಣೆ | ೨.೬೮ | ೩.೨೧ | ೩.೭೯ | ೮.೨೩ |
| ೪ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೦.೩೬ | ೦.೪೬ | ೦.೫೩ | ೦.೫೭ |
| ೫ | ಸಾರ್ವಜನಿಕ ಕಾಮಗಾರಿ | ೯೨.೪೩ | ೯೩.೬೭ | ೯೨.೯೯ | ೯೫.೪೦ |
| ೬ | ಇತರೆ | ೩೮.೪೯ | ೩೬.೫೭ | ೩೭.೫೩ | ೪೯.೧೮ |

ಕೊರಟಗೆರೆ ಪಟ್ಟಣ ಪಂಚಾಯಿತಿಗೆ ವಿವಿಧ ಮೂಲಗಳಿಂದ ಬಂದ ಆದಾಯ ೨೦೦೮-೦೯ ರೂ. ೩೮೮.೫೦ ಲಕ್ಷಗಳಾಗಿದ್ದರೆ. ೨೦೧೧-೧೨ ರಲ್ಲಿ ರೂ. ೩೦೯.೧೧ ಲಕ್ಷಗಳಿಗೆ ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೨೭ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೭ ಪಟ್ಟಣ ಪಂಚಾಯಿತಿಯ ಆದಾಯ ಮತ್ತು ವೆಚ್ಚಗಳ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮–೨೦೦೯ | ೩೮೮.೫೦ | ೪೫೫.೪೧ |
| ೨೦೦೯–೨೦೧೦ | ೫೩೩.೧೦ | ೫೪೦.೭೫ |
| ೨೦೧೦–೨೦೧೧ | ೨೭೩.೯೮ | ೪೪೨.೩೮ |
| ೨೦೧೧–೨೦೧೨ | ೩೦೯.೧೧ | ೩೦೪.೯೪ |

## ಗುಬ್ಬಿ ಪಟ್ಟಣ ಪಂಚಾಯಿತಿ

ಗುಬ್ಬಿ ಪಟ್ಟಣ ಪಂಚಾಯಿತಿಯು ೧೯೦೯ರಲ್ಲಿ ಉಪ ಪುರಸಭೆಯಾಗಿ ಸ್ಥಾಪನೆಗೊಂಡಿತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ಪುರಸಭೆಯಾಗಿ ಪುನಾರಚನೆಗೊಂಡಿತು. ೧೯೬೧ರ ಜನಗಣತಿಯಂತೆ ಗುಬ್ಬಿ ಪಟ್ಟಣದ ಜನಸಂಖ್ಯೆ ೮,೫೪೩ ಆಗಿದ್ದು, ಇದರ ವಿಸ್ತೀರ್ಣ ೩.೮೦ ಚ. ಕಿ.ಮೀ. ಹೊಂದಿದ್ದು, ೧,೩೪೫ ವಾಸದ ಮನೆಗಳನ್ನು ಹೊಂದಿತ್ತು. ೧೯೯೫ರ ಸರ್ಕಾರದ ಆದೇಶದ ಮೇರೆಗೆ ಅದನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸಲಾಯಿತು.

೨೦೦೧ರ ಜನಗಣತಿ ಪ್ರಕಾರ ಪಟ್ಟಣದ ಜನಸಂಖ್ಯೆ ೧೬,೮೦೫ ಆಗಿದ್ದು, ೩,೭೭೯ ಕುಟುಂಬಗಳನ್ನು ಹೊಂದಿತ್ತು. ಇದರ ವಿಸ್ತೀರ್ಣವು ೪.೩೮ ಚ.ಕಿ.ಮೀ. ಗಳಷ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ೧೮,೪೪೬ ಆಗಿದ್ದು, ೪,೫೦೬ ಕುಟುಂಬಗಳನ್ನು ಹೊಂದಿತ್ತು. ಇದರ ವಿಸ್ತೀರ್ಣ ೪.೩೮ ಚ.ಕಿ.ಮೀ. ಆಗಿದೆ. ದಿ: ೦೭–೦೩–೨೦೧೩ ರಲ್ಲಿ ಗುಬ್ಬಿ ಪಟ್ಟಣ ಪಂಚಾಯಿತಿ ಚುನಾವಣೆ ನಡೆದಿದ್ದು, ೧೭ ವಾರ್ಡ್‌ಗಳಿಂದ ಆಯ್ಕೆಯಾದ ೧೭ ಜನ ಸದಸ್ಯರ ಮೀಸಲು ಹಂಚಿಕೆಯ ವಿವರವನ್ನು ಕೋಷ್ಟಕ ೧೨.೨೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೨೮ ಗುಬ್ಬಿ ಪಟ್ಟಣ ಪಂಚಾಯಿತಿ ಸದಸ್ಯರ ಮೀಸಲು ಹಂಚಿಕೆಗಳ ವಿವರ.**

| ಕ್ರ.ಸಂ | ಸ್ಥಾನವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೦೫ | ೦೩ | ೦೮ |
| ೨ | ಪರಿಶಿಷ್ಟ ಜಾತಿ | ೦೧ | ೦೧ | ೦೨ |
| ೩ | ಪರಿಶಿಷ್ಟ ಪಂಗಡ | – | ೦೧ | ೦೧ |
| ೪ | ಹಿಂದುಳಿದ ವರ್ಗ 'ಎ' | ೦೩ | ೦೨ | ೦೫ |
| ೫ | ಹಿಂದುಳಿದ ವರ್ಗ 'ಬಿ' | – | ೦೧ | ೦೧ |
| ಒಟ್ಟು | | ೦೯ | ೦೮ | ೧೭ |

ಪಟ್ಟಣ ಪಂಚಾಯಿತಿಯಲ್ಲಿ ೨೦೧೨ರಲ್ಲಿ ಇದ್ದಂತೆ ತೆರಿಗೆದಾರರ ಸಂಖ್ಯೆ ೪,೦೫೦ ಆಗಿದ್ದು, ಒಟ್ಟು ಕರ ವಸೂಲಿಯು ೨೮.೦೦ ಲಕ್ಷಗಳಾಗಿತ್ತು. ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ಕೆಳಗೆ ನೀಡಿರುವ ಬಡಾವಣೆಗಳು ಒಳಪಟ್ಟಿವೆ. ಜ್ಯೋತಿನಗರ, ಮಹಾಲಕ್ಷ್ಮಿ ಬಡಾವಣೆ, ಮಾರುತಿನಗರ, ವಿದ್ಯಾನಗರ, ಗಟ್ಟಿ ಬಡಾವಣೆ, ಬಿಲ್ಲೆಪಾಳ್ಯ, ಸುಭಾಶ್ ನಗರ, ಕ್ರಿಶ್ಚಿಯನ್ ಕಾಲೋನಿ, ಹೊಸ ಮತ್ತು ಹಳೆ ಆದಿ ಕರ್ನಾಟಕ ಬಡಾವಣೆ, ಜಗಜೀವನ್ ರಾಂ ನಗರ ಬಡಾವಣೆ, ಹೊಸಪೇಟೆ, ಬೆಲ್ಲದಪೇಟೆ, ಕೆ.ಎಚ್.ಬಿ. ಕಾಲೋನಿ, ಸಿಡಿಲು ಬಸವೇಶ್ವರ ಬಡಾವಣೆ.

### ನೀರು ಪೂರೈಕೆ

ಪಟ್ಟಣಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಪಟ್ಟಣ ಪಂಚಾಯಿತಿಯು ನಿರ್ವಹಿಸುತ್ತಿದ್ದು, ಕೊಳವೆ ಬಾವಿಗಳಿಂದ ಸರಬರಾಜುಗೊಳ್ಳುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀರಿನ ಪೂರೈಕೆಯ ಹೊಣೆ ಹೊತ್ತಿದೆ. ೨೦೧೧–೧೨ರಲ್ಲಿ ರೂ. ೩.೭೭ ಲಕ್ಷ ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್, ಕರ್ನಾಟಕ ನೀರು ಸರಬರಾಜು

ಮಂಡಳಿ ವತಿಯಿಂದ ನಿರ್ಮಾಣಗೊಂಡಿತು. ೨೦೧೨ರಲ್ಲಿ ಕಟ್ಟಿದ ಮೂರು ನೀರು ಸಂಗ್ರಾಹಕ ಟ್ಯಾಂಕ್‌ಗಳು ೨.೭ ಲಕ್ಷ ಗ್ಯಾಲನ್ ಕ್ಷಮತೆಯನ್ನು ಹೊಂದಿದ್ದು, ಪ್ರತಿ ದಿವಸ ೧೦ ಲಕ್ಷ ಲೀಟರ್ ನೀರನ್ನು ಓವರ್‌ಹೆಡ್ ಟ್ಯಾಂಕುಗಳಿಗೆ ಪಂಪ್ ಮಾಡಿ, ಅಲ್ಲಿಂದ ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ೨೦೧೨ರಲ್ಲಿ ನೀರು ಸರಬರಾಜು ವ್ಯವಸ್ಥೆಗೆ ತಗುಲಿದ ವೆಚ್ಚ ರೂ. ೨೬.೬೧ ಲಕ್ಷ ಹಾಗೂ ವಾರ್ಷಿಕ ಆದಾಯ ರೂ. ೧೪.೦೦ ಲಕ್ಷಗಳಾಗಿತ್ತು.

## ಜನಾರೋಗ್ಯ ಮತ್ತು ನೈರ್ಮಲ್ಯ

ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ರೋಗ ನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ, ನೀರು ಹರಿಯುವ ಹೊರ ಚರಂಡಿ ವ್ಯವಸ್ಥೆ ಮಾಡುವುದರ ಮೂಲಕ ಜನಾರೋಗ್ಯವನ್ನು ಉತ್ತಮಪಡಿಸಲಾಗಿದೆ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಲಾಗಿದೆ. ಎಲ್ಲಾ ಮನೆಗಳಿಗೆ ಹಿಂಗು ಗುಂಡಿ ಸಹಿತ ಶೌಚಾಲಯ ವ್ಯವಸ್ಥೆ ಇದೆ. ಆರೋಗ್ಯ ನಿರೀಕ್ಷಕರು ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ಪಟ್ಟಣದ ನೈರ್ಮಲ್ಯ ಕಾಪಾಡಲು ೩೬ ಜನ ಪೌರ ಕಾರ್ಮಿಕರನ್ನು ಪಂಚಾಯಿತಿ ನೇಮಿಸಿಕೊಂಡಿದೆ.

## ಇತರೆ ಸೌಲಭ್ಯಗಳು

ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ೨೦೧೨ರಲ್ಲಿ ೨೪.೫೦ ಕಿ.ಮೀ. ಡಾಂಬರು ರಸ್ತೆ, ೧೬ ಕಿ.ಮೀ. ಜಲ್ಲಿ ರಸ್ತೆ ಮತ್ತು ೩೧.೮೦ ಕಿ.ಮೀ. ಮಣ್ಣಿನ ರಸ್ತೆ ಇದೆ. ಈ ಪಟ್ಟಣಕ್ಕೆ ೧೯೩೪ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು. ಪಟ್ಟಣದಲ್ಲಿ ೧,೪೪೨ ಬೀದಿ ದೀಪಗಳು, ೧,೪೦೦ ಟ್ಯೂಬ್‌ಲೈಟ್‌ಗಳು, ೪೦ ಸೋಡಿಯಂ ವೇಪರ್ ದೀಪಗಳು ಮತ್ತು ಎರಡು ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ.

ಪಟ್ಟಣದ ವ್ಯಾಪ್ತಿಯಲ್ಲಿ ನಾಲ್ಕು ಕೊಳಚೆ ಪ್ರದೇಶಗಳಿದ್ದು, ೨೯ ಪಕ್ಕಾ ಮನೆಗಳನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಾಗಿ ಮೀಸಲಿರಿಸಿದ ಶೇ. ೧೮ರ ನಿಧಿಯ ವೆಚ್ಚದಲ್ಲಿ ಅವರಿಗೆ ಅವಶ್ಯಕವಾದ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಪಂಚಾಯಿತಿಯು ಉದ್ಯಾನವನ ಮತ್ತು ಗ್ರಂಥಾಲಯವನ್ನು ನಿರ್ಮಿಸಿದೆ. ಅಲ್ಲದೆ ವಿವಿಧ ಬಾಬ್ತುಗಳಿಗಾಗಿ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೨೯ ರಲ್ಲಿ ನೀಡಲಾಗಿದೆ.

### ಕೋಷ್ಟಕ ೧೨.೨೯ ಪಟ್ಟಣ ಪಂಚಾಯಿತಿಯು ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ೨೦೦೮–೨೦೦೯ | ೨೦೦೯–೨೦೧೦ | ೨೦೧೦–೨೦೧೧ | ೨೦೧೧–೨೦೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೫,೨೪,೨೩೬ | ೯,೨೦,೦೦೦ | ೧೪,೫೦,೮೦೦ | ೧೫,೭೭,೦೦೦ |
| ೨ | ಸಾರ್ವಜನಿಕ ಕಾಮಗಾರಿ | ೯೫,೦೬,೨೯೮ | ೨೦,೨೫,೯೫೩ | ೨೮,೪೧,೪೦೪ | ೫೦,೫೪,೮೨೬ |
| ೩ | ನೀರು ಸರಬರಾಜು | ೭,೩೩,೭೫೭ | ೨೫,೦೦೨೫೩ | ೧೩,೨೯,೬೦೦ | ೨೫,೬೦,೭೫೬ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | ೩,೮೫,೬೭೩ | ೨,೬೬,೦೦೦ | ೫,೮೨,೩೧೨ | ೧೧,೧೭,೫೯೬ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | – | – | – | – |
| ೬ | ಇತರೆ | ೫೨,೭೭,೨೫೭ | ೧,೨೭,೦೬,೯೨ | ೨,೪೦,೫೮,೬೪೦ | ೧,೨೩,೪೭,೫೬೮ |

**ಮೂಲ: ಗುಬ್ಬಿ ಪಟ್ಟಣ ಪಂಚಾಯಿತಿ, ಗುಬ್ಬಿ.**

ಗುಬ್ಬಿ ಪಟ್ಟಣ ಪಂಚಾಯಿತಿಗೆ ವಿವಿಧ ಮೂಲಗಳಿಂದ ಬಂದ ಆದಾಯ ೨೦೦೮-೦೯ ರಲ್ಲಿ ರೂ. ೨,೧೭,೩೦,೩೧೨ ಗಳಾಗಿತ್ತು. ಇದು ೨೦೧೧-೧೨ ರಲ್ಲಿ ರೂ. ೪,೫೬,೭೫,೮೬೭ ಗಳಿಗೆ ಹೆಚ್ಚಳ ಗೊಂಡಿರುವುದು ಅಂಕಿ ಅಂಶಗಳಿಂದ ಗೋಚರಿಸುತ್ತದೆ. ಹಾಗೆಯೇ ಸದರಿ ಅವಧಿಗಳಲ್ಲಿ ಕ್ರಮವಾಗಿ ವೆಚ್ಚ ರೂ. ೧,೬೪,೨೭,೨೨೧ ಮತ್ತು ರೂ. ೨,೭೬,೫೨,೭೪೬ ಆಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೩೦ ಅನ್ನು ನೋಡಿ.

**ಕೋಷ್ಟಕ ೧೨.೩೦ ಪಟ್ಟಣ ಪಂಚಾಯಿತಿಯ ಆದಾಯ ಮತ್ತು ವೆಚ್ಚಗಳ ವಿವರ.**

**(ರೂ.ಲಕ್ಷಗಳಲ್ಲಿ)**

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೨೦೦೯ | ೨,೧೭,೩೦,೩೧೨ | ೧,೬೪,೨೭,೨೨೧ |
| ೨೦೦೯-೨೦೧೦ | ೬,೪೦,೫೭,೩೫೨ | ೩,೬೬,೪೫,೯೮೮ |
| ೨೦೧೦-೨೦೧೧ | ೭,೫೬,೮೩,೪೨೪ | ೫,೫೮,೩೫,೩೯೭ |
| ೨೦೧೧-೨೦೧೨ | ೪,೫೬,೭೫,೮೬೭ | ೨,೭೬,೫೨,೭೪೬ |

## ತುರುವೇಕೆರೆ ಪಟ್ಟಣ ಪಂಚಾಯಿತಿ

ತುರುವೇಕೆರೆ ಪಟ್ಟಣ ಪಂಚಾಯಿತಿಯು ೧೯೫೨ರವರೆಗೂ ಉಪ ಪುರಸಭೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ೧೯೫೨ರಲ್ಲಿ ಪುರಸಭೆಯಾಗಿ ಅಸ್ತಿತ್ವಕ್ಕೆ ಬಂದಿತು. ೧೯೬೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೪೯೮೩ ಇದ್ದು, ಅದರ ವಿಸ್ತೀರ್ಣ ೨.೬೦ ಚ. ಕಿ.ಮೀ.ಗಳಷ್ಟಿದ್ದು, ೯೨೮ ವಾಸದ ಮನೆಗಳನ್ನು ಹೊಂದಿತ್ತು. ೧೯೯೬ರಲ್ಲಿ ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಗೊಂಡಿತು.

೨೦೦೧ರ ಜನಗಣತಿ ಪ್ರಕಾರ ಪಟ್ಟಣದ ಜನಸಂಖ್ಯೆ ೧೩,೨೮೧ ಇದ್ದು, ೩,೦೮೮ ಕುಟುಂಬಗಳಿದ್ದವು, ತುರುವೇಕೆರೆ ಪಟ್ಟಣ ಪಂಚಾಯಿತಿಯ ವಿಸ್ತೀರ್ಣವು ೩.೭೭ ಚ.ಕಿ.ಮೀ. ಆಗಿತ್ತು. ೨೦೧೧ರ ಜನಗಣತಿಯ ಪ್ರಕಾರ ಪಟ್ಟಣದ ಜನಸಂಖ್ಯೆ ೧೪,೧೯೪ ಆಗಿದ್ದು, ೩,೫೪೯ ಕುಟುಂಬಗಳನ್ನು ಹೊಂದಿದೆ. ೨೦೧೩ ಫೆಬ್ರವರಿ ತಿಂಗಳಿನಲ್ಲಿ ತುರುವೇಕರೆ ಪಟ್ಟಣ ಪಂಚಾಯಿತಿಗೆ ಚುನಾವಣೆ ನಡೆದಿದ್ದು, ೧೪ ವಾರ್ಡ್‌ಗಳಿಂದ ಆಯ್ಕೆಯಾದ ೧೪ ಜನ ಸದಸ್ಯರ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೩೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೩೧ ತುರುವೇಕೆರೆ ಪಟ್ಟಣ ಪಂಚಾಯಿತಿಯ ಸದಸ್ಯರ ಮೀಸಲು ಹಂಚಿಕೆಯ ವಿವರ.**

| | ಸ್ಥಾನವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|---|
| ೧ | ಸಾಮಾನ್ಯ ವರ್ಗ | ೪ | ೨ | ೬ |
| ೨ | ಪರಿಶಿಷ್ಟ ಜಾತಿ | ೧ | ೧ | ೨ |
| ೩ | ಪರಿಶಿಷ್ಟ ಪಂಗಡ | – | ೧ | ೧ |
| ೪ | ಹಿಂದುಳಿದ ವರ್ಗ 'ಎ' | ೩ | ೧ | ೪ |
| ೫ | ಹಿಂದುಳಿದ ವರ್ಗ 'ಬಿ' | – | ೧ | ೧ |
| ಒಟ್ಟು | | ೮ | ೬ | ೧೪ |

೨೦೧೨ರಲ್ಲಿ ಪಂಚಾಯಿತಿಯ ತೆರಿಗೆದಾರರ ಸಂಖ್ಯೆ ೪,೭೩೧ ಆಗಿದ್ದು, ಒಟ್ಟು ಕರ ವಸೂಲಿಯು ರೂ. ೩೩.೨೫ ಲಕ್ಷ ಆಗಿತ್ತು. ತುರುವೇಕೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಯಾವುದೇ ಬಡಾವಣೆಗಳು ನಗರಯೋಜನಾ ಪ್ರಾಧಿಕಾರಕ್ಕೆ ಒಳಪಟ್ಟಿರುವುದಿಲ್ಲ.

## ನೀರು ಸರಬರಾಜು

ಪಟ್ಟಣಕ್ಕೆ ಶುದ್ಧ ಕುಡಿಯುವ ನೀರು ಪೂರೈಕೆಗಾಗಿ ಪಟ್ಟಣ ಪಂಚಾಯಿತಿಯು ಕೊಳವೆ ಬಾವಿಗಳಿಂದ ನೀರನ್ನು, ನೀರು ಸಂಗ್ರಾಹಕ ಟ್ಯಾಂಕುಗಳಲ್ಲಿ ಭರ್ತಿ ಮಾಡಿ ಜನರಿಗೆ ನೀರು ಪೂರೈಕೆ ಮಾಡುತ್ತಿದೆ. ನೀರು ಸರಬರಾಜಿಗೆ ಅಗತ್ಯವಾದ ನಾಲ್ಕು ಜಲ ಸಂಗ್ರಹಣಾಗಾರಗಳಿದ್ದು, ಅವುಗಳ ಒಟ್ಟು ಶೇಖರಣಾ ಸಾಮರ್ಥ್ಯ ೯.೫೦ ಲಕ್ಷ ಲೀಟರ್‌ಗಳಾಗಿವೆ. ತಲಾವಾರು ದೈನಂದಿನ ನೀರು ಸರಬರಾಜು ಪ್ರಮಾಣ ೭೫ ಲೀಟರ್ ಆಗಿದೆ. ೨೦೧೧-೧೨ರಲ್ಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ ೨೨೬೪ ಗೃಹಬಳಕೆ ಸಂಪರ್ಕಗಳು ಮತ್ತು ೭೬ ಸಾರ್ವಜನಿಕ ಬೀದಿ ನಲ್ಲಿಗಳಿವೆ. ನೀರು ಸರಬರಾಜು ವ್ಯವಸ್ಥೆಗೆ ತಗುಲಿದ ವೆಚ್ಚ ರೂ. ೪೬.೩೦ ಲಕ್ಷ ಹಾಗೂ ನೀರಿನ ತೆರಿಗೆ ರೂಪದಲ್ಲಿ ರೂ. ೨೦.೪೭ ಲಕ್ಷ  ಗಳನ್ನು ಸಂಗ್ರಹಿಸಲಾಗಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ರೋಗ ನಿರೋಧಕ ಲಸಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ, ಚರಂಡಿ ವ್ಯವಸ್ಥೆ ಮಾಡುವುದರ ಮೂಲಕ ಜನಾರೋಗ್ಯವನ್ನು ಉತ್ತಮ ಪಡಿಸಲಾಗಿದೆ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಲಾಗಿದೆ. ಎಲ್ಲಾ ಮನೆಗಳಿಗೆ ಹಿಂಗು ಗುಂಡಿ ಸಹಿತ ಶೌಚಾಲಯ ವ್ಯವಸ್ಥೆಯಿದೆ. ಪಟ್ಟಣದ ನೈರ್ಮಲ್ಯ ಕಾಪಾಡಲು ೩೮ ಜನ ಪೌರಕಾರ್ಮಿಕರನ್ನು ನೇಮಿಸಿಕೊಂಡಿದೆ. ಜನನ ಮರಣ ದಾಖಲೆಗಳನ್ನು ಪಟ್ಟಣ ಪಂಚಾಯಿತಿಯು ದಾಖಲಿಸಿಕೊಳ್ಳುತ್ತಿದೆ.

## ಇತರೆ ಸೌಲಭ್ಯಗಳು

ಪಟ್ಟಣದ ವ್ಯಾಪ್ತಿಯಲ್ಲಿ ೨೦೧೧-೧೨ರಲ್ಲಿ ೨೦ ಕಿ.ಮೀ. ಡಾಂಬರುರಸ್ತೆ, ಒಂಬತ್ತು ಕಿ.ಮೀ. ಜಲ್ಲಿರಸ್ತೆ ಮತ್ತು ಒಂಬತ್ತು ಕಿ.ಮೀ. ಮಣ್ಣಿನ ರಸ್ತೆ ಇದೆ. ಪಟ್ಟಣವು ೧೯೫೨ರಲ್ಲಿ ವಿದ್ಯುತ್ ಸಂಪರ್ಕ ಪಡೆದಿದೆ. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ವಿದ್ಯುತ್ ಪೂರೈಕೆ ಆಗುತ್ತಿದ್ದು, ಪಟ್ಟಣದಲ್ಲಿ ಒಟ್ಟು ೧,೭೨೬ ಬೀದಿ ದೀಪಗಳು, ೭೭೪ ಟ್ಯೂಬ್‌ಲೈಟ್‌ಗಳು, ೯೭೦ ಸೋಡಿಯಂ ವೇಪರ್ ದೀಪಗಳು ಮತ್ತು ಮೂರು ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ.

ಪಟ್ಟಣದ ವ್ಯಾಪ್ತಿಯಲ್ಲಿ ಮೂರು ಕೊಳಚೆ ಪ್ರದೇಶಗಳಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಾಗಿ ಮೀಸಲಿರಿಸಿದ ಶೇ ೨೨.೬೫ರ ನಿಧಿಯ ವೆಚ್ಚದಲ್ಲಿ ಅವರಿಗೆ ಅವಶ್ಯಕವಾದ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಪಂಚಾಯಿತಿಯು ೨೦೦೮-೦೯ ರಿಂದ ೨೦೧೧-೧೨ರವರೆಗೆ ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೨.೩೨ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೩೨ ತುರುವೇಕೆರೆ ಪಟ್ಟಣ ಪಂಚಾಯಿತಿ ವಿವಿಧ ಬಾಬ್ತುಗಳಿಗೆ ಮಾಡಿದ ವೆಚ್ಚದ ವಿವರ**

**(ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ವಿವರ | ೨೦೦೮-೨೦೦೯ | ೨೦೦೯-೨೦೧೦ | ೨೦೧೦-೨೦೧೧ | ೨೦೧೧-೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೧೬.೭೭ | ೩೬.೧೫ | ೪೦.೩೬ | ೪೪.೭೧ |
| ೨ | ನೀರು ಸರಬರಾಜು | ೭.೮೦ | ೧೧.೨೧ | ೧೪.೮೦ | ೧೫.೭೩ |
| ೩ | ರಸ್ತೆ ಮತ್ತು ದೀಪ ನಿರ್ವಹಣೆ | ೧೧.೨೧ | ೧೮.೫೮ | ೧೮.೫೦ | ೨೧.೬೫ |
| ೪ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೨.೦೦ | ೨.೦೦ | ೨.೦೦ | ೨.೦೦ |
| ೫ | ಸಾರ್ವಜನಿಕ ಕಾಮಗಾರಿ | ೩೮.೩೪ | ೪೨೯.೦೮ | ೫೪೪.೨೧ | ೧೧೮.೬೭ |
| ೬ | ಇತರೆ | ೮.೪೧ | ೭.೨೨ | ೧೦೪.೫೪ | ೧೮೨.೩೬ |

ತುರುವೇಕೆರೆ ಪಟ್ಟಣ ಪಂಚಾಯಿತಿಯು ವಿವಿಧ ಮೂಲಗಳಿಂದ ಗಳಿಸಿದ ಆದಾಯವು ೨೦೦೮-೦೯ ರಲ್ಲಿ ೫೧೬.೯೩ ಲಕ್ಷಗಳಾಗಿದ್ದು, ಇದು ೨೦೧೧-೧೨ ರೂ. ೩೬೬.೯೦ ಲಕ್ಷಗಳಿಗೆ ಕುಸಿದಿರುವುದು ಗಮನಾರ್ಹವಾಗಿತ್ತು. ಹಾಗೆಯೇ ವೆಚ್ಚವು ಕ್ರಮವಾಗಿ ರೂ. ೧೨೭.೮೮ ಲಕ್ಷಗಳಿಂದ ರೂ. ೪೩೬.೭೧ ಲಕ್ಷಗಳಿಗೆ ಅಧಿಕಗೊಂಡಿದೆ. ವಿವರಗಳಿಗೆ ಕೋಷ್ಟಕ ೧೨.೩೩ ನ್ನು ನೋಡಿ.

**ಕೋಷ್ಟಕ ೧೨.೩೩ ತುರುವೇಕೆರೆ ಪಟ್ಟಣ ಪಂಚಾಯಿತಿಯ ಆದಾಯ ಮತ್ತು ವೆಚ್ಚಗಳ ವಿವರ.**

**(ರೂ. ಲಕ್ಷಗಳಲ್ಲಿ)**

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೦೯ | ೫೧೬.೯೩ | ೧೨೭.೮೮ |
| ೨೦೦೯-೧೦ | ೨೯೯.೪೮ | ೫೪೯.೦೯ |
| ೨೦೧೦-೧೧ | ೬೮೦.೮೦ | ೭೭೮.೯೨ |
| ೨೦೧೧-೧೨ | ೩೬೬.೯೦ | ೪೩೬.೭೧ |

## ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನ

ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಗೆ ಸ್ವಾಯತ್ತತೆ ನೀಡಿ ಆರ್ಥಿಕವಾಗಿ ಬಲಪಡಿಸುವ ಉದ್ದೇಶದಿಂದ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಸದೃಢಗೊಳಿಸುವ ಸಲುವಾಗಿ ಭಾರತದ ಸಂವಿಧಾನದ ಕಲಂ ೭೩ನೇ ಹಾಗೂ ೭೪ಕ್ಕೆ ತಿದ್ದುಪಡಿ ತರಲಾಗಿದೆ. ಸ್ಥಳೀಯ ಸಂಸ್ಥೆಗಳ ಆದಾಯದ ಮೂಲಗಳಾದ ಆಕ್ಟ್ರಾಯ್ ತೆರಿಗೆ, ಮನರಂಜನಾ ತೆರಿಗೆ, ಮೋಟಾರು ವಾಹನ ತೆರಿಗೆ ಇತ್ಯಾದಿಗಳನ್ನು ರದ್ದುಪಡಿಸಿದೆ. ಇದರಿಂದ ಸ್ಥಳೀಯ ಸಂಸ್ಥೆಗಳಿಗೆ ಉಂಟಾದ ಸಂಪನ್ಮೂಲ ಕೊರತೆಗಳನ್ನು ತುಂಬಿಕೊಡುವ ಉದ್ದೇಶದಿಂದ ಸರ್ಕಾರವು ಈ ಸಂಸ್ಥೆಗಳಿಗೆ ಅನುದಾನವನ್ನೊದಗಿಸಲು ತೀರ್ಮಾನಿಸಿತು. ಅನುದಾನ ನೀಡುವುದರಲ್ಲಿನ ಸಾಧಕ ಬಾಧಕಗಳನ್ನು ಅಧ್ಯಯನ ಮಾಡಲು ಸರ್ಕಾರವು ರಾಜ್ಯ ಹಣಕಾಸು ಆಯೋಗವನ್ನು ರಚಿಸಿ, ವರದಿ ನೀಡಲು ಸೂಚಿಸಿತು. ಈ ಆಯೋಗವು ನೀಡಿದ ವರದಿಯನ್ನು ಅಂಗೀಕರಿಸಿದ ಸರ್ಕಾರವು ಅದರಲ್ಲಿ ಶಿಫಾರಸ್ಸುಗೊಂಡಿರುವ ಆಯೋಗದ ಅನುದಾನ ಸೂತ್ರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ೧೯೯೭-೯೮ನೇ ಸಾಲಿನಲ್ಲಿ ಕಾರ್ಯಗತಗೊಳಿಸಿತು. ಅದರಂತೆ ರಾಜ್ಯ ಸರ್ಕಾರಕ್ಕೆ ಪ್ರಾಪ್ತವಾಗುವ ಒಟ್ಟು ರಾಜಸ್ವ ಆದಾಯ ಸ್ವೀಕೃತಿ ಮೊಬಲಗಿನ ಶೇ ೩೬ರಷ್ಟು ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾಗಿದೆ. ಇದರಲ್ಲಿ ಶೇ ೧೫ ಭಾಗವನ್ನು ನಗರ ಸ್ಥಳೀಯ ಸಂಸ್ಥೆಗಳಿಗೂ, ಉಳಿದ ಶೇ ೮೫ ಭಾಗವನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೂ ನೀಡಲಾಗುತ್ತಿದೆ.

ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಯ ಆಧಾರದಲ್ಲಿ ಶೇ ೩೩, ವಿಸ್ತೀರ್ಣದ ಆಧಾರದಲ್ಲಿ ಶೇ ೩೩, ಸಾವಿರ ಜನಸಂಖ್ಯೆಗೆ ಸರ್ಕಾರಿ ಆಸ್ಪತ್ರೆಯಲ್ಲಿನ ಹಾಸಿಗೆಗೆ ಶೇ ೧೧, ಅನಕ್ಷರಸ್ಥರ ಸಂಖ್ಯೆಗನುಗುಣವಾಗಿ ಶೇ ೧೧ ಮತ್ತು ರಸ್ತೆ ಕಿ.ಮೀ. ಉದ್ದವನ್ನು ಅನುಸರಿಸಿ ಶೇ ೧೧ ರಂತೆ ಅನುದಾನವನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ. ಈ ವರದಿಯನ್ನು ಸರ್ಕಾರ ಅಂಗೀಕರಿಸಿದ್ದರೂ ಸಹಾ ಆಯೋಗ ಶಿಫಾರಸ್ಸು ಮಾಡಿದ ರೀತಿಯಲ್ಲಿ ಹಾಗೂ ಪ್ರಮಾಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ನೀಡಲಾದ ಅನುದಾನದ ಬಹುಭಾಗ ಸಿಬ್ಬಂದಿ ವೇತನ ಪಾವತಿಗೆ ವಿನಿಯೋಗವಾಗುತ್ತಿದ್ದು, ಬೀದಿ ದೀಪ, ನೀರು ಸರಬರಾಜು, ವಿದ್ಯುತ್ ಪೂರೈಕೆ ಶುಲ್ಕ, ಒಳಚರಂಡಿ ವ್ಯವಸ್ಥೆ ಮುಂತಾದ ಸೇವೆಗಳಿಗೆ ಹೆಚ್ಚುವರಿಯಾಗಿ ಆಯೋಗದ ಅನುದಾನದಿಂದ ಬಿಡುಗಡೆ ಮಾಡಲಾಗುತ್ತಿದೆ. ಅಲ್ಲದೇ ನಗರ ಸ್ಥಳೀಯ ಸಂಸ್ಥೆಗಳ ತುರ್ತು ಅವಶ್ಯಕ ಕಾಮಗಾರಿಗಳಿಗಾಗಿ ಮಾತ್ರ ಮುಖ್ಯಮಂತ್ರಿಯವರ ವಿವೇಚನೆಯಲ್ಲಿ ಅನುದಾನ ನೀಡಲಾಗುತ್ತದೆ.

# ನಗರಾಭಿವೃದ್ಧಿ ಪ್ರಾಧಿಕಾರ

ನಗರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ನಗರಾಭಿವೃದ್ಧಿ ಇಲಾಖೆಯನ್ನು ಹೊಂದಿದ್ದು, ತುಮಕೂರು ನಗರದ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿದೆ. ನಗರಗಳಿಗೆ ಕುಡಿಯುವ ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಸಮಾಜದ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರಿಗೆ ಹೊಸ ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ಹಂಚುವುದು. ನಗರ ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮುಂತಾದ ನಗರಾಭಿವೃದ್ಧಿ ಕಾರ್ಯ ಯೋಜನೆಗಳನ್ನು ಇದು ನಿರ್ವಹಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆರ್ಥಿಕ ನೆರವಿನಡಿ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ, ಕಡಿಮೆ ಆದಾಯದ ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ ಹಾಗೂ ಬಾಲಿಕಾ ಸಮೃದ್ಧಿ ಯೋಜನೆ ಇವುಗಳನ್ನು ಸಹ ಅನುಷ್ಠಾನಗೊಳಿಸುತ್ತದೆ.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ೧೯೮೭ರ ಕಲಂ ಮೂರರ ಪ್ರಕಾರ ಸರ್ಕಾರದ ಅಧಿಸೂಚನೆಯಂತೆ ೦೨-೦೬-೧೯೮೮ರಂದು ೧೦ ಮಂದಿ ಸದಸ್ಯರೊಂದಿಗೆ ಪ್ರಾರಂಭಿಸಲ್ಪಟ್ಟಿತು. ಪ್ರಾಧಿಕಾರದ ವ್ಯಾಪ್ತಿಯು ನಗರಸಭೆ, ಪುರಸಭೆಗಳು ಸೇರಿದಂತೆ ೨೫ ಗ್ರಾಮಗಳನ್ನೊಳಗೊಂಡು ಒಟ್ಟು ೭೫,೭೫೩ ಚ.ಕಿ.ಮೀ. ವಿಸ್ತೀರ್ಣ ಹೊಂದಿತ್ತು. ೨೦೦೯ರಲ್ಲಿ ಅಧ್ಯಕ್ಷರು ಒಳಗೊಂಡಂತೆ ೧೯ ಮಂದಿ ಸದಸ್ಯರಿದ್ದರು. ಸರಕಾರವೇ ಪ್ರಾಧಿಕಾರಕ್ಕೆ ಅಧ್ಯಕ್ಷರ ನೇಮಕ ಮಾಡುತ್ತದೆ. ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯ ಜನಪ್ರತಿನಿಧಿಗಳಾದ ವಿಧಾನಸಭಾ ಮತ್ತು ವಿಧಾನಪರಿಷತ್ ಸದಸ್ಯರು ಪ್ರಾಧಿಕಾರದ ಸದಸ್ಯರಾಗಿ ಸರಕಾರದಿಂದ ನೇಮಕಗೊಳ್ಳುತ್ತಾರೆ. ನಗರಸಭೆ ಸದಸ್ಯರಲ್ಲಿ ಸಾಮಾನ್ಯ ವರ್ಗದ ಪುರುಷ, ಮಹಿಳೆ, ಪರಿಶಿಷ್ಟ ಜಾತಿ/ಪಂಗಡದ ಒಬ್ಬ ಸದಸ್ಯ ಮತ್ತು ಆರು ಮಂದಿ ಅಧಿಕಾರೇತರ ಸದಸ್ಯರನ್ನು ಸರ್ಕಾರ ನೇಮಿಸುತ್ತದೆ. ವೃತ್ತಿನಿರತ ವಾಸ್ತುಶಿಲ್ಪಿಗಳು, ಜಿಲ್ಲೆಯ ಲೋಕೋಪಯೋಗಿ ಮುಖ್ಯ ಎಂಜಿನಿಯರ್, ಜಿಲ್ಲಾಧಿಕಾರಿಗಳು, ನಗರಯೋಜನಾ ಸದಸ್ಯರು, ನಗರ ಸಭೆ ಆಯುಕ್ತರು, ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್ ಸರಬರಾಜು ಕಂಪನಿ ಇಲಾಖೆಗಳ ಕಾರ್ಯನಿರ್ವಾಹಕ ಅಭಿಯಂತರರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿರುತ್ತಾರೆ. ಪ್ರಾಧಿಕಾರವು ತಿಂಗಳಿಗೆ ಕನಿಷ್ಠ ಒಂದು ಸಭೆ ನಡೆಸಬೇಕಾಗುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯೊಳಗೆ ಬಡಾವಣೆಗಳನ್ನು ರಚಿಸಿ ನಿವೇಶನ ಹಂಚುವುದು, ಮಾಸ್ಟರ್ ಪ್ಲಾನ್ ತಯಾರಿಸುವುದು, ನಿಯಮಾವಳಿಗಳ ಪ್ರಕಾರ ಗೃಹನಿರ್ಮಾಣ, ಕಟ್ಟಡಗಳು, ವಾಣಿಜ್ಯ ಸಂಕೀರ್ಣ, ಸಾರ್ವಜನಿಕ ಉಪಯುಕ್ತ ಕಟ್ಟಡಗಳು, ಶಾಲಾ ಕಾಲೇಜು, ಪಾರ್ಕ್, ಗ್ರಂಥಾಲಯ, ರಸ್ತೆ, ಚರಂಡಿ ವ್ಯವಸ್ಥೆ, ಆಟದ ಮೈದಾನ, ಕ್ರೀಡಾಂಗಣ, ಪ್ರಾರ್ಥನಾ ಮಂದಿರ, ಎಲ್ಲಾ ಮತೀಯ ಧರ್ಮೀಯರಿಗೆ ಸಾಮೂಹಿಕ ಭವನಗಳು, ದೇವಸ್ಥಾನ, ಇತ್ಯಾದಿ ಕಟ್ಟಡಗಳ ನಿರ್ಮಾಣಕ್ಕೆ ಆರಂಭ ದೃಢೀಕರಣ ಪತ್ರ, ನಿರ್ಮಾಣದ ಯೋಜನೆಯ ನಕ್ಷೆಯಂತೆ ಅನುಮತಿ ನೀಡುವುದು, ಹಸಿರು ಪಟ್ಟಿ ವಲಯ ಕಾಪಾಡುವುದು, ಭೂ ಪರಿವರ್ತನೆಗೆ ತಾಂತ್ರಿಕ ಸಲಹೆ ನೀಡುವುದು, ಖಾಸಗಿ ಹಾಗೂ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರಿಗೆ, ಹಿಂದುಳಿದ ದುರ್ಬಲ ಹಾಗೂ ಅಲ್ಪಸಂಖ್ಯಾತರಿಗೆ ಗೃಹ ನಿರ್ಮಾಣಕ್ಕೆ ಪರವಾನಗಿ ನೀಡುವುದು ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು, ಹತ್ತು ವರ್ಷಕ್ಕೊಮ್ಮೆ ಮಾಸ್ಟರ್ ಪ್ಲಾನ್ ಪರಿಷ್ಕರಣೆ ಕಾರ್ಯಯೋಜನೆ, ಅನಧಿಕೃತ ಕಟ್ಟಡಗಳ ನಿಯಂತ್ರಣ ವಿಶೇಷ ಆರ್ಥಿಕ ವಲಯಕ್ಕೆ ಯೋಜನೆಗಳ ಅನುಷ್ಠಾನಕ್ಕೆ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಸರ್ಕಾರ ಮಂಜೂರಾತಿ ನೀಡುವ ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಪ್ರಾಧಿಕಾರದ ಧ್ಯೇಯೋದ್ದೇಶಗಳಾಗಿವೆ. ತುಮಕೂರು ನಗರ ಸಭೆಯ ವಿವಿಧ ಮೂಲಗಳಿಂದ ಬಂದ ಆದಾಯ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೩೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೩೪ ಪ್ರಾಧಿಕಾರದ ಕಳೆದ ಐದು ವರ್ಷಗಳ ಆದಾಯ ಮತ್ತು ವೆಚ್ಚಗಳ ವಿವರ.**

(ರೂ. ಗಳಲ್ಲಿ)

| ವರ್ಷ | ಆದಾಯ | ವೆಚ್ಚ |
|---|---|---|
| ೨೦೦೮-೦೯ | ೨೪,೭೨,೪೨,೩೫೩ | ೨೬,೭೦,೩೦,೨೦೯ |
| ೨೦೦೯-೧೦ | ೨೩,೫೬,೩೫,೭೬೯ | ೧೬,೫೯,೩೬,೩೫೧ |
| ೨೦೧೦-೧೧ | ೬,೭೭,೧೨,೧೧೯ | ೧೬,೦೩,೭೪,೮೪೮ |
| ೨೦೧೧-೧೨ | ೧೯,೪೦,೬೫,೨೫೧ | ೧೯,೬೨,೦೬,೯೭೫ |
| ೨೦೧೨-೧೩ | ೨೩,೯೧,೧೭,೯೨೪ | ೨೪,೭೬,೦೬,೪೯೯ |

## ನಗರ ಯೋಜನೆ ಇಲಾಖೆ

ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು ಮತ್ತು ತಾಂತ್ರಿಕ ನೆರವು ಒದಗಿಸುವುದರ ಮೂಲಕ ಕ್ಷೇತ್ರಾಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು ನಗರ ಯೋಜನೆ ಇಲಾಖೆಯ ಮುಖ್ಯ ಉದ್ದೇಶವಾಗಿದೆ. ೧೯೦೩ರ ಮೈಸೂರು ನಗರಾಭಿವೃದ್ಧಿ ಮಂಡಳಿ ಅಧಿನಿಯಮವು ನಗರ ಯೋಜನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರವು ಸಿದ್ಧಪಡಿಸಿದ ಮೊಟ್ಟ ಮೊದಲ ಕಾಯ್ದೆಯಾಗಿತ್ತು. ನಗರ ಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂದ ಮೇಲೆ ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು, ಜೊತೆಗೆ ಗೃಹ ನಿರ್ಮಾಣ ಮಂಡಳಿ, ಕೈಗಾರಿಕೆ ಕ್ಷೇತ್ರಾಭಿವೃದ್ಧಿ ಮಂಡಳಿ, ನಿಯಂತ್ರಿತ ಮಾರುಕಟ್ಟೆ ಸಮಿತಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಾದ ತಾಂತ್ರಿಕ ನೆರವನ್ನು ಈ ಇಲಾಖೆಯು ಒದಗಿಸುತ್ತದೆ.

ಕರ್ನಾಟಕ ಗ್ರಾಮಾಂತರ ಮತ್ತು ನಗರ ಯೋಜನೆ ಕಾಯ್ದೆ ೧೯೬೧ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೬೫ ರ ಕಾಯ್ದೆಗಳು ಜಾರಿಯಲ್ಲಿದ್ದು, ಈ ಕಾಯ್ದೆ ಮತ್ತು ನಿಯಮಾವಳಿಗಳ ಅಡಿಯಲ್ಲಿ ಕರ್ನಾಟಕದ ನಗರ/ಪಟ್ಟಣ ಪ್ರದೇಶಗಳ ಪ್ರಮುಖ ಗ್ರಾಮಗಳ ಹಾಗೂ ಪ್ರೇಕ್ಷಣೀಯ ಸ್ಥಳಗಳ ಕ್ರಮಬದ್ಧ ಹಾಗೂ ನಿಯಂತ್ರಿತ ಬೆಳವಣಿಗೆಗಾಗಿ ಅಭಿವೃದ್ಧಿ ನಕ್ಷೆಗಳನ್ನು ಮತ್ತು ವರದಿಗಳನ್ನು ತಯಾರಿಸಿ ಭೂ-ಪ್ರದೇಶವನ್ನು ನಿರ್ದಿಷ್ಟಪಡಿಸುವುದು, ಇಲಾಖೆಯ ಮುಖ್ಯ ಕರ್ತವ್ಯವಾಗಿದೆ. ಯೋಜನಾಬದ್ಧವಲ್ಲದ ಅಭಿವೃದ್ಧಿಗಳನ್ನು ನಿಯಂತ್ರಿಸುವುದು, ಹಾಲಿ ಲಭ್ಯವಿರುವ ಸೌಕರ್ಯಗಳನ್ನು ಉತ್ತಮಪಡಿಸುವುದು, ಹೆಚ್ಚುವರಿ ಸೌಕರ್ಯಗಳನ್ನು ಒದಗಿಸುವುದು ಮತ್ತು ಸಮಗ್ರ ಜನತೆಯ ಉಪಯುಕ್ತ ಸೌಲಭ್ಯಗಳನ್ನು ಉತ್ತಮಪಡಿಸುವುದು ಇಲಾಖೆಯ ಇತರ ಯೋಜಿತ ಕಾರ್ಯಗಳಾಗಿವೆ.

ತುಮಕೂರು ಜಿಲ್ಲೆಯ ನಗರ ಯೋಜನಾ ಘಟಕವು ೧೯೭೭ರಲ್ಲಿ ಪ್ರಾರಂಭಗೊಂಡು ಕಾರ್ಯನಿರ್ವಹಿಸುತ್ತಿದೆ. ತುಮಕೂರು ನಗರ ಮತ್ತು ಜಿಲ್ಲೆಯ ಎಲ್ಲಾ ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯನ್ನು ಇದು ಒಳಗೊಂಡಿದೆ. ಈ ಇಲಾಖೆಯ ಮುಖ್ಯ ಯೋಜನಾಬದ್ಧ ಕಾರ್ಯಚಟುವಟಿಕೆಗಳು ಹೀಗಿವೆ;

೧. ಜಿಲ್ಲೆಯಲ್ಲಿನ ನಗರಗಳು, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಎಲ್ಲಾ ಗ್ರಾಮಗಳ ಮೋಜಿಣಿ (ಸರ್ವೆ) ಮಾಡಿ ಮೂಲನಕ್ಷೆ ಮತ್ತು ಅಭಿವೃದ್ಧಿ ನಕ್ಷೆಗಳನ್ನು ತಯಾರಿಸುವುದು.

೨. ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಿ ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದ ನಿಯೋಜಿತ ಬೆಳವಣಿಗೆಗೆ ಪೂರಕವಾದ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು.

೩. ಸಣ್ಣ ಮತ್ತು ಮಧ್ಯಮ ಗಾತ್ರದ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು

೪. ಕರ್ನಾಟಕ ನಗರ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ ೧೯೬೯ರ ಅಡಿಯಲ್ಲಿ ಸರ್ಕಾರದಿಂದ ಘೋಷಿಸಲ್ಪಟ್ಟ ನಗರ ಮತ್ತು ಪಟ್ಟಣಗಳಿಗೆ ಸ್ಥಳಾಭಿವೃದ್ಧಿ ಹಾಗೂ ವ್ಯಾಪಾರಾಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು.

೫. ವಿಶೇಷ ಆರ್ಥಿಕ ವಲಯದ ಯೋಜನೆಯಡಿ ವ್ಯವಸಾಯೇತರ ಭೂ ಉಪಯೋಗಗಳ ಬಗ್ಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

೬. ಸ್ಥಳೀಯ ಸಂಸ್ಥೆಗಳಿಗೆ ಮತ್ತು ಖಾಸಗಿಯವರಿಗೆ ಲೇಔಟ್‌ಗಳನ್ನು ತಯಾರಿಸಿಕೊಡುವುದು.

೭. ಜಿಲ್ಲೆಯಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನೆಯ ಬಗ್ಗೆ ತಾಂತ್ರಿಕ ಸಹಾಯ ನೀಡುವುದು.

೮. ನಗರ ಪಟ್ಟಣಗಳ ಪ್ರಮುಖ ವೃತ್ತ, ಅರಣ್ಯ ಗುಡ್ಡಗಾಡು, ಗಡಿನಾಡು ಹಾಗೂ ಕುಗ್ರಾಮಗಳಿಗೆ ರಸ್ತೆಗಳ ನಿರ್ಮಾಣ, ಸಾರಿಗೆ-ಸಂಚಾರ ನಿರ್ವಹಣೆ ಯೋಜನೆಯನ್ನು ತಯಾರಿಸುವುದು.

೯. ಜಿಲ್ಲೆಯಾದ್ಯಂತ ಕೋರಿರುವ ಭೂ ಪರಿವರ್ತನಾ ಪ್ರಕರಣಗಳಲ್ಲಿ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡುವುದು.

೧೦. ಕೈಗಾರಿಕಾ ಏಕಗವಾಕ್ಷಿ ಸಭೆಯಲ್ಲಿ ಭಾಗವಹಿಸಿ ಜಿಲ್ಲೆಯಲ್ಲಿ ಕೈಗಾರಿಕಾ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳನ್ನು ಬೆಳಸುವ ಸಂಬಂಧ ಸಲಹೆ ಸೂಚನೆ ಮತ್ತು ಅಭಿಪ್ರಾಯಗಳನ್ನು ಸೂಚಿಸುವುದು.

೧೧. ನಗರ ಮತ್ತು ಪಟ್ಟಣಗಳಲ್ಲಿ ತ್ಯಾಜ್ಯ ವಸ್ತು ವಿಲೇವಾರಿ ಸಂಬಂಧದ ಯೋಜನೆಗಳನ್ನು ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಇಲಾಖೆಯ ನಿಯಮದಂತೆ ತಯಾರಿಸಿ ಕಾರ್ಯಗತಗೊಳಿಸುವಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನೆರವು ನೀಡುವುದು.

೧೨. ಕೆರೆ ಸಂರಕ್ಷಣೆಗೆ ಅಗತ್ಯ ಯೋಜನೆಗಳನ್ನು ರೂಪಿಸುವುದು.

೧೩. ನಗರ ಹಾಗೂ ಪಟ್ಟಣಗಳ ಕಟ್ಟಡ ನಕ್ಷೆಗಳನ್ನು ವಲಯ ನಿಯಮಾವಳಿಯಂತೆ ರೂಪಿಸಿ, ತಾಂತ್ರಿಕ ಅಭಿಪ್ರಾಯ ನೀಡುವುದು.

೧೪. ವಸತಿ, ವಾಣಿಜ್ಯ ಸಂಕೀರ್ಣ, ಅಪಾರ್ಟ್‌ಮೆಂಟ್, ಸಾಮೂಹಿಕ ಭವನ ಹಾಗೂ ಕೈಗಾರಿಕಾ ವಿನ್ಯಾಸಗಳನ್ನು ರೂಪಿಸುವುದು.

೧೫. ತುಮಕೂರು ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸ್ಥೂಲಾಭಿವೃದ್ಧಿ ಯೋಜನೆ ಮತ್ತು ವ್ಯಾಪಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅವುಗಳಿಗೆ ಸರಕಾರದ ಅನುಮೋದನೆಯನ್ನು ಪಡೆಯುವುದು.

ಸರ್ಕಾರ ಅನುಮೋದನೆ ನೀಡಿದ ಯೋಜನೆಯ ಪ್ರಕಾರ ಸ್ಥಳೀಯ ಯೋಜನಾ ವಲಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಆರಂಭ ದೃಢೀಕರಣ ಪತ್ರ ನೀಡುವುದು.

ಜಿಲ್ಲೆಯಲ್ಲಿ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನೆ ಅಧಿನಿಯಮದನ್ವಯ ಈಗಾಗಲೇ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

೧. ಕೇಂದ್ರ ಯೋಜನೆಯನ್ವಯ ರಾಜ್ಯ ಸರ್ಕಾರದ ಆದೇಶದಂತೆ ತುಮಕೂರು ನಗರಕ್ಕೆ ಸ್ಥೂಲಾಭಿವೃದ್ಧಿ ಯೋಜನೆಯನ್ನು ಸರ್ಕಾರ ಅಂತಿಮವಾಗಿ ಅನುಮೋದಿಸಿದೆ. ಯೋಜನೆಯ ಧ್ಯೇಯೋದ್ದೇಶಗಳು ಪ್ರಸ್ತುತ ಜಾರಿಯಲ್ಲಿದೆ.

೨. ಜಿಲ್ಲೆಯ ಎಲ್ಲಾ ನಗರ ಪಟ್ಟಣಗಳಲ್ಲಿ ಪ್ರಮಾಣಬದ್ಧ ಭೂಬಳಕೆ, ಸೂಕ್ಷ್ಮ ಸಂಪರ್ಕ ವ್ಯವಸ್ಥೆ, ಶಿಕ್ಷಣ, ಆರೋಗ್ಯ, ಮನರಂಜನೆ, ಅಗತ್ಯ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಒದಗಿಸಿದೆ. ಜನರ ಸಾಮಾಜಿಕ, ಆರ್ಥಿಕ ಸಮೃದ್ಧಿಗಾಗಿ ಶ್ರಮಿಸುತ್ತಿದೆ. ಗ್ರಾಮೀಣ ಪ್ರದೇಶಗಳನ್ನು ಸೌಂದರ್ಯ ಮತ್ತು ಚಟುವಟಿಕೆ ದೃಷ್ಟಿಯಿಂದ ಆಕರ್ಷಕಗೊಳಿಸುವ ಯೋಜನೆ ರೂಪಿಸಲಾಗಿದೆ.

೩. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಜಮೀನಿನ ಮೌಲ್ಯದಲ್ಲಿ ಹೆಚ್ಚಳದಿಂದಾಗಿ ದುರುಪಯೋಗಪಡಿಸಿಕೊಳ್ಳುವುದನ್ನು ತಡೆಗಟ್ಟಲಾಗಿದೆ ಮತ್ತು ಅಕ್ರಮ ಬೆಳವಣಿಗೆಯನ್ನು ನಿಯಂತ್ರಿಸಲಾಗಿದೆ.

೪. ತುಮಕೂರು, ತಿಪಟೂರು, ಮಧುಗಿರಿ ಚಿಕ್ಕನಾಯಕನಹಳ್ಳಿ ಮತ್ತು ಶಿರಾ ಪಟ್ಟಣಗಳ ಸ್ಥೂಲಾಭಿವೃದ್ಧಿ ಯೋಜನೆ ಮತ್ತು ಅಭಿವೃದ್ಧಿ ನಕ್ಷೆ ತಯಾರಿಸಲಾಗಿದೆ.

೫. ಜಮೀನಿನ ಸಮತೋಲನ ಉಪಯೋಗಕ್ಕೆ ಲಭ್ಯವಿರುವ ಮನರಂಜನೆಯ ಸೌಕರ್ಯವನ್ನು ಕಾಪಾಡಿಕೊಂಡು ಅದನ್ನು ಉತ್ತಮಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

೬. ಉದ್ದೇಶಿತ ಜನಸಂಖ್ಯೆ ಹೆಚ್ಚಳದ ಮತ್ತು ಪರಿಸರದ ಆರೋಗ್ಯಕರ ಬೆಳವಣಿಗೆಯ ಅಂಶವನ್ನು ಗಮನದಲ್ಲಿಟ್ಟುಕೊಂಡು

ಕೈಗಾರಿಕೆ ಮತ್ತು ವಾಣಿಜ್ಯದ ಅಭಿವೃದ್ಧಿಗೆ ಸೂಕ್ತ ಸವಲತ್ತುಗಳನ್ನು ಕಲ್ಪಿಸಿ ಜನರ ಬದುಕನ್ನು ಉತ್ತಮಗೊಳಿಸಲು ಪ್ರಯತ್ನ ಮಾಡಲಾಗಿದೆ.

೭. ಜಿಲ್ಲೆಯ ಕುಣಿಗಲ್, ಗುಬ್ಬಿ, ತುರುವೇಕೆರೆ, ಪಾವಗಡ ಮತ್ತು ಕೊರಟಗೆರೆ ಪಟ್ಟಣಗಳ ಅಭಿವೃದ್ಧಿ ನಕ್ಷೆಗಳನ್ನು ತಯಾರಿಸಲಾಗುತ್ತಿದೆ.

ತಾಲೂಕುಗಳ ವ್ಯಾಪ್ತಿಗೊಳಪಡುವ ಗ್ರಾಮಗಳನ್ನು ಒಳಗೊಂಡಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದಡಿ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸುವ ಯೋಜನೆ ಇದೆ.

ನಗರ ಯೋಜನೆ ಪ್ರಾಧಿಕಾರದ ಮೇಲ್ಕಂಡ ಕಾರ್ಯಚಟುವಟಿಕೆಗಳಿಂದ ಜಿಲ್ಲೆಯ ಜನರ ಆರ್ಥಿಕ, ಸಾಮಾಜಿಕ ಶೈಕ್ಷಣಿಕ ಮಟ್ಟಗಳಲ್ಲಿ ಮಹತ್ತರ ಸುಧಾರಣೆಗಳಾಗಿವೆ. ಜೊತೆಗೆ ನಗರ ಪಟ್ಟಣಗಳ ಸ್ವರೂಪ ಬದಲಾವಣೆಗೊಂಡಿದ್ದು, ಹೂಡಿಕೆದಾರರು ತಮ್ಮ ಬಂಡವಾಳವನ್ನು ಇಲ್ಲಿನ ಕೈಗಾರಿಕೆ, ವಾಣಿಜ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಲು ಮುಂದೆ ಬಂದಿದ್ದಾರೆ. ಇದರ ಪರಿಣಾಮವಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯು ಸಾಧ್ಯವಾಗಿದೆ.

## ಸ್ಥಳೀಯ ಯೋಜನಾ ಪ್ರಾಧಿಕಾರಗಳು

೧೯೭೭ ರಲ್ಲಿ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾಂನಿಂಗ್(ಕೆಟಿಸಿಪಿ) ಕಾಯ್ದೆಯನ್ವಯ ತುಮಕೂರು ನಗರಕ್ಕೆ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ, ನಗರ ಯೋಜನಾ ಪ್ರಾಧಿಕಾರವನ್ನು ರಚಿಸಿ ಸ್ಥಳೀಯ ಕಚೇರಿಯನ್ನು ಪ್ರಾರಂಭಿಸಲಾಗಿದೆ. ತದನಂತರ ೧೯೮೮ರಂದು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ಪರಿವರ್ತನೆಗೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ತಿಪಟೂರು ಪಟ್ಟಣಕ್ಕೆ ತಿಪಟೂರು ಮತ್ತು ಏಳು ಕಂದಾಯ ಗ್ರಾಮಗಳನ್ನೊಳಗೊಂಡ ಪುರಸಭಾ ವ್ಯಾಪ್ತಿಯನ್ನು ೧೯೯೬ರಲ್ಲಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಅದರಂತೆ, ತಿಪಟೂರು ನಗರಸಭೆಯ ಕಾರ್ಯಾಲಯದಲ್ಲಿ ಯೋಜನಾ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ ಶಿರಾ ಪಟ್ಟಣಕ್ಕೆ ಶಿರಾ ಮತ್ತು ಐದು ಕಂದಾಯ ಗ್ರಾಮಗಳನ್ನು ಒಳಗೊಂಡ ಪುರಸಭಾ ವ್ಯಾಪ್ತಿಯನ್ನು ೧೯೯೮ರಲ್ಲಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಅದರಂತೆ, ಶಿರಾ ನಗರಸಭೆಯ ಕಾರ್ಯಾಲಯದಲ್ಲಿ ಯೋಜನಾ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ. ಮಧುಗಿರಿ ಪಟ್ಟಣಕ್ಕೆ ಮಧುಗಿರಿ ಮತ್ತು ಐದು ಕಂದಾಯ ಗ್ರಾಮಗಳನ್ನು ಒಳಗೊಂಡ ಪುರಸಭಾ ವ್ಯಾಪ್ತಿಯನ್ನು ೨೦೦೧ರಲ್ಲಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಅದರಂತೆ ಮಧುಗಿರಿ ಪುರಸಭೆಯ ಕಾರ್ಯಾಲಯದಲ್ಲಿ ಯೋಜನಾ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಪ್ರಾಧಿಕಾರಗಳು ಈ ಪ್ರದೇಶಗಳ ಬೆಳವಣಿಗೆಗಳಿಗಾಗಿ ಹಲವಾರು ಪೂರಕ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ ೧. ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್(ಕೆಟಿಸಿಪಿ) ಕಾಯ್ದೆಯನ್ವಯ ಪಟ್ಟಣವು ವ್ಯವಸ್ಥಿತವಾಗಿ ಬೆಳೆಯುವಂತೆ ಮಾಸ್ಟರ್ ಪ್ಲಾನ್ ತಯಾರಿಸಿದೆ. ೨. ಪುನರ್ವಸತಿ, ಪುನರ್‌ನಿರ್ಮಾಣ, ಹಾಗೂ ಸಂಚಾರ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ತಯಾರಿಸುತ್ತದೆ. ೩. ನಗರದ ಸೌಂದರ್ಯ ವೃದ್ಧಿಗೊಳಿಸಲು ಯೋಜನೆಗಳನ್ನು ರೂಪಿಸಿದೆ. ೪. ವ್ಯವಸಾಯದ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳಿಗೆ ಭೂಪರಿವರ್ತನೆಗೊಳಿಸಲು ತಾಂತ್ರಿಕ ಅಭಿಪ್ರಾಯ ನೀಡುತ್ತದೆ. ೫. ವಸತಿ ಮತ್ತಿತರ ಪಟ್ಟಣಗಳಿಗೆ ಅನುಮೋದನೆ ಹಾಗೂ ತಾಂತ್ರಿಕ ಅಭಿಪ್ರಾಯ ನೀಡುತ್ತದೆ. ಜನರ ಆರ್ಥಿಕ ಮಟ್ಟ ಸುಧಾರಣೆ ಮತ್ತು ಪಟ್ಟಣದ ಸ್ವರೂಪದಲ್ಲಿ ಆರೋಗ್ಯಕರ, ನಿಯಂತ್ರಿತ ಮತ್ತು ನಿಯೋಜಿತ ಬೆಳವಣಿಗೆ ಉಂಟಾಗುವಲ್ಲಿ ಈ ಪ್ರಾಧಿಕಾರಗಳು ಮಹತ್ತರ ಪಾತ್ರ ವಹಿಸಿವೆ.

## ಪ್ರಾದೇಶಿಕ ಯೋಜನೆ

ನದಿಗಳ ಸಾಮರ್ಥ್ಯವನ್ನು ಜಲಮೂಲ ಸಂಪನ್ಮೂಲವಾಗಿ ಉಪಯೋಗಿಸಿಕೊಂಡು ಉತ್ತಮ ಪೂರಕ ಸೌಲಭ್ಯಗಳನ್ನು ಒದಗಿಸಿ ಹಿಂದುಳಿದ ಪ್ರದೇಶಗಳ ಸಮತೋಲನ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧಿಸುವುದಕ್ಕೆ ತುಮಕೂರು, ಮಂಡ್ಯ, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳನ್ನೊಳಗೊಂಡ ಕಾವೇರಿ ಕಣಿವೆ ಪ್ರಾದೇಶಿಕ ಅಭಿವೃದ್ಧಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಗರ ಯೋಜನೆಯ ಉಪನಿರ್ದೇಶಕರ ಕಛೇರಿಯನ್ನು ಮೈಸೂರಿನಲ್ಲಿ ೧೯೭೬ರಲ್ಲಿ ತೆರೆಯಲಾಗಿದೆ.

## ವಸತಿ ಯೋಜನೆ

ನಗರೀಕರಣ ಹಾಗೂ ಕೈಗಾರಿಕೀಕರಣದಿಂದಾಗಿ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಜನರ ವಲಸೆ ದಿನೇ ದಿನೇ ಹೆಚ್ಚುತ್ತಿದೆ. ಮೂಲಭೂತ ಸೌಕರ್ಯಗಳಲ್ಲೊಂದಾದ ವಸತಿ ಸಮಸ್ಯೆ ಎದುರಿಸಬೇಕಾದ ಪರಿಸ್ಥಿತಿ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ತೀವ್ರವಾಗಿ ಕಂಡು ಬರುತ್ತಿದೆ. ವಸತಿ ಸೌಲಭ್ಯದ ಕೊರತೆ ಹಿಂದೆಂದಿಗಿಂತಲೂ ಪ್ರಸ್ತುತ ಹೆಚ್ಚಾಗಿದೆ. ಅಭಿವೃದ್ಧಿ ಹೊಂದಿದ ನಿವೇಶನಗಳ ಅಲಭ್ಯತೆ ಹೆಚ್ಚುತ್ತಿದೆ. ನಿರ್ಮಾಣ ವೆಚ್ಚ, ನಗರ ಪ್ರದೇಶಕ್ಕೆ ಜೀವನೋಪಾಯಕ್ಕಾಗಿ ವಲಸೆ ಬಂದ ಗ್ರಾಮೀಣ ಜನತೆಯ ವಸತಿ ಸಮಸ್ಯೆ, ಕಾರ್ಮಿಕರ ವಲಸೆ ಮುಂತಾದ ಅಂಶಗಳು ವಸತಿ ಸಮಸ್ಯೆಯನ್ನು ತೀವ್ರಗೊಳಿಸಿವೆ.

ಕರ್ನಾಟಕ ರಾಜ್ಯದ ಇತರ ನಗರ ಪ್ರದೇಶಗಳಲ್ಲಿರುವಂತೆ ತುಮಕೂರು ನಗರ ಪ್ರದೇಶಗಳಲ್ಲಿಯೂ ವಾಸದ ಮನೆಗಳ ತೀವ್ರವಾದ ಕೊರತೆ, ಮೇಲಾಗಿ ತುಮಕೂರು ಜಿಲ್ಲೆಯು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ ಕೇವಲ ೩೦ ಕಿ.ಮೀ. ನಷ್ಟು ಸಮೀಪವಿರುವುದರಿಂದ ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಕಂಡು ಬರುತ್ತಿರುವ ವಸತಿ ಸಮಸ್ಯೆ ತುಮಕೂರು ನಗರದಲ್ಲಿಯೂ ಕಂಡು ಬರುತ್ತಿದೆ. ಯೋಗ್ಯವಾದ ವಾಸದ ಮನೆಗಳ ತೀವ್ರ ಕೊರತೆಯಿಂದಾಗಿ ವಸತಿ ಸೌಲಭ್ಯಗಳನ್ನು ಒದಗಿಸುವಲ್ಲಿ ಉದ್ಭವಿಸಬಹುದಾದ ವಿವಿಧ ರೀತಿಯ ಸಮಸ್ಯೆಗಳನ್ನರಿತ ಸರ್ಕಾರವೇ ಜಿಲ್ಲೆಯಲ್ಲಿ ಬೃಹತ್ ಗೃಹ ನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ಈ ಕಾರ್ಯಯೋಜನೆಗೆ ಸರ್ಕಾರದೊಂದಿಗೆ ಸಹವರ್ತಿಗಳಾಗಿ ಸರ್ಕಾರೇತರ ಸಂಘ ಸಂಸ್ಥೆಗಳು ಸಹಾ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿವೆ. ಗೃಹ ನಿರ್ಮಾಣ ಸಹಕಾರ ಸಂಘಗಳು, ನಗರಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಮುಂತಾದ ಸಂಸ್ಥೆಗಳು ವಸತಿ ಸೌಲಭ್ಯದ ಕೊರತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ. ವಿವಿಧ ಯೋಜನೆಯಡಿ ನಿರ್ಮಿಸಲಾದ ಜನತಾ ಮನೆಗಳು, ಹುಡ್ಕೋ ಯೋಜನೆಯ ಮನೆಗಳು ಮತ್ತು ಇತರ ಕಡಿಮೆ ವೆಚ್ಚದ ಪ್ರಾಯೋಗಿಕ ಮನೆಗಳು, ಭಾಗ್ಯಮಂದಿರ ಯೋಜನೆಗಳು, ಇಂದಿರಾ ಆವಾಜ್ ಯೋಜನೆಗಳು, ಡಾ.ಅಂಬೇಡ್ಕರ್ ವಸತಿ ಯೋಜನೆ, ಆಶ್ರಯ ಯೋಜನೆ ಮುಂತಾದ ಅನೇಕ ಸರ್ಕಾರದ ಪ್ರಾಯೋಜಿತ ಗೃಹ ನಿರ್ಮಾಣದ ಯೋಜನೆಯಡಿ ನಿರ್ಮಾಣಗೊಂಡ ಮನೆಗಳು ಸ್ವಲ್ಪಮಟ್ಟಿಗೆ ಜಿಲ್ಲೆಯ ವಸತಿ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿದೆ. ಗೃಹ ನಿರ್ಮಾಣ ಯೋಜನೆಗಳಿಂದ ನಿರ್ಮಾಣಗೊಂಡ ಮನೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಮನೆಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿವೆ. ಅಲ್ಪಸಂಖ್ಯಾತ ದುರ್ಬಲ ವರ್ಗದ ಹಿಂದುಳಿದ ಬಡವರು, ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದವರಿಗೆ, ಶಾಲೆಗಳ ಸಿಬ್ಬಂದಿ ವರ್ಗದವರಿಗೆ, ಪೋಲಿಸರಿಗೆ, ಅರಣ್ಯ ಸಿಬ್ಬಂದಿ ವರ್ಗದವರಿಗೆ, ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಗೆ, ಕಾರ್ಖಾನೆ, ಗ್ರಾಮೋದ್ಯೋಗ, ಕರಕುಶಲ ಕಾರ್ಮಿಕರಿಗೆ ಪ್ರತ್ಯೇಕ ಮನೆಗಳನ್ನು ನಿರ್ಮಿಸಿ ಬಹುತೇಕ ವಸತಿ ಸಮಸ್ಯೆಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸಲಾಗಿದೆ.

## ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ಬೆಂಗಳೂರಿನಲ್ಲಿ ಕೇಂದ್ರ ಆಡಳಿತ ಕಚೇರಿಯನ್ನು ಹೊಂದಿದ್ದು, ಜಿಲ್ಲೆಯಲ್ಲಿನ ವಾಸದ ಮನೆಗಳ ಸಮಸ್ಯೆಗಳನ್ನು ಪರಿಹರಿಸಲು ಬೃಹತ್ ಪ್ರಮಾಣದಲ್ಲಿ ಗೃಹನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ತುಮಕೂರು ಜಿಲ್ಲೆಯಲ್ಲಿನ ವಸತಿ ಸೌಲಭ್ಯ ವಂಚಿತರಿಗೆ ವಸತಿ ಒದಗಿಸುವ ಉದ್ದೇಶದಿಂದ ತುಮಕೂರಿನಲ್ಲಿ ಗೃಹ ಮಂಡಳಿಯು ಸಹಾಯಕ ಪ್ರಧಾನ ವ್ಯವಸ್ಥಾಪಕರ ಕಚೇರಿಯನ್ನು ಸ್ಥಾಪಿಸಿದೆ.

ಈ ಕಚೇರಿಯು ಮೂರು ವಿಭಾಗಗಳನ್ನು ಹೊಂದಿದೆ. ಅವುಗಳೆಂದರೆ, ೧. ಹೊಸ ಗೃಹ ನಿರ್ಮಾಣ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಭಾಗ, ೨. ಗೃಹಮಂಡಳಿಯ ಆಸ್ತಿಯನ್ನು ರಕ್ಷಿಸುವ ವಿಭಾಗ ಮತ್ತು ೩. ಹಳೆ ಯೋಜನೆಗಳ ಉಸ್ತುವಾರಿ ವಿಭಾಗ, ಈ ವಿಭಾಗಗಳು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕ ಗೃಹ ಮಂಡಳಿಯು ತುಮಕೂರು ನಗರ ಹಾಗೂ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಗೃಹ ನಿರ್ಮಾಣದ ಕಾರ್ಯ ಯೋಜನೆಯನ್ನು ರೂಪಿಸಿದೆ. ಸರ್ಕಾರದ ಯೋಜನೆಗಳಾದ ಆಶ್ರಯ, ಭಾಗ್ಯಮಂದಿರ,

ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳಿಗೆ, ಹುಡ್ಕೋ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದು ಯೋಜನೆಗಳಲ್ಲಿ ತೊಡಗಿಸುತ್ತದೆ. ಈ ಎಲ್ಲಾ ಯೋಜನೆಗಳಡಿಯಲ್ಲಿ ನಿರ್ಮಿಸಲಾಗುವ ಮನೆಗಳಲ್ಲಿ ಶೇ ೧೫ ಭಾಗವನ್ನು ಸರ್ಕಾರಿ ನೌಕರರಿಗೂ ಮತ್ತು ಶೇ ೧೮ ಭಾಗವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೂ ಮೀಸಲಾಗಿರುತ್ತದೆ. ಇದರ ಜೊತೆಗೆ ಹಿಂದುಳಿದ ವರ್ಗದ 'ಅ' ಮತ್ತು ಹಿಂದುಳಿದ ವರ್ಗ 'ಬ' ಗುಂಪುಗಳಿಗೂ ಸಹಾ ಹಂಚಿಕೆ ಮಾಡುತ್ತಿದೆ. ೨೦೦೧-೦೨ನೇ ಸಾಲಿನಿಂದ ನೋಡಲ್ ಏಜೆನ್ಸಿಯಾಗಿರುವ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (ಆರ್.ಜಿ.ಆರ್. ಹೆಚ್.ಸಿ.ಎಲ್) ಎಲ್ಲಾ ಸರ್ಕಾರಿ ಯೋಜನೆಗಳನ್ನು ನಿರ್ವಹಿಸುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯು ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಇವುಗಳಲ್ಲಿ ಇತ್ತೀಚೆಗೆ ೨೦೦೮-೦೯ನೇ ಸಾಲಿನಲ್ಲಿ ಪ್ರಾರಂಭಿಸಿದ ಮುಖ್ಯಮಂತ್ರಿಗಳ ಮಾದರಿ ಪಟ್ಟಣ ವಸತಿ ಕಾರ್ಯಕ್ರಮ ಮತ್ತು ೧೦೦ ವಸತಿ ಯೋಜನೆ ಎಂಬ ಕಾರ್ಯಕ್ರಮಗಳೂ ಸೇರಿವೆ. ಸ್ಥಳೀಯ ಸಂಸ್ಥೆಗಳ ಸಹಕಾರದಲ್ಲಿ ೫,೦೦೦ ದಿಂದ ೨೦,೦೦೦ ಜನಸಂಖ್ಯೆ ಹೊಂದಿರುವ ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹೋಬಳಿ ಕೇಂದ್ರಗಳಲ್ಲಿ ವಸತಿ ಸೌಲಭ್ಯವನ್ನೊದಗಿಸಲು ಮುಖ್ಯಮಂತ್ರಿಯವರು ಮಾದರಿ ಪಟ್ಟಣ ವಸತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದ್ದು, ಕಾಂಕ್ರೀಟ್, ಡಾಂಬರ್ ರಸ್ತೆಗಳು, ನೀರು ಸರಬರಾಜು, ಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ, ಸಾಲುಮರಗಳು, ಉದ್ಯಾನವನಗಳು, ಮಳೆ ನೀರು ಸಂಗ್ರಹಣೆ, ಮೊದಲಾದ ನಾಗರಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಹಾಲು ಮಾರಾಟ ಕೇಂದ್ರ, ತರಕಾರಿ, ಹಣ್ಣು ಮಾರಾಟ ಕೇಂದ್ರ, ಸಾಮೂಹಿಕ ಭವನ ಹಾಗೂ ಅಂಗಡಿಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಮಂಡಳಿಯು ಜಿಲ್ಲೆಯಲ್ಲಿ ಗೃಹ ನಿರ್ಮಾಣ ಮತ್ತು ವಾಸ ಯೋಗ್ಯ ನಿವೇಶನಗಳ ಅಭಿವೃದ್ಧಿ ಮಾಡಿದ್ದು, ಮಂಡಳಿಯು ಎಲ್.ಐ.ಜಿ (ಕಡಿಮೆ ಆದಾಯ ವರ್ಗ) ಎಂ.ಐ.ಜಿ. (ಮಧ್ಯಮ ಆದಾಯ ವರ್ಗ) ಹಾಗೂ ಎಚ್.ಐ.ಜಿ.(ಅಧಿಕ ಆದಾಯ ವರ್ಗ) ಎಂಬ ಮೂರು ಶ್ರೇಣಿಯ ಮನೆಗಳನ್ನು ನಿರ್ಮಿಸುತ್ತಿದೆ.

## ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ

ತೀವ್ರವಾದ ನಗರೀಕರಣ, ಕೈಗಾರಿಕೀಕರಣ ಹಾಗೂ ಗ್ರಾಮೀಣ ಪ್ರದೇಶದಿಂದ ನಗರ ಪಟ್ಟಣಗಳಿಗೆ ಜನರ ವಲಸೆ, ಇವುಗಳ ಪರಿಣಾಮವಾಗಿ ಇತ್ತೀಚಿನ ದಶಕಗಳಲ್ಲಿ ದೊಡ್ಡ ದೊಡ್ಡ ನಗರ ಹಾಗೂ ಪಟ್ಟಣಗಳಲ್ಲಿ ಜನಸಂಖ್ಯೆ ಕ್ಷಿಪ್ರವಾಗಿ ಹೆಚ್ಚುತ್ತಿದೆ. ಹೀಗೆ ನಗರಗಳಿಗೆ ವಲಸೆ ಬಂದವರಲ್ಲಿ ಆರ್ಥಿಕವಾಗಿ ಹಿಂದುಳಿದ ಬಡವರು, ನಿರುದ್ಯೋಗಿಗಳು ಹೆಚ್ಚಾಗಿರುತ್ತಾರೆ. ವಸತಿ ಸೌಲಭ್ಯ ಕಲ್ಪಿಸಿಕೊಳ್ಳಲು ಅಶಕ್ತರಾಗಿರುವ ಇವರು ನಗರಗಳಲ್ಲಿ ನಿರ್ಜನ ಪ್ರದೇಶಗಳಾದ ಚರಂಡಿಗಳ ಅಕ್ಕಪಕ್ಕ, ರೈಲ್ವೆ ಹಳಿಗಳ ಬದಿಗಳಲ್ಲಿ, ಬಸ್ ನಿಲ್ದಾಣದ ಸಮೀಪ, ಸುರಂಗ ಮಾರ್ಗಗಳಲ್ಲಿ, ಫುಟ್‌ಪಾತ್‌ಗಳಲ್ಲಿ, ಜನರು ಸುಳಿದಾಡದ ಜಾಗ, ಜೌಗು ಪ್ರದೇಶಗಳು, ಹಾಳುಕೊಂಪೆ, ಗುಡಿ, ಚಾವಡಿಗಳಲ್ಲಿ, ಧರ್ಮಛತ್ರಗಳಲ್ಲಿ ಮಲಗುವುದಲ್ಲದೇ ಕೆಲವು ಜಾಗಗಳಲ್ಲಿ ಸೋಗೆಗರಿ, ಪ್ಲಾಸ್ಟಿಕ್ ಹಾಳೆಗಳಿಂದ ಗುಡಿಸಲು, ಜೋಪಡಿಗಳನ್ನು ನಿರ್ಮಿಸಿ ವಾಸಿಸುತ್ತಿರುವುದನ್ನು ಕಾಣಬಹುದು. ಶೌಚಾಲಯಗಳಿಲ್ಲದೇ ಓಣಿ, ಸಂದಿಗಳಲ್ಲಿ, ಮಲಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಯಾವುದೇ ಮೂಲಭೂತ ಸೌಕರ್ಯಗಳೇ ಇಲ್ಲದ ಇಂತಹ ಕೊಳಚೆ ಪ್ರದೇಶಗಳು ಇತ್ತೀಚೆಗೆ ನಗರಗಳಲ್ಲಿ ತೀವ್ರವಾಗಿ ಹೆಚ್ಚುತ್ತಿವೆ. ಇಂತಹ ಕೊಳೆಗೇರಿ ಪ್ರದೇಶಗಳಲ್ಲಿನ ಅನಾರೋಗ್ಯಕರ ವಾತಾವರಣದಲ್ಲಿ ಬದುಕುವ ಜನರು ಅನೇಕ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿದ್ದಾರೆ. ಅಂತಹ ಕಲುಷಿತ, ಅನಾರೋಗ್ಯಕರ ಕೊಳಚೆ ಪ್ರದೇಶಗಳಿಂದ ಹಬ್ಬುವ ಸಾಂಕ್ರಾಮಿಕ ರೋಗಗಳು ಇಡೀ ನಗರದ ಸುತ್ತ ಮುತ್ತ ವ್ಯಾಪಕವಾಗಿ ಹಬ್ಬುವ ಪ್ರಸಂಗಗಳೂ ಇವೆ. ಈ ಬಗ್ಗೆ ಚಿಂತನೆ ನಡೆಸಿದ ಸರ್ಕಾರವು ನಗರ ಪಟ್ಟಣಗಳ ಪ್ರಗತಿಗಳ ಕಪ್ಪುಚುಕ್ಕೆಯಾಗಿರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ೧೯೭೩ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಅಭಿವೃದ್ಧಿ ಕಾಯ್ದೆಯನ್ನು ಜಾರಿಗೊಳಿಸಿತು. ಇದರನ್ವಯ ೧೯೭೫ರಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಕೇಂದ್ರ ಕಚೇರಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ೧೯೭೩ರ ಕಾಯ್ದೆಗೆ ೨೦೦೨ರಲ್ಲಿ ತಿದ್ದುಪಡಿ ತರಲಾಗಿದೆ. ರಾಜ್ಯಾದ್ಯಂತ ಎಲ್ಲ ನಗರ ಪ್ರದೇಶಗಳ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ತಾಂತ್ರಿಕ ನಿರ್ದೇಶಕರು, ಉಸ್ತುವಾರಿಯ ಐದು ವಿಭಾಗೀಯ ಕಚೇರಿಗಳು ಹಾಗೂ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ೧೪ ಉಪವಿಭಾಗೀಯ ಕಚೇರಿಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಂಡಳಿಯು

ತನ್ನ ಉಪವಿಭಾಗದ ಕಚೇರಿಯನ್ನು ೧೯೮೫ ರಲ್ಲಿ ತುಮಕೂರಿನಲ್ಲಿ ಸ್ಥಾಪಿಸಿದ್ದು, ಜಿಲ್ಲೆಯಾದ್ಯಂತ ಇರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೊಳಚೆ ಪ್ರದೇಶಾಭಿವೃದ್ಧಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿ ದೀಪ, ರಸ್ತೆ, ಚರಂಡಿ ವ್ಯವಸ್ಥೆ, ಸೇತುವೆ, ಸುರಂಗಮಾರ್ಗ, ಶೌಚಾಲಯ, ಕಲ್ಲು ಹಾಸಿನ ದಾರಿ, ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮಂಡಳಿಯ ಧ್ಯೇಯವಾಗಿದೆ. ನಗರದ ಹೊರವಲಯಗಳ ಖಾಲಿ ಜಾಗ ಲಭ್ಯವಿರುವ ಕಡೆಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಹುಡ್ಕೋ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕುಗಳಿಂದ ಪಡೆದ ಸಾಲ ಸೌಲಭ್ಯದಿಂದ ಮಂಡಳಿಯು ಸಾಲು ಮನೆಗಳು ಮತ್ತು ಬಹುಮಹಡಿ ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸುತ್ತಿದೆ.

ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಕೊಳಚೆ ನಿರ್ಮೂಲನೆ ಮತ್ತು ಕೊಳಚೆ ನಿವಾಸಿಗಳ ಕಲ್ಯಾಣಕ್ಕಾಗಿ ಅನುದಾನ ನೀಡುತ್ತಿದೆ. ಕೇಂದ್ರ ಪುರಸ್ಕೃತ 'ವಾಲ್ಮೀಕಿ ಅಂಬೇಡ್ಕರ ಆವಾಸ್' ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣದ ಜೊತೆಗೆ ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ಸಾಮೂಹಿಕ ಶೌಚಾಲಯ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಸಂಸತ್ ಹಾಗೂ ಶಾಸಕರ ನಿಧಿಯಿಂದ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಗರ ಪಟ್ಟಣಗಳಲ್ಲಿ ಶೌಚಾಲಯ ನಿರ್ಮಿಸಲಾಗುತ್ತಿದೆ.

ಜಿಲ್ಲೆಯಲ್ಲಿ ನಿರ್ಮಲ ಜ್ಯೋತಿ ಯೋಜನೆಯು ಅನುಷ್ಠಾನಗೊಂಡಿದ್ದು, ಕೊಳಚೆ ಪ್ರದೇಶಗಳು ಮೂಲಭೂತ ಸೌಕರ್ಯ ಅಭಿವೃದ್ಧಿ, ಕೊಳಚೆ ನಿವಾಸಿಗಳಿಗೆ ತರಬೇತಿ ಹಾಗೂ ಕೌಶಲ್ಯ ಹೆಚ್ಚಳ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ಅಗತ್ಯ ಕಂಡು ಬಂದ ಕೊಳಚೆ ನಿವಾಸಿಗಳ ಕಲ್ಯಾಣಕ್ಕಾಗಿ ಶೇ ೭೦ ರಷ್ಟು ರಾಜ್ಯ ಸರ್ಕಾರದ ಅನುದಾನ ಮತ್ತು ಶೇ ೩೦ ರಷ್ಟು ಹುಡ್ಕೋ ಸಾಲದ ನೆರವಿನೊಂದಿಗೆ ಮನೆಗಳನ್ನು ನಿರ್ಮಿಸಿ, ಕೊಳಚೆ ನಿವಾಸಿಗಳಿಗೆ ಹಂಚಲಾಗಿದ್ದು, ಫಲಾನುಭವಿಗಳು ಈ ಸಾಲವನ್ನು ೨೦ ವರ್ಷಗಳ ಅವಧಿಯಲ್ಲಿ ಮಾಸಿಕ ಕಂತಿನ ರೂಪದಲ್ಲಿ ಪಾವತಿ ಮಾಡಬೇಕಾಗಿರುತ್ತದೆ. ೨೦೧೩-೧೪ ರಲ್ಲಿ ೫೪ ಗುರುತಿಸಲಾದ ಕೊಳಚೆ ಪ್ರದೇಶಗಳಿದ್ದು, ೧೮,೦೪೧ ಕುಟುಂಬಗಳು ನೆಲೆಸಿದ್ದವು. ಇಲ್ಲಿಯ ಜನಸಂಖ್ಯೆ ೯೯,೭೮೧ ಆಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೨.೩೫ ನೋಡಿ.

**ಕೋಷ್ಟಕ ೧೨.೩೫ ತುಮಕೂರು ಜಿಲ್ಲೆಯಲ್ಲಿ ಮಾರ್ಚ್, ೨೦೧೪ರ ಅಂತ್ಯದಲ್ಲಿದ್ದಂತೆ ತಾಲೂಕುವಾರು ಕೊಳಚೆ ಪ್ರದೇಶಗಳ ವಿವರ**

| ಕ್ರಮ ಸಂಖ್ಯೆ | ನಗರ/ಪಟ್ಟಣ | ಗುರುತಿಸಲಾದ ಕೊಳಚೆ ಪ್ರದೇಶಗಳು | ಘೋಷಿತ ಕೊಳಚೆ ಪ್ರದೇಶಗಳು | ಕುಟುಂಬಗಳ ಸಂಖ್ಯೆ | ಕೊಳಚೆ ಪ್ರದೇಶದ ಜನಸಂಖ್ಯೆ | ಅಘೋಷಿತ ಕೊಳಚೆ ಪ್ರದೇಶಗಳು |
|---|---|---|---|---|---|---|
| ೧ | ತುಮಕೂರು | ೦೯ | ೨೬ | ೭೭೧೧ | ೪೫೫೧೦ | ೦೯ |
| ೨ | ತಿಪಟೂರು | ೦೩ | ೧೧ | ೧೬೦೬ | ೮೫೯೩ | ೦೩ |
| ೩ | ಮಧುಗಿರಿ | – | ೧೨ | ೧೧೪೭ | ೫೮೨೪ | – |
| ೪ | ಶಿರಾ | ೦೬ | ೧೬ | ೨೫೦೩ | ೧೩೨೭೦ | ೦೬ |
| ೫ | ಪಾವಗಡ | ೧೨ | ೦೪ | ೭೯೫ | ೪೧೩೮ | ೧೨ |
| ೬ | ಕೊರಟಗೆರೆ | – | ೦೫ | ೬೪೦ | ೪೦೩೧ | – |
| ೭ | ಗುಬ್ಬಿ | ೦೯ | ೦೪ | ೪೦೨ | ೨೩೮೮ | ೦೯ |
| ೮ | ಕುಣಿಗಲ್ | ೦೭ | ೦೫ | ೯೮೯ | ೪೬೫೧ | ೦೭ |
| ೯ | ತುರುವೇಕೆರೆ | – | ೦೩ | ೫೮೭ | ೩೧೦೫ | – |
| ೧೦ | ಚಿಕ್ಕನಾಯಕನಹಳ್ಳಿ | ೦೮ | ೦೬ | ೧೬೬೧ | ೮೩೨೧ | ೦೮ |
| **ಒಟ್ಟು** | | **೫೪** | **೯೨** | **೧೮೦೪೧** | **೯೯೭೮೧** | **೫೪** |

ಆಧಾರ: ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ತುಮಕೂರು.

## ತುಮಕೂರು ಮಹಾನಗರ ಪಾಲಿಕೆ

ತುಮಕೂರು ನಗರಸಭೆಯು ಪೌರಸಮಿತಿಯಾಗಿ ೧೮೬೫ರಲ್ಲಿ ಪ್ರಾರಂಭವಾಯಿತು. ನಂತರ ೧೯೧೦ರಲ್ಲಿ ಪುರಸಭೆಯಾಗಿ ಪುನಾರಚನೆಗೊಂಡಿತು. ೧೯೭೫ರಲ್ಲಿ ನಗರಸಭೆಯಾಗಿ, ನಂ.ಯು.ಡಿ.ಡಿ.೧೫೪ ಎಂ.ಎಲ್.ಆರ್.೨೦೧೩, ಬೆಂಗಳೂರು ದಿ:೨೦.೧೨.೨೦೧೩ ರಲ್ಲಿ ತುಮಕೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡಿತು. ತುಮಕೂರು ಮಹಾನಗರ ಪಾಲಿಕೆಯಾದ ನಂತರ ಚುನಾವಣೆಗಳು ನಡೆದಿರುವುದಿಲ್ಲ. ೧೯೬೧ರ ಜನಗಣತಿಯಂತೆ ತುಮಕೂರು ನಗರದ ಜನಸಂಖ್ಯೆ ೪೭,೨೭೭ ಆಗಿದ್ದು, ಅದರ ವಿಸ್ತೀರ್ಣವು ೧೩.೨೬ ಚ.ಕಿ.ಮೀ.ಹೊಂದಿದ್ದು, ೮೨೮೬ ವಾಸದ ಮನೆಗಳನ್ನು ಹೊಂದಿತ್ತು.

೨೦೧೧ರ ಜನಗಣತಿಯಂತೆ ತುಮಕೂರು ನಗರದ ಜನಸಂಖ್ಯೆಯು ೩,೦೨,೧೪೩ ಆಗಿದ್ದು, ೪೮.೬ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಅದನ್ನು ೩೫ ವಾರ್ಡ್‌ಗಳಾಗಿ ವಿಭಜಿಸಲಾಗಿದೆ. ನಗರದ ಒಟ್ಟು ಆಸ್ತಿಗಳ ಸಂಖ್ಯೆ ೮೨,೭೮೭ ಆಗಿದೆ. ನಗರಸಭೆ ವ್ಯಾಪ್ತಿಯಲ್ಲಿ ೩೫ ಕಂದಾಯ ವಾರ್ಡ್‌ಗಳಿದ್ದು, ೩೯,೭೮೬ ಮಂದಿ ತೆರಿಗೆ ಸಂದಾಯ ಮಾಡುವವರಿದ್ದಾರೆ. ೨೦೧೩ರಲ್ಲಿ ನಗರಸಭೆಗೆ ಚುನಾವಣೆ ನಡೆದು ಒಟ್ಟು ೩೫ ಜನ ಸದಸ್ಯರು ಆಯ್ಕೆಗೊಂಡರು. ಆಯ್ಕೆಗೊಂಡ ಸದಸ್ಯರ ಸ್ಥಾನಗಳ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೩೬ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೩೬ ಸದಸ್ಯರುಗಳ ಮೀಸಲು ಹಂಚಿಕೆ ವಿವರ.**

| ಸ್ಥಾನ ವರ್ಗ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ | ೦೯ | ೦೯ | ೧೮ |
| ಹಿಂದುಳಿದ ವರ್ಗ 'ಅ' | ೦೫ | ೦೫ | ೧೦ |
| ಹಿಂದುಳಿದ ವರ್ಗ 'ಬ' | ೦೧ | ೦೧ | ೦೨ |
| ಪರಿಶಿಷ್ಟ ಜಾತಿ | ೦೨ | ೦೨ | ೦೪ |
| ಪರಿಶಿಷ್ಟ ಪಂಗಡ | ೦ | ೦೧ | ೦೧ |
| **ಒಟ್ಟು** | **೧೭** | **೧೮** | **೩೫** |

### ನೀರು ಸರಬರಾಜು

ಪ್ರಾರಂಭದಲ್ಲಿ ನಗರ ವ್ಯಾಪ್ತಿಯಲ್ಲಿ ಸಿಹಿನೀರು ಬಾವಿಗಳು ಮತ್ತು ಮೈದಾಳ ಕೆರೆ ಕುಡಿಯುವ ನೀರಿನ ಮುಖ್ಯ ಜಲಮೂಲಗಳಾಗಿದ್ದವು. ೧೯೬೭ರಲ್ಲಿ ೪೦೨೦ ಗೃಹ ಮತ್ತು ೪೬೦ ಬೀದಿ ಕೊಳಾಯಿಗಳ ಮೂಲಕ ನೀರು ಪೂರೈಕೆ ಸೌಲಭ್ಯ ಒದಗಿಸಲಾಗಿತ್ತು. ೧೯೭೫ರಲ್ಲಿ ತುಮಕೂರು ನಗರಸಭೆಯಾಗಿ ಪರಿವರ್ತನೆಗೊಂಡ ನಂತರ ೨೦೦೯ರವರೆಗೆ ನಗರವ್ಯಾಪ್ತಿಯೊಳಗೆ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರು ಸರಬರಾಜು ವ್ಯವಸ್ಥೆಯು ಹೀಗಿತ್ತು. ೧. ಬುಡುಗನಹಳ್ಳಿ ೧೪.೦೦ ಎಂ.ಎಲ್.ಡಿ., ೨. ಮೈದಾಳದಿಂದ ೦.೯೦ ಎಂ.ಎಲ್.ಡಿ., ೩. ಕೊಳವೆಬಾವಿಗಳಿಂದ ೮.೩೨ ಎಂ.ಎಲ್.ಡಿ. ಒಟ್ಟು ೨೩.೨೨ ಎಂ.ಎಲ್.ಡಿ. ಮೂಲಕ ನೀರು ಸರಬರಾಜಾಗುತ್ತಿತ್ತು.

೨೦೧೧-೧೨ನೇ ಸಾಲಿನಲ್ಲಿ ೪೪೯ ಕೊಳವೆಬಾವಿಗಳು, ೯೪ ಕೈ ಪಂಪುಗಳು, ೧೧ ಪಂಪ್‌ಹೌಸ್‌ಗಳು, ೩೩ ಮೇಲ್ಮಟ್ಟದ ಶೇಖರಣಾ ತೊಟ್ಟಿಗಳಿದ್ದವು, ತುಮಕೂರು ನಗರದಲ್ಲಿ ಒಟ್ಟು ೩೪,೦೩೪ ನಲ್ಲಿ ಸಂಪರ್ಕಗಳಿದ್ದವು. ಇವುಗಳಲ್ಲಿ ೩೩,೮೩೧ ಗೃಹಬಳಕೆ ಹಾಗೂ ೨೦೩ ವಾಣಿಜ್ಯ ಸಂಪರ್ಕಗಳಾಗಿದ್ದವು. ಹೇಮಾವತಿ ನದಿ ನಾಲೆಯಿಂದ ಬುಗುಡನಹಳ್ಳಿಗೆ ಪೂರೈಕೆಯಾಗುವ ನೀರಿನ ಪ್ರಮಾಣ ೧೫.೦೦ ಎಂ.ಎಲ್.ಡಿ. ಆಗಿದ್ದು, ಪ್ರತಿದಿನ ೬೫.೯೭ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೮೫ ಲೀಟರ್ ಆಗಿದೆ.

### ವಿದ್ಯುಚ್ಛಕ್ತಿ

ನಗರದ ವ್ಯಾಪ್ತಿಯಲ್ಲಿ ಒಟ್ಟು ೧೬,೭೭೨ ಬೀದಿ ದೀಪಗಳಲ್ಲಿ, ೧೩,೦೫೮ ಟ್ಯೂಬ್‌ಲೈಟ್‌ಗಳು, ೩,೬೬೪ ಸೋಡಿಯಂ ವೇಪರ್ ಲೈಟ್‌ಗಳು ಮತ್ತು ೫೦ ಹೈಮಾಸ್ಟ್ ದೀಪಗಳು ಸೇರಿವೆ. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ವಿದ್ಯುತ್ ಪೂರೈಕೆಯ ಹೊಣೆಹೊತ್ತಿದೆ. ೨೦೧೧-೧೨ರಲ್ಲಿ ವಿದ್ಯುತ್ ಬಳಕೆಗಾಗಿ ರೂ. ೧೦.೮೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರದಲ್ಲಿನ ಒಳಚರಂಡಿ ವ್ಯವಸ್ಥೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸುತ್ತಿದೆ. ಮ್ಯಾನ್‌ಹೋಲ್‌ಗಳ ನಿರ್ಮಾಣ ಹಾಗೂ ದುರಸ್ತಿ, ಸಂಸ್ಕರಣ ಘಟಕ (ಟ್ರೀಟ್‌ಮೆಂಟ್ ಪ್ಲಾಂಟ್) ನಿರ್ಮಾಣ ಹಾಗೂ ಅವುಗಳ ನಿರ್ವಹಣೆಯನ್ನು ಮಂಡಳಿಯೇ ನೋಡಿಕೊಳ್ಳುತ್ತಿದೆ. ನಗರದ ವ್ಯಾಪ್ತಿಯೊಳಗಿನ ಸುಮಾರು ೬೬೬.೦ ಕಿ.ಮೀ. ರಸ್ತೆಗಳನ್ನು ೪೪೧ ಪೌರಕಾರ್ಮಿಕರು ಕಸಗುಡಿಸುವ ನೈರ್ಮಲ್ಯ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿದಿವಸ ಒಂಬತ್ತು ಟ್ರಾಕ್ಟರ್ ಹಾಗೂ ಆರು ಟ್ರಕ್‌ಗಳ ಮೂಲಕ ೮೦ ಟನ್‌ಗಳಷ್ಟು ಕಸ ಹಾಗೂ ತ್ಯಾಜ್ಯವಸ್ತುಗಳನ್ನು ನಗರದ ಹೊರ ವಲಯಕ್ಕೆ ಸಾಗಿಸುವ ವ್ಯವಸ್ಥೆ ಇದೆ.

ಮಲೇರಿಯಾ, ಕಾಲರಾದಂತಹ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ನಗರಸಭೆಯು ಆರೋಗ್ಯ ಸಿಬ್ಬಂದಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ಸಲಹೆ ಸೂಚನೆಗಳನ್ನು ಕಾರ್ಯಗತಗೊಳಿಸುತ್ತದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಮಲೇರಿಯಾ ನಿರೋಧಕ ದಳ, ಆರೋಗ್ಯ ನಿರೀಕ್ಷಕರು ಹಾಗೂ ಇನ್ನಿತರ ಸಿಬ್ಬಂದಿ ಸೇರಿದಂತೆ ಒಟ್ಟು ೧೧ ಜನ ಜನಾರೋಗ್ಯ ಸೇವೆಯಲ್ಲಿ ನಿರತರಾಗಿದ್ದಾರೆ. ಜನನ ಮರಣ ದಾಖಲೆಗಳನ್ನು ಸಹಾ ನಗರಸಭೆ ನಿರ್ವಹಿಸುತ್ತದೆ. ೨೦೧೨-೧೩ನೇ ಸಾಲಿನಲ್ಲಿ ಜನಾರೋಗ್ಯ ಮತ್ತು ನೈರ್ಮಲ್ಯಕ್ಕಾಗಿ ರೂ. ೩೨೦.೧೮ ಲಕ್ಷ ವೆಚ್ಚ ಮಾಡಿದೆ.

## ಇತರ ಸೌಲಭ್ಯಗಳು

ಸಾರ್ವಜನಿಕ ಸೌಕರ್ಯಕ್ಕಾಗಿ ನಗರಸಭೆ ತನ್ನ ವ್ಯಾಪ್ತಿಯಲ್ಲಿ ಉದ್ಯಾನವನಗಳು, ಸಾರ್ವಜನಿಕ ಗ್ರಂಥಾಲಯ, ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳು, ಆಯುರ್ವೇದಿಕ್ ಆಸ್ಪತ್ರೆಗಳು, ಕುಟುಂಬ ಕಲ್ಯಾಣ ಕೇಂದ್ರಗಳು, ಮಹಿಳೆ ಮತ್ತು ಮಕ್ಕಳ ಆರೋಗ್ಯ ಕೇಂದ್ರ, ಶಿಶು ವಿಹಾರಗಳು, ಅಂಗನವಾಡಿ ಕೇಂದ್ರಗಳು, ಮುಂತಾದವುಗಳನ್ನು ಸಹಾ ನಗರಸಭೆ ನಿರ್ವಹಿಸುತ್ತಿದೆ. ನಗರ ವ್ಯಾಪ್ತಿ ಹಾಗೂ ಹೊರ ವಲಯಗಳಲ್ಲಿ ೨೨ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಸುಮಾರು ೫೦,೯೯೨ ಜನರು ವಾಸಿಸುತ್ತಿದ್ದಾರೆ. ಇವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸುವುದರ ಜೊತೆಗೆ ನೀರು ಸರಬರಾಜು, ರಸ್ತೆ, ಚರಂಡಿ ವ್ಯವಸ್ಥೆ ಮತ್ತು ದೀಪಗಳ ನಿರ್ವಹಣೆಯನ್ನು ನಗರಸಭೆ ನೋಡಿಕೊಳ್ಳುತ್ತಿದೆ. ತುಮಕೂರು ನಗರಸಭೆಗೆ ವಿವಿಧ ಮೂಲಗಳಿಂದ ಬಂದ ಆದಾಯ ೨೦೦೯-೧೦ ರಲ್ಲಿ ರೂ. ೭೬೯೨.೮೨ ಲಕ್ಷಗಳಾಗಿದ್ದರೆ, ೨೦೧೨-೧೩ ರಲ್ಲಿ ರೂ. ೯,೩೫೯.೭೩ ಲಕ್ಷಗಳಾಗಿತ್ತು. ಇದೇ ಅವಧಿಯಲ್ಲಿ ಆದ ವೆಚ್ಚ ಕ್ರಮವಾಗಿ ರೂ. ೪,೪೫೪.೮೪ ಲಕ್ಷಗಳಾಗಿದ್ದರೆ, ರೂ. ೬,೧೦೩ ಲಕ್ಷಗಳಾಗಿತ್ತು. ವಿವರಗಳಿಗೆ ಕೋಷ್ಟಕ ೧೨.೩೭ ಅನ್ನು ನೋಡಿ.

**ಕೋಷ್ಟಕ ೧೨.೩೭ ನಗರಸಭೆಯ ಆದಾಯ ಮತ್ತು ವೆಚ್ಚದ ವಿವರ.**

(ರೂ. ಲಕ್ಷಗಳಲ್ಲಿ)

| | ೨೦೦೯-೧೦ | ೨೦೦೧೦-೧೧ | ೨೦೧೧-೧೨ | ೨೦೧೨-೧೩ |
|---|---|---|---|---|
| ಆರಂಭಿಕ ಶಿಲ್ಕು | ೨೩೫೨.೯೮ | ೩೨೩೭.೯೯ | ೪೦೧೭.೫೨ | ೩೪೦೪.೯೪ |
| ಆದಾಯ | ೫೩೩೯.೮೪ | ೫೬೫೫.೧೮ | ೪೩೯೬.೪೮ | ೫೯೫೪.೭೯ |
| **ಒಟ್ಟು** | **೭೬೯೨.೮೨** | **೮೮೯೩.೧೭** | **೮೪೧೪.೦೦** | **೯೩೫೯.೭೩** |
| ಖರ್ಚು | ೪೪೫೪.೮೪ | ೮೪೭೫.೬೫ | ೫೦೦೯.೦೬ | ೬೧೦೩.೦೦ |
| ಅಖೈರು ಶಿಲ್ಕು | ೩೨೩೭.೯೯ | ೪೦೧೭.೫೨ | ೩೪೦೪.೯೪ | ೩೨೫೬.೭೨ |

## ತಿಪಟೂರು ನಗರಸಭೆ

ತಿಪಟೂರು ನಗರಸಭೆಯು ೧೯೨೧ರಲ್ಲಿ ಪುರಸಭೆಯಾಗಿ ಸ್ಥಾಪನೆಗೊಂಡಿತು. ಇದು ಆಗ ೨೦ ಸದಸ್ಯರನ್ನೊಳಗೊಂಡಿದ್ದು, ಅವರಲ್ಲಿ ಮೂವರು ತಾಲೂಕಿನ ಅಮಲ್ದಾರರು, ಸ್ಥಳೀಯ ಸಹಾಯಕ ವೈದ್ಯಾಧಿಕಾರಿ ಮತ್ತು ಲೋಕೋಪಯೋಗಿ ಇಲಾಖೆಯ ಮೇಲ್ವಿಚಾರಕ ಪದನಿಮಿತ್ತ ಸದಸ್ಯರಾಗಿ ನೇಮಕಗೊಂಡಿದ್ದರು. ನಾಲ್ಕು ಸದಸ್ಯರು ಸರ್ಕಾರದಿಂದ ನೇಮಕಗೊಂಡಿದ್ದರು. ಉಳಿದ ೧೩ ಜನ ಸದಸ್ಯರು ಪುರಸಭಾ ವ್ಯಾಪ್ತಿಗೊಳಪಟ್ಟ ತೆರಿಗೆದಾರರಿಂದ ಚುನಾಯಿಸಲ್ಪಟ್ಟ ಸದಸ್ಯರಾಗಿದ್ದರು. ಪುರಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಸದಸ್ಯರು ಬಹುಮತದಿಂದ ಆಯ್ಕೆ ಮಾಡುತ್ತಿದ್ದರು. ಈ ಪದ್ಧತಿಯು ಪುರಸಭಾ ಕಾಯಿದೆ ೧೯೩೧ರವರೆಗೂ ಜಾರಿಯಲ್ಲಿದ್ದಿತು. ೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ಪುರಸಭೆ ಪುನಾರಚನೆಗೊಂಡಿತು. ವಯಸ್ಕರ ಮತದಾನ ಪದ್ಧತಿಯಲ್ಲಿ ೨೦ ಸದಸ್ಯರು ೨೦ ವಾರ್ಡ್‌ಗಳಿಂದ ಚುನಾಯಿತಗೊಂಡರು. ಇವರಲ್ಲಿ ಪರಿಶಿಷ್ಟ ಜಾತಿ ಮೀಸಲು ಸ್ಥಾನದಿಂದ ಒಬ್ಬರು ಚುನಾಯಿತಗೊಂಡರು. ನಂತರ ೧೯೬೦-೬೧ರಲ್ಲಿ ತಿಪಟೂರು ಪಟ್ಟಣ ನಾಲ್ಕು ವಿಭಾಗಗಳಾಗಿ ವಿಂಗಡನೆಗೊಂಡಿದ್ದು, ಪ್ರತಿಯೊಂದು ವಿಭಾಗದಿಂದ ಐದು ಸದಸ್ಯರಂತೆ ಒಟ್ಟು ೨೦ ಸದಸ್ಯರು ಚುನಾಯಿತರಾಗಿದ್ದರು. ಅವರಲ್ಲಿ ಪರಿಶಿಷ್ಟ ಜಾತಿಯಿಂದ ಒಬ್ಬ ಸದಸ್ಯ ಚುನಾಯಿತಗೊಂಡಿದ್ದರು.

೧೯೬೧ರ ಜನಗಣತಿ ಪ್ರಕಾರ ತಿಪಟೂರು ಪಟ್ಟಣದ ಜನಸಂಖ್ಯೆ ೧೫,೫೫೪ ಆಗಿದ್ದು, ಅದರ ವ್ಯಾಪ್ತಿ ೨.೮೨ ಚ.ಕಿ.ಮೀ.ಗಳಷ್ಟಿದ್ದು, ೧೭೮೦ ವಾಸದ ಮನೆಗಳನ್ನು ಹೊಂದಿತ್ತು. ೧೯೬೬-೬೭ರಲ್ಲಿ ಪುರಸಭೆಗೆ ರೂ. ೩,೦೪,೬೪೮ ಆದಾಯ ತೆರಿಗೆಯಿಂದ ಸಂಗ್ರಹವಾಗಿತ್ತು. ತಿಪಟೂರು ನಗರದ ಮಧ್ಯಭಾಗದಲ್ಲಿ ಶ್ರೀಕೃಷ್ಣರಾಜೇಂದ್ರ ಬಡಾವಣೆ ಮತ್ತು ಗಾಂಧೀನಗರ ಬಡಾವಣೆಗಳನ್ನು ನೂತನವಾಗಿ ಉತ್ತಮವಾದ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಯಿತು. ಈ ಬಡಾವಣೆಗಳಲ್ಲಿ ವಾಸದ ಮನೆ ಇಲ್ಲದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದೆ. ಅವರೆಲ್ಲರೂ ಆಧುನಿಕ ರೀತಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಉತ್ತಮವಾದ ರಸ್ತೆ, ಬೀದಿ ದೀಪ, ಚರಂಡಿ ವ್ಯವಸ್ಥೆ, ನೀರು ಸರಬರಾಜು, ಶಾಲಾ ಕಾಲೇಜು, ಆಸ್ಪತ್ರೆಗಳು, ಗ್ರಂಥಾಲಯ, ಉದ್ಯಾನಗಳನ್ನು ನಿರ್ಮಿಸಲಾಗಿದೆ.

೨೦೦೧ರ ಜನಗಣತಿ ಪ್ರಕಾರ ತಿಪಟೂರು ನಗರಸಭೆಯ ಜನಸಂಖ್ಯೆ ೫೩,೧೦೪ ಆಗಿದ್ದು, ೧೧,೫೬೨ ಕುಟುಂಬಗಳನ್ನು ಹೊಂದಿದೆ. ನಗರ ವ್ಯಾಪ್ತಿಯು ೧೧.೨೭ ಚ.ಕಿ.ಮೀ. ಆಗಿದೆ. ೨೦೧೧ರ ಜನಗಣತಿ ಪ್ರಕಾರ ತಿಪಟೂರು ನಗರಸಭೆಯ ಜನಸಂಖ್ಯೆ ೫೯,೫೪೩ ಆಗಿದ್ದು, ೧೪,೪೫೧ ಕುಟುಂಬಗಳನ್ನು ಹೊಂದಿದೆ. ನಗರ ವ್ಯಾಪ್ತಿಯು ೧೧.೨೭ ಚ.ಕಿ.ಮೀ ಆಗಿದೆ. ೧೯೯೫ರ ಸರ್ಕಾರಿ ಅಧಿಸೂಚನೆಯ ಪ್ರಕಾರ ನಗರಸಭೆ ಪ್ರದೇಶವನ್ನು ೩೧ ವಾರ್ಡ್‌ಗಳಾಗಿ ವಿಭಜಿಸಲಾಗಿದೆ. ೦೭.೦೩.೨೦೧೩ ರಲ್ಲಿ ನಗರಸಭೆ ಚುನಾವಣೆ ನಡೆದು ಒಟ್ಟು ೩೧ ಜನಸದಸ್ಯರು ಆಯ್ಕೆಗೊಂಡರು. ಆಯ್ಕೆಯಾದ ಸದಸ್ಯರ ಸ್ಥಾನಗಳ ಮೀಸಲು ಹಂಚಿಕೆ ವಿವರವನ್ನು ಕೋಷ್ಟಕ ೧೨.೩೮ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೩೮ ಸದಸ್ಯರ ಮೀಸಲು ಹಂಚಿಕೆಯ ವಿವರ.**

| ಸ್ಥಾನ ವರ್ಗ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ | ೦೯ | ೦೮ | ೧೭ |
| ಪರಿಶಿಷ್ಟ ಜಾತಿ | ೦೨ | ೦೧ | ೦೩ |
| ಪರಿಶಿಷ್ಟ ಪಂಗಡ | ೦೦ | ೦೧ | ೦೧ |
| ಹಿಂದುಳಿದ ವರ್ಗ 'ಎ' | ೦೪ | ೦೪ | ೦೮ |
| ಹಿಂದುಳಿದ ವರ್ಗ 'ಬಿ' | ೦೧ | ೦೧ | ೦೨ |
| ಒಟ್ಟು | ೧೬ | ೧೫ | ೩೧ |

### ನೀರು ಸರಬರಾಜು

ತಿಪಟೂರು ನಗರ ನಿವಾಸಿಗಳಿಗೆ ಪ್ರಾರಂಭದಲ್ಲಿ ಶುದ್ಧವಾದ ಕುಡಿಯುವ ನೀರು ಪೂರೈಕೆಗೆ ಸಿಹಿ ನೀರಿನ ಬಾವಿಗಳು ಮತ್ತು ಕೊಳವೆ ಬಾವಿಗಳು ಮುಖ್ಯ ಜಲಮೂಲವಾಗಿದ್ದವು. ನಗರಸಭೆಯು ೨೦೧೨ರಲ್ಲಿ ೬೫ ಪಂಪಿಂಗ್ ಸ್ಟೇಷನ್ ಮತ್ತು ಐದು ನೀರು ಸಂಗ್ರಾಹಕಗಳನ್ನು ನಿರ್ಮಿಸಿದೆ. ಇವು ಒಟ್ಟು ೫೦ ಲಕ್ಷ ಗ್ಯಾಲನ್ ನೀರು ಕ್ಷಮತೆಯನ್ನು

ಹೊಂದಿವೆ. ೧೮ ಕೊಳವೆ ಬಾವಿಗಳಿಗೆ ಕೈಕಂಪು ಮತ್ತು ೧೦೮ ಕ್ಕೆ ವಿದ್ಯುತ್ ಮೋಟಾರನ್ನು ಅಳವಡಿಸಲಾಗಿದೆ. ೨೦೧೨ ರಲ್ಲಿ ರೂ. ೭೮೨.೧೫ ಲಕ್ಷ ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್ ಅನ್ನು ಕರ್ನಾಟಕ ನೀರು ಸರಬರಾಜು ಮಂಡಳಿ ವತಿಯಿಂದ ನಿರ್ಮಾಣಗೊಂಡಿದೆ. ೨೦೧೨ ರಲ್ಲಿದಂತೆ ನಗರದಲ್ಲಿ ೧೦೨ ಸಾರ್ವಜನಿಕ ನಲ್ಲಿ ಹಾಗೂ ೬೫೮೩ ಗೃಹೋಪಯೋಗಿ ನಲ್ಲಿಗಳಿದ್ದವು. ಪ್ರತಿದಿನ ೫.೨ ಎಂ.ಎಲ್.ಡಿ ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದೆ. ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೯೮ ಲೀಟರ್ ಆಗಿದೆ. ೨೦೧೨ರಲ್ಲಿ ನೀರು ಸರಬರಾಜು ವೆಚ್ಚ ರೂ. ೧೨೦.೦೦ ಲಕ್ಷಗಳು ಹಾಗೂ ನೀರಿನ ತೆರಿಗೆ ಆದಾಯ ರೂ. ೬೧.೪೯ ಲಕ್ಷ ಆಗಿತ್ತು. ೨೦೧೧-೧೨ ರಲ್ಲಿ ನೀರು ಸರಬರಾಜು ಯೋಜನೆಗೆ ಆದ ಒಟ್ಟು ವೆಚ್ಚ ರೂ. ೧೩೨.೩೩ ಲಕ್ಷಗಳಷ್ಟಾಗಿತ್ತು. ತಿಪಟೂರು ನಗರಸಭೆಯು ಗಳಿಸಿದ ಆದಾಯ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೩೯ ರಲ್ಲಿ ನೀಡಿದೆ.

**ಕೋಷ್ಟಕ ೧೨.೩೯ ತಿಪಟೂರು ನಗರಸಭೆಯ ಆದಾಯ ಹಾಗೂ ವೆಚ್ಚದ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೦೮-೨೦೦೯ | ೯,೧೩,೬೩,೧೮೨ | ೨,೦೬,೯೮,೧೦೦ |
| ೨೦೦೯-೨೦೧೦ | ೧೨,೩೦,೦೮,೬೦೭ | ೧೨,೪೦,೧೮,೧೪೪ |
| ೨೦೧೦-೨೦೧೧ | ೧೨,೭೬,೩೫,೫೦೨ | ೧೩,೩೧,೦೨,೧೨೬ |
| ೨೦೧೧-೨೦೧೨ | ೧೨,೪೩,೩೭,೭೪೨ | ೧೦,೧೭,೯೧,೨೮೭ |

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರ ಸಭೆಯ ಆರೋಗ್ಯ ವಿಭಾಗ ಪಟ್ಟಣ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗ ನಿವಾರಣೆಗೆ ಮುನ್ನೆಚ್ಚರಿಕೆ ಕ್ರಮವಾಗಿ ರೋಗನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.ಆರೋಗ್ಯ ನಿರೀಕ್ಷಕರು ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನಗರ ನೈರ್ಮಲ್ಯ ಕಾಪಾಡಲು ೫೪ ಜನ ಪೌರಕಾರ್ಮಿಕರನ್ನು ೫೦ ಜನ ಹೊರಗುತ್ತಿಗೆ ಪೌರಕಾರ್ಮಿಕರನ್ನು ನಗರಸಭೆ ನೇಮಿಸಿಕೊಂಡಿದೆ. ನಗರಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ನಗರಸಭೆ ವತಿಯಿಂದ ಮಳೆ ನೀರು ಹರಿಯುವ ಹೊರ ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

## ವಿದ್ಯುಚ್ಛಕ್ತಿ ಮತ್ತು ರಸ್ತೆ

ತಿಪಟೂರು ನಗರಕ್ಕೆ ೧೯೪೧ರಲ್ಲಿ ವಿದ್ಯುತ್ ಸಂಪರ್ಕ ದೊರಕಿದೆ. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ೨೦೦೮ರಲ್ಲಿದ್ದಂತೆ ನಗರ ವ್ಯಾಪ್ತಿಯೊಳಗೆ ಅಳವಡಿಸಲಾದ ಬೀದಿ ದೀಪಗಳ ಸಂಖ್ಯೆ ೪೫೧೩ ಆಗಿದೆ. ಇವುಗಳಲ್ಲಿ ೩,೦೦೦ ಟ್ಯೂಬ್‌ಲೈಟ್‌ಗಳು, ೬೦೦ ಸೋಡಿಯಂ ವೇಪರ್ ಲೈಟ್‌ಗಳು ಮತ್ತು ೦೭ ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ. ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದೆ. ೨೦೧೧-೧೨ರಲ್ಲಿ ವಿದ್ಯುತ್ ಬಳಕೆಗಾಗಿ ರೂ.೧೫೨.೩೯ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ನಗರದ ವ್ಯಾಪ್ತಿಯಲ್ಲಿ ಒಟ್ಟು ೧೩೩.೮೫ ಕಿ.ಮೀ ರಸ್ತೆಗಳಿದ್ದು, ಅದರಲ್ಲಿ ಟಾರ್ ಮತ್ತು ಮೆಟಲ್ ರಸ್ತೆ ಉದ್ದ ಕ್ರಮವಾಗಿ ೮೬.೬೩ ಕಿ.ಮೀ. ಮತ್ತು ೧೩ ಕಿ.ಮೀ ಇತ್ತು.

### ಇತರ ಸೌಲಭ್ಯಗಳು

ಸಾರ್ವಜನಿಕ ಸೌಕರ್ಯಕ್ಕಾಗಿ ಉದ್ಯಾನಗಳು, ಗ್ರಂಥಾಲಯ, ಹೊರಾಂಗಣ ಕ್ರೀಡಾ ಮೈದಾನ, ಸಾರ್ವಜನಿಕ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು, ಕುಟುಂಬ ಕಲ್ಯಾಣ ಕೇಂದ್ರಗಳು, ಮಹಿಳೆ ಮತ್ತು ಮಕ್ಕಳ ಆರೋಗ್ಯ ಕೇಂದ್ರ, ಮುಂತಾದವುಗಳನ್ನು ಸಹ ನಗರಸಭೆ ನಿರ್ವಹಿಸುತ್ತಿದೆ. ನಗರ ವ್ಯಾಪ್ತಿ ಹಾಗೂ ಹೊರ ವಲಯಗಳಲ್ಲಿ ೧೧ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಸುಮಾರು ೧೨,೯೬೦ ಜನರು ವಾಸಿಸುತ್ತಿದ್ದಾರೆ. ಈ ನಿವಾಸಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸುವುದರ ಜೊತೆಗೆ ಮೂಲ ಸೌಲಭ್ಯಗಳನ್ನು ಒದಗಿಸಿದೆ. ತಿಪಟೂರು ನಗರಸಭೆಯು ವಿವಿಧ ಬಾಬ್ತುಗಳಿಗಾಗಿ ಮಾಡಿದ ವೆಚ್ಚದ ವಿ ವರಗಳನ್ನು ಕೋಷ್ಟಕ ೧೨.೪೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೪೦ ತಿಪಟೂರು ನಗರಸಭೆಯು ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ**

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ೨೦೦೮-೦೯ | ೨೦೦೯-೧೦ | ೨೦೧೦-೧೧ | ೨೦೧೧-೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೨೨,೪೮,೮೨೦ | ೩೫,೩೫,೩೧೨ | ೩೯,೯೩,೦೬೪ | ೩೦,೫೩,೭೩೯ |
| ೨ | ಸಾರ್ವಜನಿಕ ಕಾಮಗಾರಿ | ೧,೨೭,೧೭,೧೧೭ | ೩,೬೧,೦೨,೬೪೩ | ೧,೬೬,೩೭,೭೬೬ | ೧,೨೭,೨೩,೯೧೧ |
| ೩ | ನೀರು ಸರಬರಾಜು | ೨೮,೧೯,೯೯೦ | ೬೫,೮೫,೨೩೬ | ೧,೭೩,೦೩,೨೭೬ | ೧,೩೨,೩೨,೮೬೭ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | ೨,೯೩,೦೬,೭೮೩ | ೩,೦೯,೬೭,೦೨೫ | ೨,೧೨,೯೬,೩೪೦ | ೧,೬೨,೮೨,೬೦೬ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೧,೭೫,೯೬,೩೩೯ | ೨,೪೫,೮೫,೮೬೩ | ೪,೬೫,೮೫,೭೪೪ | ೨,೭೪,೮೩,೬೪೭ |
| ೬ | ಇತರೆ | ೩೦,೨೯,೬೪೩ | ೬೬,೮೯,೭೭೫ | ೫೫,೯೧,೬೮೮ | ೩೩,೮೬,೫೧೭ |

## ಶಿರಾ ನಗರಸಭೆ

ಶಿರಾ ನಗರಸಭೆಯು ೧೯೦೬ರಲ್ಲಿ ಪುರಸಭೆಯಾಗಿ ಸ್ಥಾಪನೆಗೊಂಡಿತ್ತು. ಮೈಸೂರು ಪುರಸಭೆ ಕಾಯಿದೆ ೧೯೫೧ರಂತೆ ಪುರಸಭೆಯಾಗಿ ಪುನಾರಚನೆಗೊಂಡಿತು. ಮಾರ್ಚಿ ೧೯೬೫ರಲ್ಲಿ ೨೦ ಜನ ಸದಸ್ಯರು ವಯಸ್ಕರ ಮತದಾನ ಪದ್ಧತಿಯಲ್ಲಿ ಚುನಾಯಿತರಾದರು. ೨೦೦೧ರ ಜನಗಣತಿಯಂತೆ ಜನಸಂಖ್ಯೆ ೫೦,೦೮೮ ಆಗಿದ್ದು, ೧೨.೯೮ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ೯,೯೩೯ ಕುಟುಂಬಗಳನ್ನು ಹೊಂದಿತ್ತು. ೨೦೧೧ ರ ಜನಗಣತಿಯಂತೆ ಜನಸಂಖ್ಯೆ ೫೭,೫೫೪ ಆಗಿತ್ತು. ನಗರಸಭೆಯು ೧೨.೯೮ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ೧೨,೬೧೬ ಕುಟುಂಬಗಳನ್ನು ಹೊಂದಿತ್ತು. ೧೯೯೫ ರ ಸರ್ಕಾರಿ ಅಧಿಸೂಚನೆಯ ಪ್ರಕಾರ ನಗರಸಭೆ ಪ್ರದೇಶವನ್ನು ೩೧ ವಾರ್ಡ್‌ಗಳಾಗಿ ವಿಭಜಿಸಲಾಗಿದೆ. ೨೦೧೩ ರಲ್ಲಿ ನಗರಸಭೆ ಚುನಾವಣೆ ನಡೆದು ಒಟ್ಟು ೩೧ ಜನ ಸದಸ್ಯರು ಆಯ್ಕೆಗೊಂಡರು. ಆಯ್ಕೆಯಾದ ಸದಸ್ಯರ ಸ್ಥಾನಗಳ ಮೀಸಲು ಹಂಚಿಕೆಯ ವಿವರವನ್ನು ಕೋಷ್ಟಕ ೧೨.೪೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೪೧ ಸದಸ್ಯರ ಮೀಸಲು ಹಂಚಿಕೆಯ ವಿವಿರ.**

| ಸ್ಥಾನ ವರ್ಗ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ | ೦೮ | ೦೮ | ೧೬ |
| ಪರಿಶಿಷ್ಟ ಜಾತಿ | ೦೩ | ೦೨ | ೦೫ |
| ಪರಿಶಿಷ್ಟ ಪಂಗಡ | ೦೦ | ೦೧ | ೦೧ |
| ಹಿಂದುಳಿದ ವರ್ಗ 'ಅ' | ೦೪ | ೦೩ | ೦೭ |
| ಹಿಂದುಳಿದ ವರ್ಗ 'ಬ' | ೦೧ | ೦೧ | ೦೨ |
| **ಒಟ್ಟು** | ೧೬ | ೧೫ | ೩೧ |

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರ ಸಭೆಯ ಆರೋಗ್ಯ ವಿಭಾಗ ಪಟ್ಟಣ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗ ನಿವಾರಣೆಗೆ ಮುನ್ನೆಚ್ಚರಿಕೆ ಕ್ರಮವಾಗಿ ರೋಗನಿರೋಧಕ ಲಸಿಕೆ ನೀಡಿಕೆ, ಹೋಟೆಲ್‌ಗಳಲ್ಲಿ ಸ್ವಚ್ಛತೆ, ಶುದ್ಧ ಕುಡಿಯುವ ನೀರು ಪೂರೈಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ನಿರೀಕ್ಷಕರು, ಜನನ ಮರಣ ನೋಂದಣಿ ದಾಖಲೆ ನಿರ್ವಹಿಸುತ್ತಾರೆ. ನಗರ ನೈರ್ಮಲ್ಯ ಕಾಪಾಡಲು ೩೦ ಜನ ಪೌರ ಕಾರ್ಮಿಕರನ್ನು ನಗರಸಭೆ ನೇಮಿಸಿಕೊಂಡಿದೆ. ಸರ್ಕಾರದಿಂದ ರೂ. ೪೪.೦೯ ಕೋಟಿ ಅನುದಾನದಲ್ಲಿ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿತ್ತು. ಶೌಚಾಲಯಗಳಿಗೆ ಗುಂಡಿಗಳನ್ನು ತೋಡಿ ಮಲಹಿಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪ್ರತಿ ಮನೆಗೆ ಹಿಂಗು ಗುಂಡಿಗಳ ಸಹಿತ ಶೌಚಾಲಯ ವ್ಯವಸ್ಥೆ ಇರುತ್ತದೆ. ನಗರದ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯಲು ತೆರೆದ ಚರಂಡಿ ವ್ಯವಸ್ಥೆ ಮಾಡಲಾಗಿದೆ.

## ವಿದ್ಯುಚ್ಛಕ್ತಿ ಮತ್ತು ರಸ್ತೆ

ಶಿರಾ ನಗರಕ್ಕೆ ೧೯೪೧ ರಲ್ಲಿ ವಿದ್ಯುತ್ ಸಂಪರ್ಕ ದೊರಕಿದೆ. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ೨೦೦೮ರಲ್ಲಿದ್ದಂತೆ ನಗರ ವ್ಯಾಪ್ತಿಯೊಳಗೆ ಅಳವಡಿಸಲಾದ ಬೀದಿ ದೀಪಗಳ ಸಂಖ್ಯೆ ೧೫೪೮ ಆಗಿತ್ತು. ಇವುಗಳಲ್ಲಿ ೭೮೮ ಟ್ಯೂಬ್‌ಲೈಟ್‌ಗಳು, ೭೬೦ ಸೋಡಿಯಂ ವೇಪರ್ ಲೈಟ್‌ಗಳು ಮತ್ತು ೦೩ ಹೈಮಾಸ್ಟ್ ದೀಪಗಳು ಸೇರಿದ್ದವು. ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಘಟಕಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದೆ. ೨೦೧೧-೧೨ರಲ್ಲಿ ವಿದ್ಯುತ್ ಬಳಕೆಗಾಗಿ ರೂ. ೮೭.೩೭ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ನಗರದ ವ್ಯಾಪ್ತಿಯಲ್ಲಿ ಒಟ್ಟು ೧೩೦.೦೫ ಕಿ.ಮೀ ಉದ್ದದ ರಸ್ತೆಗಳಿದ್ದು, ಅದರಲ್ಲಿ ೪೬.೩೮ ಕಿ.ಮಿ ಉದ್ದದ ಟಾರ್ ರಸ್ತೆ, ೫೧.೩೩ ಕಿ.ಮೀ. ಉದ್ದದ ಮೆಟಲ್ ರಸ್ತೆ ಮತ್ತು ೩೨.೩೪ ಕಿ.ಮೀ. ಉದ್ದದ ಕಚ್ಚಾ ರಸ್ತೆ ಸಂಪರ್ಕವಿದೆ.

## ಇತರೆ ಸೌಲಭ್ಯಗಳು

ಸಾರ್ವಜನಿಕ ಸೌಕರ್ಯಕ್ಕಾಗಿ ಉದ್ಯಾನವನಗಳು, ಗ್ರಂಥಾಲಯ, ಕ್ರೀಡಾಂಗಣ, ಸಾರ್ವಜನಿಕ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು ಮುಂತಾದವುಗಳಿದ್ದವು. ನಗರ ವ್ಯಾಪ್ತಿ ಹಾಗೂ ಹೊರ ವಲಯಗಳಲ್ಲಿ ೧೧ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಸುಮಾರು ೭,೭೯೮ ಜನರು ವಾಸಿಸುತ್ತಿದ್ದಾರೆ. ಈ ನಿವಾಸಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸುವುದರ ಜೊತೆಗೆ ಮೂಲ ಸೌಲಭ್ಯಗಳನ್ನು ಒದಗಿಸಿದೆ. ಶಿರಾ ನಗರ ಸಭೆಯು ಗಳಿಸಿದ ಆದಾಯ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೪೨ ರಲ್ಲಿ ನೀಡಲಾಗಿದೆ ಹಾಗೂ ಶಿರಾ ನಗರಸಭೆಯು ವಿವಿಧ ಬಾಬ್ತು ಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೨.೪೩ ರಲ್ಲಿ ನೀಡಿದೆ.

**ಕೋಷ್ಟಕ ೧೨.೪೨ ಶಿರಾ ನಗರಸಭೆಯ ಆದಾಯ ಹಾಗೂ ವೆಚ್ಚದ ವಿವರ.**

(ರೂ. ಲಕ್ಷಗಳಲ್ಲಿ)

| ವರ್ಷ | ಆದಾಯ | ವೆಚ್ಚ |
|---|---|---|
| ೨೦೦೮-೦೯ | ೮೫೨.೭೯ | ೫೮೨.೬೪ |
| ೨೦೦೯-೧೦ | ೮೯೩.೧೨ | ೮೮೮.೨೧ |
| ೨೦೧೦-೧೧ | ೧೧೮೫.೨೮ | ೯೩೮.೪೦ |
| ೨೦೧೧-೧೨ | ೧೩೮೩.೦೮ | ೧೩೮೫.೨೪ |

**ಕೋಷ್ಟಕ ೧೨.೪೩ ಶಿರಾ ನಗರಸಭೆಯು ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ**

**(ರೂ. ಲಕ್ಷಗಳಲ್ಲಿ)**

| ಕ್ರ.ಸಂ | ವಿವರ | ೨೦೦೮–೦೯ | ೨೦೦೯–೧೦ | ೨೦೧೦–೧೧ | ೨೦೧೧–೧೨ |
|---|---|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೩೦.೨೯ | ೪೩.೩೯ | ೪೧.೧೮ | ೮೫.೩೯ |
| ೨ | ಸಾರ್ವಜನಿಕ ಕಾಮಗಾರಿ | ೧೮೯.೭೦ | ೨೧೩.೪೦ | ೨೦೩.೮೩ | ೫೨೪.೦೦ |
| ೩ | ನೀರು ಸರಬರಾಜು | ೭೪.೯೧ | ೮೧.೭ | ೨೭.೮೬ | ೪೪.೨೯ |
| ೪ | ರಸ್ತೆ ಮತ್ತು ದೀಪ ನಿರ್ವಹಣೆ | ೮೧.೩ | ೧೭೪.೬ | ೧೬೬.೭೮ | ೨೪೪.೦೦ |
| ೫ | ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ | ೮೭.೮೯ | ೨೨೯.೬೯ | ೨೯೪.೭೦ | ೨೬೮.೮೪ |
| ೬ | ಇತರೆ | ೧೪.೮ | ೩೧.೫೧ | ೭.೬೧ | ೩೮.೬೬ |

***